ಯೆಂದು ಹೇಳುವ ಹಾಗೆ ಆಗಿದೆ. ಆದ್ದರಿಂದ ದಯಮಾಡಿ ಸರ್ಕಾರದವರು ಇದರ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

BUDGET ESTIMATES

Supplementary Demands for Grants for the year 1973-74 (I instalment)

Demand No. 17, 20, 23, 27, 31, 33, 44, 45, and 54.

Sri M. Y. GHORPADE (Minister for Finance).— Madam Speaker, On the recommendation of the Governor, I beg to move:

"That a further sum not exceeding Rs. 100- be granted out of the Consolidated Fund of the State to defray the charges which will come in course of payment during the year ending the 31st day of March 1974 in respect of Demand No. 17 Education (Excluding Youth Services)".

MADAM SPEAKER.— Motion moved:

"That a further sum not exceeding Rs. 100/- be granted out of the Consolidated Fund of the State to defray the charges which will come in course of payment during the year ending the 31st day of March 1974 in respect of Demand No. 17 Education (Excluding Youth Services)."

All the other Demands are also before the House for discussion.

†ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂಥ ಈ ಹೆಚ್ಚುವರಿ ಬೇಡಿಕೆಗಳ ಬಗ್ಗೆ ನಾನು ವಿರೋಧ ಮಾಡುತ್ತಾ ಕೆಲವಾರು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ.

ಭಾರತದ ರಾಜ್ಯಾಂಗದಲ್ಲಿ ಒಂದು ಆರ್ಟಿಕಲ್ ಇದೆ. ಅದು ೨೦೫ನೇ ಆರ್ಟಿಕಲ್. ಅದರ ಪ್ರಕಾರ ತಮಗೆ ಗೊತ್ತಿರುವ ಹಾಗೆ ಎಲ್ಲ ರಾಜ್ಯಗಳು ಆಯಾ ರಾಜ್ಯದ ಪ್ರತಿವರ್ಷದ ಆಯವ್ಯಯಪಟ್ಟಿಯನ್ನು ತಯಾರುಮಾಡುವಾಗ ಆಯಾ ರಾಜ್ಯದ ಅಥವಾ ದೇಶದ ಉತ್ಪನ್ನ ಮತ್ತು ಖರ್ಚು— ಇವೆರಡನ್ನೂ ಕೂಡ

ವಿಚಾರಮಾಡಿ ತುಲನಾತ್ಮಕವಾಗಿಡತಕ್ಕ ಒಂದು ಪದ್ಧತಿ ಇದೆ. ಇದು ರಾಜ್ಯಾಂಗ ಬದ್ಧವಾದ ಪದ್ಧತಿಯೇನೋ ಹೌದು. ನಮ್ಮ ದೇಶದಲ್ಲಿ ಅದರಲ್ಲಿಯೂ ನಮ್ಮ ರಾಜ್ಯಮಟ್ಟಿಗೆ ಹೇಳುವುದಾದರೆ, ಈ ರೀತಿಯಾಗಿ ಹೆಚ್ಚುವರಿ ಬೇಡಿಕೆಗಳನ್ನು ಕೇಳತಕ್ಕ ಪದ್ಧತಿಯನ್ನು ಕಾನೂನು ಪ್ರಕಾರ ಮಾನ್ಯತೆ ಮಾಡುವುದಕ್ಕೆ ಸಾಧ್ಯವಿದ್ದರೂ, ಈ ಒಂದು ಪದ್ಧತಿಯನ್ನು ಬಿಡಬೇಕಾಗುತ್ತದೆ. ಏತಕ್ಕಾಗಿ ಅಂದರೆ, ಆಯವ್ಯಯ ಪಟ್ಟಿಯನ್ನು ತಯಾರುಮಾಡುವ ಕಾಲದಲ್ಲಿ ಒಂದು ವರ್ಷದ ಅಂದಾಜು ಖರ್ಚು ಎಷ್ಟಾಗುತ್ತದೆ, ನಿವ್ವಳ ಆದಾಯವೆಷ್ಟು ಎನ್ನುವ ಬಗ್ಗೆ ಇಲಾಖೆಗಳ ಪರಿಜ್ಞಾನ ಮತ್ತು ಅವರ ಒಂದು ಅನುಭವದ ಮೇಲೆ ಮತ್ತು ಅವರಿಂದ ಬರತಕ್ಕ ವಿಷಯಗಳ ಆಧಾರದ ಮೇಲೆಯೇ ಆಯವ್ಯಯ ಪಟ್ಟಿಯನ್ನು ತಯಾರು ಮಾಡತಕ್ಕದ್ದಾಗಿದೆ. ಆದ್ದರಿಂದ ಈಗ ಈ ಹೆಚ್ಚುವರಿ ಬೇಡಿಕೆಗಳನ್ನು ಈ ಸದನದ ಮುಂದೆ ಮಂಡಿಸಬೇಕಾದ ಸಂದರ್ಭ ಬಂದಾಗ ನಮಗೇನು ಗೊತ್ತಾಗುತ್ತದೆಂದರೆ, ಇಷ್ಟಿಷ್ಟು ಹಣವನ್ನು ಪ್ರತಿವರ್ಷವೂ ಕೇಳುವುದರಿಂದ ವರ್ಷದ ಆಯವ್ಯಯ ಪಟ್ಟಿಯನ್ನು ತಯಾರುಮಾಡಬೇಕಾದರೆ ಮುಂದಾಲೋಚನೆ ತಮ್ಮ ಇಲಾಖೆಗಳಿಗೆ ಬಹಳ ಕಡಿಮೆಯೆಂದೇ ಹೇಳಬೇಕಾಗುತ್ತದೆ ನಾನು ಈ ರೀತಿ ಹೇಳುವಾಗ ಕೆಲವು ಸಂದರ್ಭಗಳಲ್ಲಿ ಅಲ್ಪಸ್ವಲ್ಪ ಹಣವನ್ನು ಒದಗಿಸಿದ್ದರೆ, ಆಗ ಕೊಂಚಮಟ್ಟಿಗೆ ವ್ಯತ್ಯಾಸ ಬರುವುದು ಸಹಜ. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ, ಸಾಮಾನ್ಯವಾಗಿ ಆಯವ್ಯಯ ಪಟ್ಟಿಯನ್ನು ತಯಾರುಮಾಡಬೇಕಾದರೆ ಅಷ್ಟು ಕರಾರುವಾಕ್ಕಾಗಿ ಬಂಗಾರ ತೂಕಮಾಡುವ ಹಾಗೆ ನಮ್ಮಲ್ಲಿ ಅದನ್ನು ಇಡುವುದಕ್ಕಾಗುವುದಿಲ್ಲವೆಂಬುದನ್ನು ನಾನು ಮಾನ್ಯ ಮಾಡುತ್ತೇನೆ ಆದರೆ ಅದರ ಅರ್ಥ ಅದರ ಒಂದು ಸೀಮಿತವನ್ನು ಬಿಟ್ಟು, ಎಲ್ಲೆಯನ್ನು ಬಿಟ್ಟು ತುಂಬ ದೂರ ಇವರು ಹೋಗುತ್ತಿದ್ದಾರೆಂದು ನನಗನ್ನಿಸುತ್ತದೆ. ಇದರಿಂದ ಹಣಕಾಸಿನ ಒಂದು ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಬರತಕ್ಕ ಉತ್ಪನ್ನ ಮತ್ತು ಖರ್ಚುಮಾಡುವುದರಲ್ಲಿ ಜ್ಞಾನ ಕಡಿಮೆಯಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದನ್ನು ನಾನು ಹಲವಾರು ವರ್ಷಗಳಿಂದ ನನ್ನ ಒಂದು ಅನುಭವದ ಪ್ರಕಾರ ಇಲ್ಲಿ ನೋಡುತ್ತಿದ್ದೇನೆ. ಪ್ರತಿವರ್ಷವೂ ಈ ಸಭೆಯಲ್ಲಿ ಇವರು ಸಪ್ಲಿಮೆಂಟರಿ ಡಿಮ್ಯಾಂಡನ್ನು ತರತಕ್ಕುಂಥ ಪದ್ಧತಿ ಇದೆ. ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಸಪ್ಲಿಮೆಂಟರಿ ಡಿಮ್ಯಾಂಡ್ ಇಲ್ಲಿ ತಂದಿಡಬೇಕೆಂದೇನೂ ಇಲ್ಲ. ಮಾನ್ಯ ಹಣಕಾಸಿನ ಸಚಿವರು ನಮ್ಮ ರಾಜ್ಯದಲ್ಲಿ ಈ ರೀತಿಯಾಗಿ ಹೆಚ್ಚುವರಿ ಬೇಡಿಕೆಗಳನ್ನು ಇಡಲೇಬೇಕೆಂದು ಕಾನೂನು ಇಲ್ಲ. ಕೆಲವು ಸಂದರ್ಭಗಳಲ್ಲಿ ಅನ್‌ಫೋರಸೀನ್ ಎಕ್ಸ್‌ಪೆಂಡಿಚರ್ ಬಂದಾಗ ಮಾತ್ರ ಅವರ ಒಂದು ಯೋಜನೆಗಳಿಗೆ ವಿರೋಧ ಖರ್ಚುಮಾಡುವುದಕ್ಕೆ ಅವರ ಕೈಗೆ ಎಟಕಲಾರದ ಸಂದರ್ಭಗಳು ಉದ್ಭವಿಸಿದಾಗ ಮಾತ್ರ ಇಂತಹ ಹೆಚ್ಚುವರಿ ಬೇಡಿಕೆಗಳನ್ನು ಇಡುವುದಕ್ಕೆ ಸಾಧ್ಯವೇ ಹೊರತು ಮತ್ತೆ ಬೇರೆ ಯಾವ ಸಂದರ್ಭಗಳೂ ಅಲ್ಲವೆಂದು ನಾನು ಹೇಳಬೇಕಾಗಿದೆ. ಇವತ್ತು ಈ ಸರ್ಕಾರದವರು

ಒಂದು ದೊಡ್ಡ ಬೇಡಿಕೆಯನ್ನೇ ನಮ್ಮ ಮುಂದೆ ಇಟ್ಟಿದ್ದಾರೆ. ಆ ಬೇಡಿಕೆ ೧೧೪೧.೯೬ ಲಕ್ಷ ರೂಪಾಯಿಗಳದು.

ತಾವು ಒಟ್ಟಾರೆ ೧೧೪೧.೯೬ ಲಕ್ಷ ಹಣವನ್ನು ಕೇಳಿದ್ದೀರಿ. ಅದರಲ್ಲಿ ೯೬೪.೫೮ ಲಕ್ಷ ಸೆಂಟ್ರಲ್ ಗೌರ್ನಮೆಂಟಿನಿಂದ ಸಹಾಯ ರೂಪದಲ್ಲಿ ಬರುತ್ತದೆ ಎಂದು ಹೇಳಿದ್ದೀರಿ. ಆ ಮೇಲೆ ಬೈವೇ ಆಫ್ ರಿಸೀಟ್ಸ್ ೧೦೦ ಲಕ್ಷ ರೂಪಾಯಿ ಬರುತ್ತದೆ ಎಂದು ಹೇಳಿದ್ದೀರಿ. ಜನರಲ್ ರೆವೆನ್ಯೂವಿನಿಂದ ಸೆಟ್ ಔಟಗೋ ೧೧೭.೩೮ ಲಕ್ಷ ರೂಪಾಯಿ ಎಂದು ಹೇಳಿದ್ದೀರಿ. ಇಲ್ಲಿ ಒಂದು ಮಾತು ಹೇಳಿದ್ದೀರಿ. ಅವೆಲ್ಲವನ್ನೂ ಎಂಟಿಸಿಪೇಟೆಡ್ ಸೇವಿಂಗ್ಸ್‌ನಿಂದ ಕವರ್ ಮಾಡಬಹುದು ಎಂದು ಹೇಳಿದ್ದೀರಿ. ಸಾಮಾನ್ಯವಾಗಿ ತಾವು ಏನು ಕೆಲವು ಡಿಸ್ಯಾಂಡ್ಸ್ ಇಟ್ಟಿದ್ದೀರಿ, ಅವುಗಳಿಲ್ಲದರಲ್ಲಿಯೂ ಈ ರೀತಿ ಕವರ್ ಮಾಡಬಹುದು ಎಂದು ಹೇಳಿದ್ದೀರಿ. ನಾವು ಇಲ್ಲಿ ಎರಡು ವಿಷಯಗಳನ್ನು ಪರಿಗಣಿಸ ಬೇಕಾಗುತ್ತದೆ. ತಾವು ರಾಜ್ಯಾಂಗದ ೨೦೫ನೇ ಆರ್ಟಿಕಲ್ ಪ್ರಕಾರ ಈ ಸಪ್ಲಿಮೆಂಟರಿ ಎಸ್ಟಿಮೇಟನ್ನು ಇಡುವುದಕ್ಕೆ ಕಾರಣವೇನೆಂಬುದನ್ನು ಹೇಳಿದ್ದೀರಿ. ಅದು ಈ ರೀತಿ ಇದೆ.

(i) advances sanctioned from the Contingency Fund to cover expenditure on "New Services" etc., after the second and final instalment of Supplementary Estimates etc.,

(ii) for repayment of short term loans received form the Central Government, the repayment of which fall due during the year.

(iii) Repayment during the year.

ಒಂದನೆಯದು—ನ್ಯೂ ಸರ್ವೀಸಸ್....ಎರಡನೆಯದು—ಲೋನ್ ರೀಪೇಮೆಂಟ್ ಫ್ರಂ ಸೆಂಟ್ರಲ್ ಗೌರ್ನಮೆಂಟ್. ಈ ಎರಡು ಕಾರಣಗಳನ್ನು ಕೊಟ್ಟಿದ್ದೀರಿ. ಕೊನೆಗೆ The entire amount except the 'Charged' items can be met by reappropriation of anticipated savings under the major heads concerned by observing economy in expenditure", ಎಂದು ಹೇಳಿದ್ದೀರಿ. ನಿಮ್ಮಿಂದ ಈ ಮಾತು ಬರತಕ್ಕದ್ದು ಹೊಸದೇನೂ ಅಲ್ಲ..... ಎಕಾನಮಿ ಇನ್ ಎಕ್ಸ್‌ಪೆಂಡಿಚರ್ ಎಂಬುದು ಮಾನ್ಯ ಫೋರ್ಡೆಯವರು ಉಪ ಯೋಗಿಸತಕ್ಕ ಹೊಸ ಪದವೇನೂ ಅಲ್ಲ ಅಂದರೆ ನನ್ನು ಕೈಯಿಂದ ಏನೂ ಖರ್ಚಾ ಗುವದಿಲ್ಲ ಎನ್ನುವ ರೀತಿಯಲ್ಲಿ ಹೇಳಿ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿ ದ್ದಾರೆ. ನಾನು ಹೇಳುವುದೆನಂದರೆ, ಇದನ್ನು ಎಲ್ಲೆಲ್ಲಿ ಹಣ ಸೋರುತ್ತದೆ, ಅಲ್ಲಿ ಅದನ್ನು ತಡೆಗಟ್ಟಿ ಬರುವಂತೆ ಮಾಡಿದರೆ ಅದನ್ನು ರೀ ಪೇ ಮಾಡುವುದಕ್ಕೆ ಸಾಧ್ಯವಿದೆ. ಇದರಲ್ಲಿ ಹಲವಾರು ಬೇಡಿಕೆಗಳನ್ನು ಸೇರಿಸಿದ್ದಾರೆ. ನಾನು ಕೆಲವು ಉದಾಹರಣೆ ಹೇಳುತ್ತೇನೆ. ಕೆಲವೊಂದು ವಿಚಾರಗಳನ್ನು ಹೇಳದಿದ್ದರೆ ನಾನು ಇದರಲ್ಲಿ ತಪ್ಪು ಮಾಡಿದ ಹಾಗೆ ಆಗುತ್ತದೆ.

ಡಿಮ್ಯಾಂಡ ನಂ. ೩೩ ರಲ್ಲಿ ಫ್ಯಾಮಿನ ರಿಲೀಫ ಬಗ್ಗೆ ಕೆಲವು ಐಟಮುಗಳನ್ನು ತೋರಿಸಿದ್ದಾರೆ. ಇದು ಖಾದಿ ಮತ್ತು ಗ್ರಾಮೋದ್ಯೋಗ ಬೋರ್ಡಿಗೆ ಸಂಬಂಧ ಪಟ್ಟದ್ದು. ಇದರಲ್ಲಿ ಮೂರು ಐಟಮುಗಳ ಬಗ್ಗೆ ತಾವು ಹಣವನ್ನು ಕೇಳಿದ್ದೀರಿ.

Subsidising Spinning Wages	9.00	lakhs
Subsidised Weaving Wages	2.25	,,
Managerial Assistance for the Weaving Centres	0.18	,,
Total	11.43	,,

ಇದರಲ್ಲಿ ಗುಲ್ಬರ್ಗ, ರಾಯಚೂರು, ಬೀದಾರ ಮತ್ತು ಬಿಜಾಪುರ ಜಿಲ್ಲೆಗಳು ಸೇರಿವೆ. ಈ ಖಾದಿ ಮತ್ತು ವಿಲೇಜ ಇಂಡಸ್ಟ್ರೀಸ ಬೋರ್ಡು ಏನಿದೆ, ಇದರ ಕೈಯಲ್ಲಿ ಹಣ ಕೊಟ್ಟಾಗ ಹಿಂದೆ ಎಷ್ಟು ದುರುಪಯೋಗವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ, ಮಹಾತ್ಮಾ ಗಾಂಧೀಜೀಯವರು ಇದನ್ನು ಬೆಳೆಸಿ ಇದಕ್ಕೆ ಪ್ರೋತ್ಸಾಹ ಕೊಟ್ಟರೆ ಕೋಟಿಗಟ್ಟಲೆ ಜನರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಿದೆ ಎಂದು ಹೇಳಿ ಬೆಳೆಸಿದಂತಹ ಕೈಗಾರಿಕೆ ಇದು. ಇಲ್ಲಿಯವರೆಗೆ ಎಷ್ಟು ಹಣ ಈ ಬೋರ್ಡಿಗೆ ಕೊಟ್ಟಿದ್ದಾರೆ, ಆದರಲ್ಲಿ ಸಾಕಷ್ಟು ಮಟ್ಟಿಗೆ ಹಣ ದುರುಪಯೋಗವಾಗಿದೆ. ಈ ಖಾದಿ ಬೋರ್ಡಿನಲ್ಲಿ ಕೆಲಸ ಮಾಡತಕ್ಕಂತಹ ನೌಕರರು ಹೆಚ್ಚಿನ ಸಮಯ ಆಫೀಸುಗಳಲ್ಲಿಯೇ ಇರುವುದಿಲ್ಲ. ಕನಿಷ್ಟ ಕೂಲಿ ಜಾಸ್ತಿ ಮಾಡದಿದ್ದರೆ ಬರಗಾಲ ಪ್ರದೇಶದಲ್ಲಿ ಅನ್ಯಾಯವಾಗುತ್ತದೆ ಎಂದು ಹೇಳಿದರೂ ಕೂಡ ಇದರಲ್ಲಿ ಸಂಪೂರ್ಣವಾದ ದುರುಪಯೋಗವಾಗಿದೆ. ಹಿಂದೆ ಕೂಡ ಕೋಟಿಗಟ್ಟಲೆ ಹಣ ಇದಕ್ಕೆ ಕೊಟ್ಟಿದ್ದಾರೆ. ಹಿಂದೆ ಕೊಟ್ಟಂತಹ ಹಣದಿಂದ ಯಾವ ರೀತಿಯ ಪ್ರಯೋಜನ ಜನರಿಗೆ ಸಿಕ್ಕಿದೆ ಎಂಬುದು ನಮಗೆ ಬೇಕಾಗಿದೆ. ಆದ್ದರಿಂದ ಈ ೧೧.೪೩ ಲಕ್ಷ ಹಣ ಏನು ಇದಕ್ಕೆ ಕೊಡುತ್ತಿದ್ದಾರೆ, ಇದು ಅನ್ಯಾಯದ ಖರ್ಚಾಗಿ ಹೋಗುತ್ತದೆ ಎಂಬ ಅನುಮಾನ ನನಗೆ ಬರುತ್ತದೆ.

ಇನ್ನು ಡಿಮ್ಯಾಂಡ ನಂ. ೧೭—ವಿದ್ಯಾಭ್ಯಾಸ ಮತ್ತು ಯುವಜನ ಕಲ್ಯಾಣಕ್ಕೆ ಸಂಬಂಧಪಟ್ಟದ್ದು. ಇದರಲ್ಲಿ ನ್ಯಾಷನಲ್ ಫಿಟನೆಸ್ ಕೋರ್ಸನ್ನು ರಾಜ್ಯ ಸರಕಾರ ತೆಗೆದುಕೊಂಡು ಆಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಇಟ್ಟುಕೊಂಡು, ಖರ್ಚು ಮಾಡಿ ಆ ಮೇಲೆ ಕೇಂದ್ರ ಸರ್ಕಾರದಿಂದ ರೀ ಇಂಬರ್ಸಮೆಂಟ ಮಾಡಬಹುದು ಎಂದು ಇದೆ. ನಮಗೆ ಮೊದಲು ಖರ್ಚು ಬಂದರೂ ಕೇಂದ್ರ ಸರ್ಕಾರದಿಂದ ಅದನ್ನು ಕ್ಲೈಮು ಮಾಡ ಬಹುದು ಎಂದು ಹೇಳುತ್ತಾರೆ ಇವೊತ್ತಿನ ದಿವಸ ರಾಜ್ಯ ಸರ್ಕಾರದ ಮೇಲೆ ನನ್ನ ನೇರವಾದ ಆಪಾದನೆ ಇದೆ. ಇವರ ಆಡಳಿತದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಬಳ ಕೊಡುವುದಕ್ಕೆ ಸಹ ಹಣವಿಲ್ಲ ಎನ್ನುವ ಆಪಾದನೆ ಬಂದಿದೆ. ಹಿಂದೆ ಯಾವುದೇ ಪಕ್ಷ ಆಡಳಿತದಲ್ಲಿದ್ದರೂ ಸಹ ಈ ರೀತಿಯ ಒಂದು ಆಪಾದನೆ ಬಂದಿರಲಿಲ್ಲ. ಅಂದ ಮಾತ್ರಕ್ಕೆ ಹಿಂದಿನ ಸರ್ಕಾರ ಎಲ್ಲವೂ ಫೈನ್ ಸರ್ಕಾರ ಎಂದು ನಾನು ಹೇಳುವುದಿಲ್ಲ. ಆದರೆ ಈ ಮಾತು ನಿಮ್ಮ ಸರ್ಕಾರ ಬಂದ ಮೇಲೆ ಬಂದಿದೆ. ಕೇಂದ್ರ ಸರ್ಕಾರ

ದವರು ಹಣ ಕೊಡುತ್ತಾರೆ ಎಂದು ಹೇಳುತ್ತಾ ಹೋಗುತ್ತಾರೆ. ಆದರೆ ನಮ್ಮ ಸರ್ಕಾರಕ್ಕೆ ಜನೇ ಹಣಕಾಸಿನ ಆಯೋಗದವರು ಸುಮಾರು ೯೦ ಕೋಟಿ ರೂಪಾಯಿ ಯಷ್ಟು ಕಡಿಮೆ ಹಣ ಕೊಟ್ಟಿದ್ದಾರೆ.

ಚುನಾವಣೆ ಆದಕೂಡಲೇ ಜನೇ ಆರ್ಥಿಕ ಆಯೋಗದಲ್ಲಿ ಕೇಂದ್ರ ಸರ್ಕಾರ ದವರು ನ-ಗೆ ೯೦ ಕೋಟಿ ರೂಪಾಯಿ ಹಣ ಏನು ಕಡಿಮೆ ಕೊಟ್ಟಿದ್ದಾರೆ ಅದನ್ನು ನಾವು ಕೇಂದ್ರ ಸರ್ಕಾರದಿಂದ ಇಲ್ಲಿಗೆ ತಂದು ಹಾಕುತ್ತೇವೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುತ್ತೇವೆ ಎಂದು ಈಗ ಆಡಳಿತವನ್ನು ನಡೆಸ ತಕ್ಕವರು ಹೇಳಿದ್ದಾರೆ. ಆ ಹಣವನ್ನು ಕೇಂದ್ರದಿಂದ ಪಡೆಯುವುದಕ್ಕೆ ಈ ಸರ್ಕಾರದವರು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ? ಎಷ್ಟು ಹಣವನ್ನು ಇವರು ಕೇಂದ್ರ ಸರ್ಕಾರದಿಂದ ಪಡೆದಿದ್ದಾರೆ ಎಂದು ನಾನು ಕೇಳುತ್ತೇನೆ. ಹಿಂದೆ ಈ ಸರ್ಕಾರದವರು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲನೆ ಮಾಡುವಾಗ ಈ ರಾಜ್ಯಕ್ಕೆ ಓವರ್ ಡ್ರಾಫ್ಟ್ ಇದೆ, ಮತ್ತು ರಿಜರ್ವ ಬ್ಯಾಂಕಿಗೆ ಕೊಡಬೇಕಾದ ಹಲವಾರು ಸಾಲಗಳು ಇವೆ, ಅವುಗಳನ್ನು ತೀರಿಸುತ್ತಿದ್ದೇವೆ ಎಂದು ಹೇಳಿದ್ದರು. ಈಗ ಓವರ್ ಡ್ರಾಫ್ಟ್ ಅನ್ನು ತೀರಿಸಿ ಕೈ ತೊಳೆದುಕೊಂಡಿದ್ದೇವೆ, ಕೇಂದ್ರ ಸರ್ಕಾರ ದಿಂದ ಪಡೆದಿದ್ದ ಹಲವಾರು ಸಾಲಗಳನ್ನು ತೀರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದ್ದಾರೆ. ಓವರ್ ಡ್ರಾಫ್ಟ್ ತೀರಿಸುವುದರ ಜೊತೆಗೆ ರಾಜ್ಯದಲ್ಲಿ ಹಲವಾರು ಕೆಲಸ ಕಾರ್ಯಗಳು ಆಗಬೇಕಾಗಿತ್ತು. ಆದರೆ ಆ ಕೆಲಸ ಕಾರ್ಯಗಳು ಆಗದೆ ಅವು ನಿಂತು ಹೋಗಿವೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದ ಏನು ಓವರ್ ಡ್ರಾಫ್ಟ್ ಮಾಡಿಕೊಂಡಿದ್ದರು ಅದನ್ನು ಸಂಪೂರ್ಣವಾಗಿ ತೀರಿಸಬೇಕು ಎಂದು ಕೇಂದ್ರ ಸರ್ಕಾರದವರು ಪ್ರತಿಯೊಂದು ರಾಜ್ಯ ಸರ್ಕಾರಗಳಿಗೂ ಒತ್ತಡ ತಂದು ಆದೇಶವನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರು ಸರ್ಕಾರವನ್ನು ತೃಪ್ತಿ ಮಾಡುವುದಕ್ಕೆ ಓವರ್ ಡ್ರಾಫ್ಟ್ ಬಗ್ಗೆ ಹಣವನ್ನು ಕೊಡುತ್ತಾ ಹೋದರು. ಈ ನೀತಿಯನ್ನು ನಾನು ಒಪ್ಪುತ್ತೇನೆ. ಆದರೆ ಇವರು ಓವರ್ ಡ್ರಾಫ್ಟ್ ಕೊಟ್ಟನಂತರ ಅದರ ಉಪಯೋಗವನ್ನು ಪಡೆಯುವ ಪ್ರಯತ್ನ ಮಾಡಬೇಕಾಗಿತ್ತು. ಆ ರೀತಿ ರಾಜ್ಯ ಸರ್ಕಾರದವರು ರಿಜರ್ವ ಬ್ಯಾಂಕಿನಿಂದ ಎಷ್ಟು ಉಪಯೋಗವನ್ನು ಪಡೆದಿದ್ದಾರೆ ಎನ್ನುವ ಅಂಕಿ ಅಂಶಗಳು ನಮಗೆ ಬೇಕಾಗಿದೆ. ಬೇರೆ ರಾಜ್ಯಗಳವರು ಕೇಂದ್ರ ಸರ್ಕಾರವನ್ನು ತೃಪ್ತಿ ಪಡಿಸುವುದಕ್ಕೆ ಓವರ್ ಡ್ರಾಫ್ಟ್ ತೀರಿಸುವುದಕ್ಕೆ ಅರ್ಧ ಹಣವನ್ನು ಕೊಟ್ಟು ರಾಜ್ಯದಲ್ಲಿ ಹಲವಾರು ಕೆಲಸಗಳನ್ನು ಮಾಡಿಸಿದ್ದಾರೆ. ಅವರು ಸಂಪೂರ್ಣವಾಗಿ ಓವರ್ ಡ್ರಾಫ್ಟ್ ತೀರಿಸುವುದಕ್ಕೆ ಹೋಗಿಲ್ಲ. ಅವರು ಬುದ್ಧಿ ವಂತರಾಗಿ ಎಷ್ಟು ಕೊಡಬೇಕೋ ಅಷ್ಟು ಕೊಟ್ಟು ಅದು ತಮ್ಮ ಕೆಲಸ ಕಾರ್ಯಗಳಿಗೆ ಉಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಓವರ್ ಡ್ರಾಫ್ಟ್ ಫೆಸಿಲಿಟೀಸ್ ಅನ್ನು ಮುಂದುವರಿಸುತ್ತಿದ್ದಾರೆ. ಹೀಗಿರುವಾಗ ನಮ್ಮ ರಾಜ್ಯ ಸರ್ಕಾದವರು ಓವರ್

ಡ್ರಾಫ್ಟ್ ಅನ್ನು ಸಂಪೂರ್ಣವಾಗಿ ತೀರಿಸಿದ್ದೇವೆ ಎನ್ನುವ ಮಾತನ್ನು ಹೇಳುವಾಗ ಮುಂದೆ ಕೇಂದ್ರ ಸರ್ಕಾರದಿಂದಾಗಲೀ ರಿಜರ್ವ್ ಬ್ಯಾಂಕಿನಿಂದಾಗಲೀ ಯಾವ ರೀತಿಯ ಸಹಾಯವನ್ನು ನಿರೀಕ್ಷಣೆ ಮಾಡಿದ್ದಾರೆ ಅಥವಾ ಈಗಾಗಲೇ ಏನು ಸಹಾಯವನ್ನು ನಮ್ಮ ಸರ್ಕಾರದವರು ಅವರಿಂದ ಗಡೆದಿದ್ದಾರೆ ಎನ್ನುವ ಅಂಕಿ ಅಂಶಗಳು ನಮಗೆ ಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರು ಹೇಳುವ ಅಭಿಪ್ರಾಯ ಸರಿಯಲ್ಲ ನಾವು ಓವರ್ ಡ್ರಾಫ್ಟ್ ತೀರಿಸಿದ್ದು ೭೨ ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದವರು ನಮಗೆ ೬೧ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ವೇಸ ಅಂಡ್ ಮೀನ್ಸ್ ಅಡ್ವಾನ್ಸು ಕೊಟ್ಟರು. ಮಿತಿಮೀರಿ ಓವರ್‌ಡ್ರಾಫ್ಟ್ ಮಾಡುವುದಕ್ಕೆ ಯಾವ ರಾಜ್ಯ ಸರ್ಕಾರಕ್ಕೂ ಅಧಿಕಾರ ಇಲ್ಲ. ನಾವು ೭೧ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಮಾಡುವುದಕ್ಕೆ ಅಧಿಕಾರವಿದೆ. ಅದಕ್ಕೆ ಮೀರಿ ನಾವು ಓವರ್ ಡ್ರಾಫ್ಟ್ ಮಾಡುವುದಕ್ಕೆ ಬರುವುದಿಲ್ಲ. ಈ ಒಂದು ಪರಿಸ್ಥಿತಿ ಕಾನೂನು ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಹಳೆಯ ಕಾಲದಲ್ಲಿ ಓವರ್ ಡ್ರಾಫ್ಟ್ ಯದ್ವಾ ತದ್ವಾ ಬೆಳೆದು ಬಂದಿತ್ತು. ಕೇಂದ್ರ ಸರ್ಕಾರದವರು ಅದನ್ನು ತಡೆಗಟ್ಟಿ ಯಾವ ರಾಜ್ಯ ಸರ್ಕಾರಗಳೂ ಕೂಡ ನಿರ್ದಿಷ್ಟ ಮಿತಿ ಏನು ಕೇಂದ್ರ ಸರ್ಕಾರದವರು ಮಾಡಿದ್ದಾರೆ ಅದನ್ನು ಮೀರಿ ಜಾಸ್ತಿ ಓವರ್ ಡ್ರಾಫ್ಟ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ತಿಳಿಸಿದ್ದಾರೆ. ಎಲ್ಲಾ ರಾಜ್ಯಗಳಲ್ಲಿಯೂ ಹೆಚ್ಚು ಓವರ್ ಡ್ರಾಫ್ಟ್ ಫೆಸಿಲಿಟೇಸ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಹೇಳುವ ವಾದ ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಮಾನ್ಯ ಅರ್ಥ ಸಚಿವರ ನಾನು ಒಪ್ಪುವುದಾದರೂ ಕೂಡ ಈಗ ನಮ್ಮ ರಾಜ್ಯಕ್ಕೆ ೭೨ ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಮಿತಿ ಇದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಬೇರೆ ರಾಜ್ಯ ಗಳವರು ಏನು ಮಾಡಿದ್ದಾರೆ ಎಂದರೆ ಅವರು ಓವರ್ ಡ್ರಾಫ್ಟ್ ಕೆಲವು ಪರ್ಸೆಂಟ ತೋರಿಸಿ ಬಾಕಿಯದನ್ನು ಉಪಯೋಗಮಾಡಿಕೊಂಡು ಕೇಂದ್ರ ಸರ್ಕಾರದ ನೆರವನ್ನೂ ಹೆಚ್ಚು ಪಡೆದಿದ್ದಾರೆ. ನಮ್ಮ ಸರ್ಕಾರದವರು ಓವರ್‌ಡ್ರಾಫ್ಟ್ ತೀರಸಿದ ಮೇಲೆ ಕೇಂದ್ರ ಸರ್ಕಾರದ ಹಲವಾರ ಸಾಲಗಳನ್ನು ತೀರಿಸಿದ ಮೇಲೆ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ಆರ್ಥಿಕ ಸಹಾಯ ಬರಬೇಕಾಗಿತ್ತೋ ಅಷ್ಟು ಆರ್ಥಿಕ ಸಹಾಯ ಬಂದಿಲ್ಲ ಎಂದು ಸರ್ಕಾರದವರು ಮಾಡಿದ ಕೆಲವು ಹೇಳಿಕೆಯಿಂದ ಗೊತ್ತಾಗಿದೆ.

ಇನ್ನೊಂದು ವಿಷಯ ಬರಗಾಲ ಪೀಡಿತ ಪ್ರದೇಶಗಳಿಗೆ ರಾಜ್ಯದ ಉತ್ತರ ಕರ್ನಾಟದ ಹಲವಾರು ಜಿಲ್ಲೆಗಳಲ್ಲಿ ಬಂದಂತ ಭೀಕರ ಕ್ಷಾಮ ಪರಿಹಾರಕ್ಕಾಗಿ ರಾಜ್ಯ ಸರ್ಕಾರದವರು ಹಲವಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಪ್ರಮೇಯ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಕೇಂದ್ರ ಸರ್ಕಾರದವರು ನಮಗೆ ಒಂದು ಬ್ಲಾಂಕ ಚೆಕ್ ಕೊಟ್ಟಿದ್ದಾರೆ ನಾವು ಬರಗಾಲ ಪರಿಹಾರ ಕಾಮಗಾರಿಗಳಿಗೆ

ಎಷ್ಟು ಬೇಕಾದರೂ ಖರ್ಚು ಮಾಡಬಹುದು ಎಂದು ಹೇಳಿದ್ದಾರೆ. ಆ ಮಾತು ಇಡೀ ಸದನಕ್ಕೆ ನೆನಪಿರಬಹುದು. ಆ ಮಾತು ಸಣ್ಣ ಮಾತಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಆಂಧ್ರಕ್ಕೆ ಹೋದಾಗ ಅಲ್ಲಿ ಹೈದರಾಬಾದ ವಿಮಾನ ನಿಲ್ದಾಣದಲ್ಲಿ ಎರಡನೇ ಕಂತಿನಲ್ಲಿ ೨೪ ಕೋಟಿ ರೂಪಾಯಿಗಳನ್ನು ಆಂಧ್ರಪ್ರಾಂತದ ಬರಗಾಲ ಪ್ರದೇಶಕ್ಕೆ ಖರ್ಚು ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದೇವೆ ಎಂದು ತಿಳಿಸಿದರು. ಮಹಾರಾಷ್ಟ್ರದಲ್ಲಿ ಬರಗಾಲ ಬಂದಾಗ ಮಹಾರಾಷ್ಟ್ರದ ಪಾರ್ಲಿಮೆಂಟ ಸದಸ್ಯರು ಪಾರ್ಲಿಮೆಂಟನಲ್ಲಿ ಬಹಳ ದೊಡ್ಡ ಗಲಾಟೆ ಎಬ್ಬಿಸಿದರು. ಮಹಾರಾಷ್ಟ್ರದಲ್ಲಿ ಭೀಕರ ಕ್ಷಾಮ ಬಂದಿದೆ. ನಮಗೆ ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ಕೊಡಬೇಕು ಎಂದು ಹೇಳಿದಾಗ ಶ್ರೀಮತಿ ಇಂದಿರಾಗಾಂಧಿಯವರು ಪಾರ್ಲಿಮೆಂಟನಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಮಹಾರಾಷ್ಟ್ರದಲ್ಲಿ ಬಂದಿರತಕ್ಕ ಕ್ಷಾಮ ನಿವಾರಣೆಗೋಸ್ಕರ ನಾವು ಕೇಂದ್ರ ಸರ್ಕಾರ ಎಲ್ಲಾ ಇಲಾಖೆಗಳಿಗೂ ಸೂಚನೆ ಕೊಟ್ಟಿದ್ದೇವೆ ಅವರಿಗೆ ಎಷ್ಟು ಹಣ ಜಾಸ್ತಿ ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಹಣವನ್ನು ಕೊಡುವುದಕ್ಕೆ ಅವರಿಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದವರು ಏನು ಸಹಾಯ ಮಾಡಿದ್ದಾರೆಯೋ ಅದಕ್ಕಿಂತ ಹೆಚ್ಚಿನ ಸಹಾಯವನ್ನು ಮಹಾರಾಷ್ಟ್ರಕ್ಕೆ ಕೊಟ್ಟಿದ್ದಾರೆ ಎನ್ನುವುದನ್ನು ನಮ್ಮ ಸರ್ಕಾರದವರು ನೆನಪಿನಲ್ಲಿ ಇಟ್ಟುಕೊಂಡಿದ್ದಾರೆಯೇ? ಶ್ರೀಮತಿ ಇಂದಿರಾಗಾಂಧಿಯವರು ಮಹಾರಾಷ್ಟ್ರ ಸರ್ಕಾರಕ್ಕೆ ಎಷ್ಟು ಹಣ ಸಹಾಯ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಹಣ ಸಹಾಯ ಮಾಡುವುದಕ್ಕೆ ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಸೂಚನೆ ಕೊಟ್ಟ ಹಾಗೆ ನಮ್ಮ ಮೈಸೂರು ರಾಜ್ಯಕ್ಕೆ ಸಹಾಯ ಮಾಡಲು ಏತಕ್ಕೆ ಇಂದಿರಾಗಾಂಧಿಯವರು ಹೇಳಲಿಲ್ಲ ಎಂದು ನಮ್ಮ ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಬಹುಷಃ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರ ಪಡೆದಿರತಕ್ಕ ಹಣ ೯ ಕೋಟಿ ರೂಪಾಯಿಗಳಿಗೆ ಮೀರಿಲ್ಲ. ಆಂಧ್ರಕ್ಕೆ ೩೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮಹಾರಾಷ್ಟ್ರಕ್ಕೆ ಹಲವಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೀಗಿರುವಾಗ ನಮ್ಮ ರಾಜ್ಯ ಸರ್ಕಾರ ಕಡಿಮೆ ಹಣವನ್ನು ಕೇಂದ್ರದಿಂದ ಪಡೆಯುವುದಕ್ಕೆ ಕಾರಣವೇನು? ಇವರ ಶಕ್ತಿಹೀನತೆ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕೆ ಸರಿಯಾದ ಉತ್ತರ ಇದೆ. ಅದನ್ನು ನಾನು ಆ ಮೇಲೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ನಮಗೆ ಕೇಂದ್ರ ಸರ್ಕಾರದವರು ಒಂದು ಬ್ಲಾಂಕ ಚೆಕ್ ಕೊಟ್ಟಿದ್ದಾರೆ. ನಾವು ಎಷ್ಟು ಹಣವನ್ನು ಬೇಕಾದರೂ ಬರಗಾಲ ಪರಿಹಾರಕ್ಕೆ ಖರ್ಚು ಮಾಡ

ಬಹುದು. ಇಷ್ಟು ಹಣ ಕೊಡಿ ಎಂದು ಕೇಳಬೇಡಿ, ಆ ರೀತಿ ಕೇಳಿದರೆ ಅದು ಅಲ್ಲಿಗೆ ನಿಂತುಹೋಗುತ್ತದೆ ನಮಗೆ ಎಷ್ಟು ಕೇಳಿದರೂ ಕೊಡುತ್ತಾರೆ ಎಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದ ಹಣಕಾಸಿನ ರಾಜ್ಯ ಸಚಿವರಾದ ಶ್ರೀ ಕೆ. ಆರ್. ಗಣೇಶ ಅವರು ಮೈಸೂರು ರಾಜ್ಯಕ್ಕೆ ಬ್ಲಾಂಕ ಚೆಕ್ ಕೊಟ್ಟಿಲ್ಲ ಇಷ್ಟೇ ಕೋಟಿ ರೂಪಾಯಿಗಳನ್ನು ಮಾತ್ರ ಕೂಡುತ್ತೀವೆ ಎಂದು ಹೇಳಿದ್ದಾರೆ. ಈ ದಂಧ್ವ ನೀತಿ ಏತಕ್ಕೆ? ಕೇಂದ್ರ ಸರ್ಕಾರದವರು ನಮಗೆ ಎಷ್ಟು ಕೋಟಿ ರೂಪಾಯಿಗಳನ್ನು ಬೇಕಾದರೂ ಕೊಡುವುದಕ್ಕೆ ತಯಾರಾಗಿದ್ದಾರೆ; ನಮಗೆ ಬ್ಲಾಂಕ ಚೆಕ್ ಕೊಟ್ಟಿದ್ದಾರೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದ ಮಾತನ್ನು ನಂಬಿ ನಿರಾಶೆ ಆಯಿತು. ಹಣ ಇಲ್ಲದೆ ಹಣಕಾಸಿನ ಸಚಿವರು ದೆಹಲಿ ಯಾತ್ರೆಯನ್ನು ಎಷ್ಟು ಸಾರಿ ಮಾಡಿದ್ದಾರೆ?

2-30 P. M.

ಕೇಂದ್ರ ಸರ್ಕಾರದಿಂದ ಹಣವನ್ನು ಪಡೆಯಲು ಮಾನ್ಯ ಆರ್ಥಿಕ ಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಎಷ್ಟುಸಲ ಹೋಗಿ ಬಂದಿದ್ದಾರೆ ಮತ್ತು ಎಷ್ಟು ಹಣವನ್ನು ಪಡೆದುಕೊಂಡು ಬಂದಿದ್ದಾರೆಂಬ ಬಗ್ಗೆ ನಮಗೆ ಅಂಕಿ ಅಂಶಗಳು ಬೇಕಾಗಿದೆ. ಏಕೆಂದರೆ ಈ ಹಿಂದೆ ಕೇಂದ್ರ ಸರ್ಕಾರದವರು ನಮಗೆ ಬ್ಲಾಂಕ ಚೆಕ್ ಕೊಟ್ಟಿದ್ದಾರೆಂದು ಸರ್ಕಾರದವರು ಹೇಳಿದ್ದರು. ಆದಕಾರಣ ನಮಗೆ ವಿವರ ಬೇಕಾಗಿದೆ ಈ ಸರ್ಕಾರದವರಿಗೆ ಈಗ ತಮ್ಮ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣ ಇಲ್ಲವಾಗಿದೆ ಸರ್ಕಾರದವರು ನೌಕರರಿಗೆ ಯಾವ ರೀತಿ ಸಂಬಳ ಕೊಟ್ಟರು ಎಂಬುದು ನಮಗೆ ಗೊತ್ತಿದೆ. ಲ್ಯಾಂಡ ಡೆವಲಪ್‌ಮೆಂಟ್ ಬ್ಯಾಂಕ್, ಹೌಸಿಂಗ ಕಾರ್ಪೊರೇಷನ್, ಹೌಸಿಂಗ ಬೋರ್ಡ ಮುಂತಾದ ಹಲವಾರು ಬೋರ್ಡಗಳು ಮತ್ತು ಕಾರ್ಪೊರೇಷನ್‌ಗಳಿಗೆ ಸರ್ಕಾರದವರು ಕೊಟ್ಟ ಹಣ ಏನಿತ್ತು, ಆ ಹಣದಲ್ಲಿ ಹಲವಾರು ಪರ್ಸೆಂಟಿನಷ್ಟು ಹಣವನ್ನು ಹಿಂದಕ್ಕೆ ತೆಗೆದುಕೊಂಡು ಸಂಬಳವನ್ನು ಕೊಟ್ಟಿದ್ದಾರೆ. ಈ ರೀತಿ ಹಣವನ್ನು ಅಲ್ಲಿಂದ ವಿತ್‌ಡ್ರಾ ಮಾಡಿ ಸಂಬಳ ಕೊಟ್ಟರುವುದರಲ್ಲಿ ಏನು ಹೆಗ್ಗಳಿಕೆ ಬಂತು ಎಂದು ನಾನು ಇವೊತ್ತಿನ ದಿವಸ ಕೇಳಬೇಕಾಗಿದೆ. ಇವರ ಒಂದು ಆಡಳಿತದ ಕಾಲದಲ್ಲಿ ರಾಜ್ಯಕ್ಕೆ ಬರಗಾಲ ಬಂತು. ಆ ಸಮಯದಲ್ಲಿ ಕೇಂದ್ರ ಸರ್ಕಾರದ ಸಹಾಯವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲಿಲ್ಲ. ಇದು ಇವರ ಶಕ್ತಿ ಹೀನತೆಯನ್ನು ತೋರಿಸುತ್ತದೆ. ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣವನ್ನು ಪಡೆಯುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ. ಆದರೆ ಈಗ ಇವರು ಆರ್ಥಿಕ ಖರ್ಚಿನ ಮೇಲೆ ದಿಗ್ಬಂಧನ ಹಾಕಿ ಹಣ ಉಳಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇವರ ಇಕಾನಮಿ ಮೆಜರ ಯಾವ ರೀತಿ ಇದೆ ಎಂದರೆ, ಉಪಾಧ್ಯಾಯರುಗಳನ್ನು ಮತ್ತು ಡಾಕ್ಟರಗಳನ್ನು ನೇಮಕ ಮಾಡುವುದನ್ನು ನಿಲ್ಲಿಸಿ ಹಣ ಉಳಿಸುತ್ತಿರುವುದು. ನಾಳೆ ಏನಾದರೂ ಪರ್ಸೆಂಟೇಜ ಆಫ್ ಪಾಸಿಂಗ ಕಡಿಮೆ ಬಂದರೆ ವಿದ್ಯಾ ಮಂತ್ರಿಗಳ ಮೇಲೆ ಆಪಾದನೆ ಬರುತ್ತದೆಯೇ ಹೊರತು ಉಪಾ

ಧ್ಯಾಯರುಗಳು ಇಲ್ಲದೆ ಇದ್ದರಿಂದ ವಿದ್ಯಾರ್ಥಿಗಳು ಪಾಸಾಗಲಿಲ್ಲ ಎಂಬುದು ಆಗ ಗನುನಕ್ಕೆ ಬರುವುದಿಲ್ಲ. ಸರ್ಕಾರದವರು ಇಂತಹ ವಿಷಯದಲ್ಲಿ ಮಿತವ್ಯಯ ಮಾಡು ವುದು ಸರಿಯಲ್ಲ. ಮುಖ್ಯವಾಗಿ ಎಲ್ಲಿ ಖರ್ಚಿನ ಮೇಲೆ ದಿಗ್ಬಂಧನ ಹಾಕಬೇಕೋ ಅಲ್ಲಿ ಹಾಕಬೇಕು ಮುಖ್ಯವಾಗಿ ಅಧಿಕಾರಿಗಳು ಲೋಲುಪ್ತ ಜೀವನಕ್ಕಾಗಿ ಏನು ಹಣ ಖರ್ಚು ಮಾಡುತ್ತಿದ್ದಾರೆ ಅದರ ಮೇಲೆ ಮಿತಿ ಹಾಕಬೇಕು. ಸರ್ಕಾರೀ ನೌಕರರ ಸಂಬಳ ಸಾರಿಗೆಯನ್ನು ಸರ್ಕಾರದವರು ಹೆಚ್ಚು ಮಾಡಿದಾಗ ಕ್ಲಾಸ–೩ ಮತ್ತು ಕ್ಲಾಸ–೪ ನೌಕರರು ಏನಿದ್ದಾರೆ, ಇವರ ಸಂಬಳಸಾರಿಗೆಯನ್ನು ೫ ರೂಪಾಯಿ ನಷ್ಟು ಜಾಸ್ತಿ ಮಾಡಿದರೆ ಕ್ಲಾಸ–೧ ಅಧಿಕಾರಿಗಳ ಸಂಬಳಸಾರಿಗೆಯನ್ನು ನೂರರಿಂದ ನೂರೈವತ್ತರ ವರೆಗೆ ಜಾಸ್ತಿ ಮಾಡುತ್ತಾರೆ. ಇದರಿಂದ ದೊಡ್ಡ ದೊಡ್ಡ ಸ್ಥಾನದಲ್ಲಿ ರುವ ಅಧಿಕಾರಿಗಳಿಗೆ ಅನುಕೂಲವಾಗುತ್ತದೆಯೇ ಹೊರತು ಸಣ್ಣ ಸಣ್ಣ ವರ್ಗದ ನೌಕರರಿಗೆ ಯಾವ ಅನುಕೂಲವೂ ಆಗುವುದಿಲ್ಲ. ನಿಮ್ಮ ಒಂದು ಆಡಳಿತದಲ್ಲಿ ಆಹಾರವಸ್ತುಗಳ ಬೆಲೆಗಳು ಗಗನಕ್ಕೆ ಏರಿವೆ. ಈ ರೀತಿ ಏರಿದಾಗ ತುಟ್ಟಿಭತ್ಯವನ್ನು ಹೆಚ್ಚಿಸುವ ಕಾಲಕ್ಕೆ ನಾಯುವವರಿಗೆ ನೀರು ಬಿಟ್ಟಂತೆ ೫ ರೂಪಾಯಿಗಳಷ್ಟನ್ನು ಮಾತ್ರ ಕೆಳವರ್ಗದ ನೌಕರರಿಗೆ ಹೆಚ್ಚು ಮಾಡುತ್ತೀರಿ. ಇದೇ ಸಂದರ್ಭದಲ್ಲಿ ಕ್ಲಾಸ-೧ ಅಧಿಕಾರಿಗಳು ಮಾತ್ರ ಹೆಚ್ಚಿನ ಅನುಕೂಲವನ್ನು ಪಡೆದುಕೊಳ್ಳುತ್ತಾರೆ. ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ಇಕಾನಮಿ ಮೆಜರ್ಸನ್ನು ಈ ಅಧಿಕಾರಿಗಳ ಸಂಬಳದಮೇಲೆ ತಂದು ಹಣ ಉಳಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಮುಖ್ಯವಾಗಿ ದೊಡ್ಡ ದೊಡ್ಡ ಸ್ಥಾನಗಳಲ್ಲಿರುವ ಅಧಿಕಾರಿಗಳ ಸಂಬಳದ ಮೇಲೆ ಮಿತಿ ಹಾಕಬೇಕು. ಈಗ ೨ ಸಾವಿರದಿಂದ ೪ ಸಾವಿರದ ವರೆಗೆ ಸಂಬಳ ಪಡೆಯುವ ಅಧಿಕಾರಿಗಳು ಎನಿದ್ದಾರೆ, ಇವರ ಸಂಬಳದ ಮೇಲೆ ಮಿತಿ ಹಾಕಬೇಕು. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಗೊಳಿಸಬೇಕೆಂಬ ಉತ್ಕಟೇಚ್ಛೆಯಿದ್ದರೆ ಒಂದು ಸಾವಿರಕ್ಕಿಂತ ಹೆಚ್ಚು ಸಂಬಳವನ್ನು ಯಾರಿಗೂ ಕೊಡುವದಿಲ್ಲವೆಂದು ಒಂದು ಆರ್ಡರನ್ನು ಹೊರಡಿಸಿ. ನಾನು ಹೇಳುತ್ತಿರುವುದು ಇನ್‌ಕ್ರೀಮೆಂಟಿಂಗ ಅಲೋಯನ್ಸ್ ಸೇರಿ ಸಾವಿರ ರೂಪಾಯಿಗಳ ಮೇಲೆ ಕೊಡಬಾರದೆಂದು. ಈಗ ಅಧಿಕಾರಿಗಳಿಗೆ ದೊಡ್ಡ ದೊಡ್ಡ ಸೌಧಗಳನ್ನು ವಾಸಕ್ಕೆ ಕೊಟ್ಟಿದ್ದೀರಿ; ಕಾರು ಕೊಟ್ಟಿದ್ದೀರಿ. ಮತ್ತು ಬೇಕಾದಷ್ಟು ಅಧಿಕಾರ ಕೊಟ್ಟಿದ್ದೀರಿ. ಈ ದೃಷ್ಟಿಯಿಂದ ನೋಡಿದರೆ ಸಾಮಾನ್ಯ ವರ್ಗ ದವರ ಜೀವನಕ್ಕಿಂತ ಇವರ ಜೀವನ ಮಟ್ಟ ಹತ್ತು ಪಾಲು ಜಾಸ್ತಿ ಇದೆ. ಈ ಕಾರಣ ದಿಂದ ಇವರ ಖರ್ಚಿನ ಮೇಲೆ ದಿಗ್ಬಂಧನ ಹಾಕಬೇಕು ಎಂದು ನಾನು ಹೇಳುತ್ತಿರುವುದು. ನಿಮಗೆ ಶಕ್ತಿ ಇದ್ದರೆ ಈ ಬಗ್ಗೆ ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ. ಅದಕ್ಕೆ ನಾವು ಸಂಪೂರ್ಣವಾದ ಬೆಂಬಲ ಕೊಡುತ್ತೇವೆ. ಈ ಹೆಚ್ಚುವರಿ ಬೇಡಿಕೆಯ ಮೇಲೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರು ಮಂಡಿಸಿರುವ ಈ ಬೇಡಿಕೆಗಳನ್ನು ವಿರೋಧ ಮಾಡಬೇಕಾಗುತ್ತದೆ. ಇವರನ್ನು ನಂಬಿ ಇವರ ಕೈಗೆ ಇಷ್ಟೊಂದು ಹಣವನ್ನು ಕೊಡುವುದಕ್ಕಾಗುವುದಿಲ್ಲ. ಮುಖ್ಯವಾಗಿ

ಇವರ ಆಯವ್ಯಯ ಪಟ್ಟಿಯೇ ತಪ್ಪಿನಿಂದ ಕೂಡಿದ್ದಾಗಿದೆ ಎಂದು ಹೇಳಿ ಈ ಎಲ್ಲ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ಸಿದ್ದಪ್ಪ (ಅರಸೀಕೆರೆ) — ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಆರ್ಥಿಕ ಸಚಿವರು ಮಂಡಿಸಿರುವ ಹೆಚ್ಚುವರಿ ಬೇಡಿಕೆಗಳಲ್ಲಿರುವ ಡಿಮ್ಯಾಂಡ ನಂಬರ ೨೩, ಡಿಮ್ಯಾಂಡ ನಂಬರ ೩೩, ಡಿಮ್ಯಾಂಡ ನಂಬರ ೪೪ ಮತ್ತು ಡಿಮ್ಯಾಂಡ ನಂಬರ ೫೪, ಇವು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ, ಈ ಡಿಮ್ಯಾಂಡಗಳ ಬಗ್ಗೆ ಮಾನ್ಯ ಅರ್ಥ ಸಚಿವರ ಮತ್ತು ಸರ್ಕಾರದ ಒಂದು ಧೋರಣೆ ಏನಿದೆ ಎಂಬ ಬಗ್ಗೆ ಮತ್ತು ಈ ದಿಶೆಯಲ್ಲಿ ಸಹಕಾರ ಸಂಘಗಳ ಬಗ್ಗೆ ಏನು ಧೋರಣೆ ಇದೆ ಎಂಬ ಬಗ್ಗೆ ಹೇಳಬಯಸುತ್ತೇನೆ. ಈ ಬೇಡಿಕೆಗಳ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳು ಕೊಟ್ಟಿರತಕ್ಕಂಥ ಅಂಶಗಳನ್ನು ಪರಿಶೀಲನೆ ಮಾಡಿ ನೋಡುವುದಾದರೆ, ಇಲ್ಲಿ ಹೊಸ ದಾಗಿ ಅನೇಕ ಸಂಸ್ಥೆಗಳನ್ನು ರಚನೆ ಮಾಡಿ, ಅವುಗಳಿಗೆ ಷೇರ ಕ್ಯಾಪಿಟಲ್, ಲೋನ, ಸಬ್ಸಿಡಿ ಮತ್ತು ಅನೇಕ ವಿಧವಿಧ ಬಾಬುಗಳಿಗೆ ವೆಚ್ಚವನ್ನು ನಿರೀಕ್ಷೆ ಮಾಡಿ ಹಣವನ್ನು ಕೊಟ್ಟಿದ್ದಾರೆ. ಈ ಪೈಕಿ ಕೇಂದ್ರಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಸಬ್ಸಿಡಿ, ಲೋನ ಇತ್ಯಾದಿ ಬರುವುದರಿಂದ ನಮಗೆ ಲುಕ್ಸಾನಾಗುವದಿಲ್ಲವೆಂದು ಹೇಳಿದ್ದಾರೆ. ೫ಳನೇ ಡಿಮ್ಯಾಂಡನಲ್ಲಿ ಹೇಳುತ್ತಾರೆ; ನಾವು ಫುಡ್ ಕಾರ್ಪೊರೇಷನ್ ರಚನೆ ಮಾಡುತ್ತಿದ್ದೇವೆ; ಇದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ನಮ್ಮ ಸರ್ಕಾರದಿಂದಲೂ ಸಹ ಷೇರ ಕ್ಯಾಪಿಟಲ್ ಕೊಡುತ್ತೇವೆ, ಮುಂದೆ ಈ ಹಣವನ್ನು ಫುಡ್ ಕಾರ್ಪೊರೇಷನ್ ನವರು ಆಹಾರವನ್ನು ವಿತರಣೆ ಮಾಡುವುದರ ಮೂಲಕ ಉಳಿತಾಯ ಮಾಡುವುದರಲ್ಲಿ ಜಮಾ ಮಾಡುತ್ತಾರೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ, ಈಗಾಗಲೇ ರಚಿಸಿರತಕ್ಕ ಫುಡ್ ಕಾರ್ಪೊರೇಷನ್ ಕೆಲಸವನ್ನು ವೇರ–ಹೌಸಿಂಗ ಕಾರ್ಪೊರೇಷನ್‌ನವರು ಮಾಡುತ್ತಿದ್ದಾರೆ. ಆಹಾರವನ್ನು ಶೇಖರಣೆ ಮಾಡುವುದು, ಮಿಲ್ ಮಾಡಿಸುವುದು, ಪ್ರೊಸೆಸ್ ಮಾಡಿಸುವುದು, ಸ್ಟೋರೇಜ ಮಾಡುವುದು ಹಂಚಿಕೆ ಮಾಡುವುದು ಇವೆಲ್ಲಾ ಕಾರ್ಯವನ್ನು ನಿರ್ವಹಣೆ ಮಾಡಲು ಫುಡ್ ಕಾರ್ಪೊರೇಶನ್‌ಗೆ ೨೫ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ. ಆದರೆ ಈ ಎಲ್ಲ ಕೆಲಸಗಳನ್ನು ವೇರ–ಹೌಸಿಂಗ ಕಾರ್ಪೊರೇಷನ್ ಅವರು ಮಾಡುತ್ತಿರುವುದರಿಂದ ಡೂಪ್ಲಿಕೇಷನ್ ಆಫ್ ವರ್ಕ ಆಗುವದಿಲ್ಲವೇ ಎಂಬು ಕೇಳುತ್ತೇನೆ. ಈಗ ತಾವೇನು ನಾನಾ ರೀತಿಯ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿದ್ದೀರಿ, ಅವುಗಳಲ್ಲಿ ಒಬ್ಬರು ಮಾಡುವ ಕೆಲಸವನ್ನೇ ಮತ್ತೊಬ್ಬರು ಮಾಡುತ್ತಿದ್ದಾರೆ. ಈಗ ಫುಡ್ ಕಾರ್ಪೊರೇಷನ್‌ನವರು ಆಹಾರವನ್ನು ಶೇಖರಣೆ ಮಾಡಲು ಗೋಡೌನಗಳನ್ನು ಕಟ್ಟಿಸುವ ವಿಚಾರವನ್ನು ಇಟ್ಟುಕೊಂಡಿದ್ದಾರೆ. ಆದರೆ ಈಗಾಗಲೇ ವೇರ್‌ಹೌಸಿಂಗ ಕಾರ್ಪೊರೇಷನ್ ಅವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ದೊಡ್ಡ ದೊಡ್ಡ ತಾಲ್ಲೂಕ ಕೇಂದ್ರಗಳಲ್ಲಿ ಆಹಾರವನ್ನು ಕೆಡದಂತೆ ಶೇಖರಣೆ ಮಾಡಲು ಗೋಡೌನಗಳನ್ನು ಕಟ್ಟಿಸಿದ್ದಾರೆ. ಆದರೆ ಇದೇ ಬದುಕನ್ನು ಕರ್ನಾಟಕ ಫುಡ್ ಕಾರ್ಪೊರೇಶನ್ ಅವರಿಗೆ ವಹಿಸಿದ್ದೀರಿ. ಅಂದರೆ ಆಹಾರವನ್ನು

ಶೇಖರಣೆ ಮಾಡುವುದು, ಅದು ಕೆಡದಂತೆ ನೋಡಿಕೊಳ್ಳುವುದು ಮತ್ತು ವಿತರಣೆ ಮಾಡುವ ಕೆಲಸವನ್ನು ಅವರಿಗೆ ವಹಿಸಿದ್ದೀರಿ.

ಇದೇ ರೀತಿ ಕೋ ಆಪರೇಟಿವ್ ಗೋಡೌನುಗಳಿಗೆ, ಸಹಕಾರಿ ಗೋಡೌನುಗಳಿಗೆ ಕೋಲಿ-ಪರೇಟೀವ ಫೆಡರೇಷನ್‌ಗಳ ಮೂಲಕ ದವಸಗಳನ್ನು ಸ್ಟೋರು - ಮಾಡಲು ಹಣ ಹಂಚಿದ್ದೀರಿ. ಹೀಗಾಗಿ ಇದಕ್ಕಾಗಿ ನಿಮ್ಮ ಹಣಕಾಸಿನ ವೆಚ್ಚವೇನಾಗುತ್ತದೆ ಎನ್ನುವುದನ್ನು ನೀವೇನಾದರೂ ಯೋಜನೆ ಮಾಡಿದ್ದೀರಾ? ಒಂದೇ ಕೆಲಸಗಳನ್ನು ಮಾಡುವ ಅನೇಕ ರೀತಿಯ ಸಂಸ್ಥೆಗಳನ್ನು ಇಂದು ಮಾಡುತ್ತಿದ್ದಾರೆ, ಇದೇ ರೀತಿಯ ಕೆಲಸಗಳನ್ನು ಮಾಡಲು ರಾಜ್ಯದಲ್ಲಿ ಈಗ ವೇರ್ ಹೌಸಿಂಗು ಕಾರ್ಪೊರೇಷನ್ ಎಂದು ಮಾಡಲಾಗಿದೆ, ಇದಲ್ಲದೆ ಈಚೆಗೆ ಕರ್ನಾಟಕ ಫುಡ್ ಕಾರ್ಪೊರೇಷನ್, ನ್ಯಾಷನಲ್ ಸೀಡ್ಸ ಕಾರ್ಪೊರೇಷನ್ ಇವುಗಳೆಲ್ಲಾ ಗೋಡೌನುಗಳನ್ನು ಮಾಡಿ ಕೊಂಡಿವೆ. ಎಲ್ಲ ಕಡೆಗಳಲ್ಲೂ ದವಸಗಳ ಶೇಖರಣೆ ಹಾಗೂ ವಿತರಣೆ ಇತ್ಯಾದಿ ಕೆಲಸಗಳನ್ನು ಮಾಡಬೇಕೆಂದು ಇಂದು ರಾಜ್ಯದಲ್ಲಿ ಅನೇಕ ವಿಧವಾದ ಕಾರ್ಪೊರೇಷನ್‌ಗಳನ್ನು ಮಾಡುತ್ತಿದ್ದೀರಿ. ಇದರ ಕೆಲಸಗಳು ಮುಗಿದ ನಂತರ ಮುಂದೆ ಇವುಗಳಲ್ಲಿ ಕೆಲವನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ. ಇಂತಹ ಕಾರ್ಪೊರೇಷನ್‌ಗಳನ್ನು ರಚನೆ ಮಾಡುವಾಗ ಅದರ ಕೆಲಸಗಳನ್ನು ಮಾಡಲು ಇದಕ್ಕೆ ಬೇಕಾದ ಸಬ್ಬಂದಿ ವರ್ಗವನ್ನೂ ನೇಮಿಸಿರುತ್ತಾರೆ. ಕಾರ್ಪೊರೇಷನ್‌ಗಳನ್ನು ಮುಚ್ಚಬೇಕಾದ ಸಂದರ್ಭ ಬಂದರೆ ಇಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರನ್ನೂ ರಿಟ್ರೆಂಚು ಮಾಡಬೇಕಾಗಿ ಬರುತ್ತದೆ. ಇಂತಹ ಕಾರ್ಪೊರೇಷನ್ನುಗಳನ್ನು ರಾಜ್ಯದಲ್ಲಿ ಹೆಚ್ಚು ಹೆಚ್ಚಾಗಿ ಮಾಡುತ್ತಿರುವುದರ ಉದ್ದೇಶ ನಿಮಗೆ ಬೇಕಾದವರನ್ನು ಇದರಲ್ಲಿ ಜುನಾಯಿಸಿಕೊಳ್ಳಲು ಒಂದು ಅವಕಾಶ ಮಾಡಿಕೊಂಡಿದ್ದೀರಿ. ಈಗಾಗಲೇ ನಮ್ಮ ಸರಕಾರದವರು ಹೇಳುವ ಹಾಗೆ ಇಂದು ಇರುವ ಆಹಾರದ ಅಭಾವದ ಪರಿಸ್ಥಿತಿ ಇನ್ನು ಒಂದೆರಡು ತಿಂಗಳಲ್ಲಿ ಮುಗಿಯುತ್ತದೆ, ಇದು ಮುಗಿದ ಮೇಲೆ ಈಗ ನೀವು ಮಾಡಿಕೊಂಡಿರುವ ಗೋಡೌನುಗಳಲ್ಲಿ ಬರೀ ಹೆಗ್ಗಣಗಳನ್ನು ಸಾಕಿಕೊಂಡು ಇಂತಹ ಹೆಗ್ಗಣಗಳನ್ನು ಸ್ಟೋರು ಮಾಡಲು ಮತ್ತು ಅವನ್ನು ನೋಡುವ ಪರಿಸ್ಥಿತಿ ಬರುತ್ತದೆ. ಈ ಗೋಡೌನುಗಳಲ್ಲಿ ನೇಮಿಸಿಕೊಂಡಿರುವ ನೌಕರ ವರ್ಗದವರ ಗತಿಯೇನು? ಇವರನ್ನೆಲ್ಲಾ ರಿಟ್ರೆಂಚು ಮಾಡಿದರೆ ಮುಂದೆ ಅವರು ಯಾವ ರೀತಿ ಜೀವನ ಮಾಡ ಬೇಕು? ಇದರ ಬಗ್ಗೆ ಸರಕಾರದವರು ಏನಾದರೂ ವಿಚಾರ ಮಾಡಿದ್ದಾರೆಯೇ? ಉದಾಹರಣೆಯಾಗಿ ಇಲ್ಲಿ ಹೇಳಬೇಕಾದರೆ ಇಂದು ಸಹಕಾರ ಸಂಸ್ಥೆಗಳಲ್ಲಿ ಫೂಲ್ ಆಫ್ ಆಫೀಸರ್ಸ್ ಎನ್ನುವ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದರಂತೆ ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕುಗಳ ಯೂನಿಟ್ಟು, ಕೋ-ಆಪರೇಟೀವ್ ಅಪೆಕ್ಸ ಸೊಸೈಟಿಗೆ ಒಂದು ಯುನಿಟ್ಟು, ಹೋಲ್‌ಸೇಲ್ ಕೋ-ಆಪರೇಟೀವ್ ಸ್ಟೋರ್ಸ್ ಫೆಡರೇಷನ್‌ಗೆ ಒಂದು ಫೂಲ್ ಆಫೀಸರ್ಸಗಳು ಎಂದು ಮಾಡಿ ಇದಕ್ಕಾಗಿ ಸರಕಾರ ಸಾಕಷ್ಟು ಸಬ್‌ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ. ಇದರಂತೆ ಇಂದು ಲ್ಯಾಂಡು ಡೆವಲ್ಪಮೆಂಟು ಬ್ಯಾಂಕುಗಳಲ್ಲಿ ಆಪೆಕ್ಸ ಬ್ಯಾಂಕುಗಳತ, ಪ್ರೈಮೈರಿಲ್ಯಾಂಡ್

ಮಾರ್ಟ್‌ಗೇಜು ಬ್ಯಾಂಕುಗಳಲ್ಲಿ ನೇಮಕವಾಗಿರುವ ಪೂಲ್ ಆಫ್ ಆಫೀಸರುಗಳಿಗಾಗಿ ಸಂಬಳವನ್ನು ಕೊಡಲು ಸರಕಾರ ಸಬಸಿಡಿ ರೂಪದಲ್ಲಿ ಸಹಾಯ ಮಾಡುತ್ತಿದೆ. ಇವೊತ್ತಿನ ದಿನ ಏನಾಗಿದೆ ಎಂದರೆ ಇಲ್ಲಿರುವವರು ಸೆಕ್ಯೂರ್ಡ್ ಸ್ಟಾಫ್ ಅಲ್ಲ. ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕಿಗೆ ಕೊಟ್ಟಿರುವ ಹಣ ದುರುಪಯೋಗವಾವರೆ ಇಲ್ಲಿಂದ ರಿಕವರಿ ಮಾಡಲು ಅವಕಾಶವೇ ಇಲ್ಲ ಮತ್ತು ಇವರಿಗೆ ಯಾವ ರೀತಿಯಾದ ಸರ್ವಿಸ ಕಂಡಿಷನ್‌ಗಳೂ ಇಲ್ಲ, ಈಗ ಕೋ ಆಪರೇಟೀವ್ ಅಪೆಕ್ಸು ಬ್ಯಾಂಕುಗಳಲ್ಲಿ ಇರುವ ಪೂಲ್ ಅಫ್ ಆಫೀಸರುಗಳನ್ನು ಅಲ್ಲಿನ ಸಂಸ್ಥೆಗಳವರು ರೆಗ್ಯುಲರೈಸು ಮಾಡಿ ಬಿಟ್ಟಿದ್ದಾರೆ ಮತ್ತು ಇವರ ಸರ್ವಿಸ್ಸು ಕಂಡಿಷನ್ಸುಗಳನ್ನು ಸಿಗದಿ ಮಾಡಿದ್ದಾರೆ. ಆದರೆ ಇತರ ಸಂಸ್ಥೆಗಳಲ್ಲಿ ನೇಮಕ ಮಾಡಿರುವ ನೌಕರರುಗಳಿಗೆ ಯಾವ ರೀತಿಯಾದ ರೆಗ್ಯುಲರೈಸೇಷನ್ ಮಾಡಿಲ್ಲ. ಕೆಲವು ಲ್ಯಾಂಡು ಡೆವಲಪಮೆಂಟು ಬ್ಯಾಂಕುಗಳಲ್ಲಿ ಇರುವ ನೌಕರರುಗಳನ್ನು ರೆಗ್ಯುಲರೈಸು ಮಾಡಿ ಅವರನ್ನು ಇಟ್ಟುಕೊಳ್ಳುವ ಪರಿಸ್ಥಿತಿಯೂ ಇಲ್ಲ. ಇದರಿಂದಾಗಿ ಇಲ್ಲಿರುವ ನೌಕರರುಗಳು ಬಹು ದಿಗ್ಭ್ರಾಂತರಾಗಿದ್ದಾರೆ. ಇಲ್ಲಿರುವಂತಹ ನೌಕರರುಗಳು ಬಿ. ಎ., ಎಂ. ಎ., ಎಲ್. ಎಲ್. ಬಿ. ಇಂತಹ ಉನ್ನತ ಡಿಗ್ರಿಗಳನ್ನು ಪಡೆದ ನುರಿತಂತಹವರು ಆಡಿಟ್ ಪರೀಕ್ಷೆಗಳನ್ನು ಪಾಸು ಮಾಡಿ ಪರಿಣತಿ ಹೊಂದಿದವರು ಬೇರೆ ಕಡೆಗಳಲ್ಲಿ ಹೆಚ್ಚು ಸಂಬಳ ಸಿಕ್ಕಿದರೂ ಅಲ್ಲಿಗೆ ಹೋಗದೆ ಇಲ್ಲೇ ೬೦೦ ಇಲ್ಲವೇ ೯೦೦ ರೂಪಾಯಿಗಳಷ್ಟು ಸಂಬಳ ಸಾರಿಗೆಗಳನ್ನು ಪಡೆಯುತ್ತಿದ್ದಾರೆ. ಮುಂದೆ ಇವರನ್ನು ಬರತಫ್ ಮಾಡಿದರೆ ಇವರ ಮಕ್ಕಳ ಗತಿಯೇನು? ಇವರ ಸಂಬಳ ಸಾರಿಗೆಗಳನ್ನು ಸರಿಯಾಗಿ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೀರಾ? ಈಚೆಗೆ ನಮ್ಮ ರಾಜ್ಯದಲ್ಲಿ ಕರ್ನಾಟಕ ಫುಡ್ ಕಾರ್ಪೊರೇಷನ್ ಕೋ-ಆಪರೇಟೀವ ಮಾರ್ಕೆಟಿಂಗು ಫೆಡರೇಷನ್, ಸಿಡ್ಸ್ ಮಾರ್ಕೆಟಿಂಗು ಕಾರ್ಪೊರೇಷನ್ ಮತ್ತು ಪುಲಕೋಟಿಯಲ್ಲಿ ಕೋಆಪರೇಟೀವ್ ಸ್ಪಿನಿಂಗು ಮಿಲ್ಸು ಎಂದು ಇಂತಹ ಸಂಸ್ಥೆಗಳನ್ನು ಮಾಡಿ ಸರಕಾರ ಇವಕ್ಕೆ ಬೇಕಾದಷ್ಟು ಹಣ ಸಹಾಯ ಮಾಡಿವೆ. ನಾನು ಇವಕ್ಕೆ ಹಣ ಕೊಡಬೇಡ ಎಂದು ಹೇಳುವುದಿಲ್ಲ. ಆದರೆ ಒಂದೇ ರೀತಿಯಾದ ಕೆಲಸಗಳನ್ನು ಮಾಡುವಂತಹ ಸಂಸ್ಥೆಗಳಾಗಿ ಬೇರೆ ಬೇರೆ ಸಂಸ್ಥೆಗಳನ್ನು ಮಾಡಿ ಇವಕ್ಕೆ ಸಿಬ್ಬಂದಿಗಳನ್ನು ನೇಮಕ ಮಾಡಿ ಅವರಿಗೆ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಸಂಬಳ ಸಾರಿಗೆಗಳನ್ನು ಕೊಡುತ್ತಿಲ್ಲ. ಇಲ್ಲಿರುವ ಸಿಬ್ಬಂದಿಯವರಿಗೆ ಸರಿಯಾದ ಸರ್ವಿಸ್ಸು ಕಂಡಿಷನ್ಸುಗಳು ಇಲ್ಲ, ಇದರಿಂದಾಗಿ ಕೆಲವು ಸಹಕಾರ ಸಂಸ್ಥೆಗಳು ಉಪಯುಕ್ತವಾದ ಕೆಲಸಗಳನ್ನು ಮಾಡಲಾಗುವದಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸರಕಾರದಲ್ಲಿ ಈಗ ಅನೇಕ ಕಾರ್ಪೊರೇಷನ್‌ಗಳಾಗಿವೆ. ಇವುಗಳೆಲ್ಲಾ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಲಾಭ ವಿಲ್ಲದೆ ಇರುವಂತಹ ಸಂಸ್ಥೆಗಳಿಂದ ದೇಶಕ್ಕೆ ಹಾಗೂ ಸರಕಾರಕ್ಕೆ ಇದರಿಂದ ಆಟ್ ಪಾರ್ ಎನ್ನುವಂತೆ ಕೆಲಸಗಳನ್ನು ನಿರ್ವಹಿಸಲಾಗುವದಿಲ್ಲ. ಇದಕ್ಕೆ ಕಾರಣ ಇಲ್ಲಿರುವ ಸಿಬ್ಬಂದಿ ವರ್ಗದವರು ನಿಷ್ಕಾವಂತರಾಗಿ ಕೆಲಸ ಮಾಡುವದಿಲ್ಲ. ಇವರಿಗೆ ಇವರ ಜೀವನವನ್ನು ನಡೆಸಿಕೊಳ್ಳಲು ಅನುಕೂಲವಾಗುವಂತೆ ಇತರ ಇಲಾಖೆಗಳ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡುವಂತೆ ಇಲ್ಲಿ

ಕೊಡುತ್ತಿಲ್ಲ. ಇವರನ್ನು ಮೊದಲು ಕೆಲಸಕ್ಕೆ ತೆಗೆದುಕೊಳ್ಳುವಾಗ ಇತರ ಇಲಾಖೆಗಳಂತೆ ಇವರಿಗೂ ಸಂಬಳಸಾರಿಗೆಗಳನ್ನು ಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಆದರೆ ಕಾರ್ಪೊರೇಷನ್ ಮುಂದೆ ಏನಾದರೂ ಲಾಭದಾಯಕವಾಗಿ ಕೆಲಸ ಮಾಡಲಿಲ್ಲ ಎಂದರೆ ಇಲ್ಲವೇ ಸಹಕಾರ ಸಂಸ್ಥೆಗಳು ಲಾಭದಾಯಕವಾಗಿ ಕೆಲಸ ಮಾಡದೇ ಹೋದರೆ ಇಲ್ಲಿಗೆ ನೇಮಕ ಮಾಡಿರುವ ಸಿಬ್ಬಂದಿ ವರ್ಗವನ್ನು ಬೇರೆಕಡೆ ವರ್ಗಮಾಡಲೇ ಬೇಕಾಗುತ್ತದೆ ಇದರಿಂದಾಗಿ ಸರಕಾರ ಅಡಳಿತ ಯಂತ್ರ ಶಿಥಿಲವಾಗುತ್ತದೆ, ಇದನ್ನು ಸರಕಾರ ಗಮನಿಸಬೇಕಾದುದು ಅತ್ಯಗತ್ಯ. ಇದಕ್ಕಾಗಿ ನಾನು ಸಲಹೆ ಮಾಡುವದು ಇಂದು ರಾಜ್ಯದಲ್ಲಿ ವಿವಿಧ ರೀತಿಯ ಕಾರ್ಪೊರೇಷನ್‌ಗಳನ್ನು ಒಂದೇ ರೀತಿಯಾದ ಕೆಲಸಗಳನ್ನು ಮಾಡಲು ರಚನೆ ಮಾಡುವ ಅವಶ್ಯಕತೆ ಇದೆಯೇ ಎನ್ನುವುದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ಸ್ಟೋರೇಜು ಮಾಡಲು, ಹಾಗೂ ವಿತರಣೆ ಮಾಡಲು ಪ್ರೊಸೆಸಿಂಗ ಮಾಡಲು ಈಗಿರತಕ್ಕ ವೇರ ಹೌಸಿಂಗು ಕಾರ್ಪೊರೇಷನ್ನಿಗೆ ಇದರ ಎಲ್ಲ ಕೆಲಸಗಳನ್ನು ವಹಿಸುವದು ಸರಿಯಾಗಿರುತ್ತದೆ. ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಮತ್ತು ಇದರಲ್ಲಿ ಒಳ್ಳೇ ತಜ್ಞರೂ ಇದ್ದಾರೆ. ಇದೇ ರೀತಿಯ ಕೆಲಸಗಳನ್ನು ಮಾಡಲು ಬೇರೆ ಕಾರ್ಪೊರೇಷನ್‌ಗಳು ಬೇಕೆಂದು ಮಾಡುವದಕ್ಕೆ ಹೋಗಬೇಡಿ ಎಂದು ಸಲಹೆ ಮಾಡುತ್ತೇನೆ. ಬೇರೆ ಬೇರೆ ರೀತಿಯಾಗಿ ಗೋಡೌನುಗಳನ್ನು ಮಾಡುವದರಿಂದ ಸರಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಸರಕಾರದ ವೆಚ್ಚವನ್ನು ಕಡಿಮೆ ಮಾಡಲು ಸಹಾಯಕವಾಗುವಂತೆ ಈಗಿರುವ ವೇರಹೌಸಿಂಗು ಕಾರ್ಪೊರೇಷನ್‌ನನ್ನು ಮಾತ್ರ ಇಟ್ಟುಕೊಂಡು ಇತರ ವಿಫಲವಾದ ಫುಡ್ ಕಾರ್ಪೊರೇಷನ್ ಸೀಡ್ಸ ಕಾರ್ಪೊರೇಶನ್ ಎಂದು ಬೇರೆ ಬೇರೆ ಕಾರ್ಪೊರೇಷನ್‌ಗಳನ್ನು ರಚನೆ ಮಾಡಲು ಹೋಗಬೇಡಿ. ಇಂದು ಮಾಡಿರುವ ಸೀಡ್ಸ ಕಾರ್ಪೊರೇಷನ್‌ನಲ್ಲಿ ಬೀಜಗಳನ್ನು ಸರಿಯಾಗಿ ಸೋಡಿ ಸರ್ಟಿಫೈ ಮಾಡುವಂತಹ ಜನರು ಯಾರೂ ಇದರಲ್ಲಿಲ್ಲ. ಫುಡ್ ಕಾರ್ಪೊರೇಷನ್ ಎಂದು ಮಾಡಿ ಈಗ ರೈತರಿಂದ ಲೆವಿ ಬತ್ತ ಯಾವ ರೀತಿ ವಸೂಲು ಮಾಡಿ ಸ್ಟೋರು ಮಾಡುತ್ತಿದ್ದಾರೆ ಎನ್ನುವದನ್ನು ನಾವು ನೋಡಿದ್ದೇನೆ. ಒಂದು ಕಡೆ ಗೋಡೌನಿನಲ್ಲಿ ಹಸೀ ಬತ್ತವನ್ನೇ ರೈತರಿಂದ ಲೆವಿಯಾಗಿ ವಸೂಲು ಮಾಡಿ ಅದನ್ನು ಶೇಖರಣೆ ಮಾಡಿಟ್ಟಿದ್ದರು, ಕೆಲವು ದಿನಗಳ ನಂತರ ಆ ಭತ್ತವನ್ನು ಹಂಚಲು ತೆಗೆದಾಗ ಅಲ್ಲಿದ್ದ ಬತ್ತವೆಲ್ಲಾ ಮೊಳಕೆ ಬಂದು ಬೂಷ್ಟು ವಾಸನೆ ಬಂದು ಕೆಟ್ಟು ಹೋಗಿತ್ತು. ಇದಕ್ಕಾಗಿ ಇಲ್ಲಿ ಸರಿಯಾದ ತರಬೇತಿ ಹೊಂದಿದ ಕೆಲಸಗಾರರು ಇಲ್ಲಿರಬೇಕು. ಇಂತಹ ಕಾರ್ಪೊರೇಟು ಬಾಡಿಗಳನ್ನು ರಚನೆ ಮಾಡುವದರಿಂದ ನಿಮಗೆ ಒಳ್ಳೇ ಹೆಸರು ಬರುವದಿಲ್ಲ. ಇದಕ್ಕೆ ಬರೀ ಹಣ ವ್ಯಯವಾಗುತ್ತದೆಯೇ ಹೊರತು ಬೇರೇನು ಅನುಕೂಲವಾಗುವದಿಲ್ಲ, ಇದಕ್ಕಾಗಿ ನಾನು ಸೂಚನೆ ಮಾಡುವುದು ಒಂದೇ ಕೆಲಸಗಳನ್ನು ಮಾಡಲು ಅನೇಕ ರೀತಿಯ ಸಂಸ್ಥೆಗಳಿಂದು ಮಾಡುವುದನ್ನು ನಿಲ್ಲಿಸಬೇಕು. ಇಂತಹ ಸಂಸ್ಥೆಗಳಲ್ಲಿ ನೇಮಕ ಮಾಡುವ ಸಿಬ್ಬಂದಿ ವರ್ಗ

ದವರಿಗೆ ಸರಿಯಾದ ಸಂಬಳ ಸಾರಿಗೆಗಳನ್ನು ಇತರರಿಗೆ ಕೊಡುವಂತೆ ನಿಗದಿ ಮಾಡಿ ಇವರ ಸರ್ವಿಸ್ಸು ಕಂಡಿಷನ್‌ಗಳನ್ನೂ ಉತ್ತಮಪಡಿಸಬೇಕು ಮತ್ತು ಇವರು ತಮ್ಮ ಜೀವನವನ್ನು ಇತರ ಸರಕಾರಿ ಅಧಿಕಾರಿಗಳು ಯಾವ ರೀತಿ ಮಾಡಲು ಸಹಾಯ ಮಾಡಿರುತ್ತಾರೋ ಅದೇ ರೀತಿ ಇವರಿಗೂ ಸರಕಾರ ಸಹಾಯ ಮಾಡಬೇಕು, ಮತ್ತು ಈಗ ಸರಕಾರ ಎಲ್ಲ ಸಂಸ್ಥೆಗಳಲ್ಲೂ ಪೂಲ್ ಆಫ್ ಆಫಿಸರ್ಸ ಎಂದೇನು ಮಾಡಬೇಕೆಂದು ತಂದಿದ್ದೀರಿ ಇವರಿಗೆ ಸರಿಯಾದ ನಿಯಮಾವಳಿಗಳನ್ನು ರಚನೆ ಮಾಡಿ ಇಲ್ಲಿರುವ ಎಲ್ಲ ಸಿಬ್ಬಂದಿ ವರ್ಗದವರನ್ನೂ ಖಾಯಂ ಆಗಿರಲು ಅನುಕೂಲವಾಗುವಂತೆ ಸಹಾಯ ಮಾಡಬೇಕು ಮತ್ತು ಇತರ ಇಲಾಖೆಗಳಲ್ಲಿ ಯಾವ ರೀತಿ ಸಂಬಳ ಸಾರಿಗೆಗಳನ್ನು ಕೊಡುತ್ತೀರೋ ಅದರಂತೆ ಇವರಿಗೂ ಸಂಬಳ ಸಾರಿಗೆಗಳನ್ನು ಸರಕಾರ ಕೊಡಬೇಕು. ಮತ್ತು ಒಂದೇ ರೀತಿಯಾದ ಕೆಲಸಗಳನ್ನು ಮಾಡುವಂತಹ ಬೇರೆ ಬೇರೆ ಕಾರ್ಪೊರೇಷನ್‌ಗಳನ್ನು ರಚನೆ ಮಾಡಬಾರದು, ಇದರ ಬಗ್ಗೆ ಸರಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಇಷ್ಟು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) — ಮಾನ್ಯ ಅಧ್ಯಕ್ಷರೇ, ಸರಕಾರ ಇಲ್ಲಿ ತಂದಿರುವ ಹೆಚ್ಚುವರಿ ಬೇಡಿಕೆಗಳನ್ನು ನಾನು ತೀವ್ರವಾಗಿ ವಿರೋಧ ಮಾಡಬೇಕಾಗಿದೆ. ಕಾರಣವೇನೆಂದರೆ ಕಳೆದ ಸಾಲಿನಲ್ಲಿ ರಾಜ್ಯದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿ ತೀವ್ರವಾದ ಅಭಾವ ಪರಿಸ್ಥಿತಿ ಬಂದಾಗ ಜನತೆಗೆ ಹೇರಳವಾಗಿ ಸಹಾಯ ಮಾಡಬೇಕಾಗಿ ಬಂತು ಮತ್ತು ಇದಕ್ಕಾಗಿ ಖರ್ಚು ಮಾಡಬೇಕಾಗಿ ಬಂತು ಎನ್ನುವ ಪ್ರಶ್ನೆ ಇಲ್ಲಿ ತಂದರು. ಈ ಸಂದರ್ಭದಲ್ಲಿ ನಮ್ಮ ಹಳೆಯ ಮೈಸೂರಿನ ಭಾಗದ ಜನರು ಸಾಕಷ್ಟು ಸಹಾಯವನ್ನು ಹೊಸ ಮೈಸೂರಿನ ಜನತೆಗೆ ಕೊಡಬೇಕೆಂದು ನೆರವು ಕೊಟ್ಟು ಸಾಕಷ್ಟು ತ್ಯಾಗ ಮಾಡಿದರು. ಆಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇದೇ ಸದನದಲ್ಲಿ ಬರಗಾಲದ ಪರಿಸ್ಥಿತಿ ಬಗ್ಗೆ ಮಾತನಾಡುವಾಗ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಬರಗಾಲಕ್ಕಾಗಿ ನಾವು ಏನು ಹಣವನ್ನು ಖರ್ಚುಮಾಡುತ್ತೇವೆ ಅಷ್ಟು ಹಣವನ್ನೂ ಪೂರ್ತಿಯಾಗಿ ಕೇಂದ್ರದವರು ನಮಗೆ ಕೊಡಿಸಿಕೊಡುತ್ತಾರೆ. ಇದರ ಬಗ್ಗೆ ಯಾರೂ ಚಿಂತೆ ಪಡಬೇಕಾಗಿಲ್ಲ ಎಂದು ಇಲ್ಲಿ ಹೇಳಿದರು. ಇವೊತ್ತಿನವರೆಗೆ ನಮ್ಮ ಸರಕಾರ ಬರಗಾಲಕ್ಕಾಗಿ ಸುಮಾರು ನೂರತ್ತನಾಲ್ಕು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಇಷ್ಟು ಹಣವನ್ನೂ ಕೇಂದ್ರ ಸರಕಾರದಿಂದ ನೀವು ಈಗ ತಂದಿದ್ದೀರಾ ಎಂದು ಕೇಳಬೇಕಾಗಿದೆ ನೀವು ದೆಹಲಿಗೆ ಹೋಗಿ ಏನು ತೆಗೆದುಕೊಂಡು ಬಂದಿರಿ ?

ಡೆಲ್ಲಿಗೆ ಹೋಗಿ ಬರೀ ಕೈ ಬೀಸಿಕೊಂಡು ವಾಪಸು ಬರುತ್ತಾರೆ. ಆಯವ್ಯಯ ಪಟ್ಟಿಯ ಮೇಲೆ ಚರ್ಚೆ ಮಾಡತಕ್ಕ ಕಾಲದಲ್ಲಿ ಅಭಾವ ಪರಿಹಾರ ಕಾರ್ಯಗಳಿಗಾಗಿ ೩೧-೩-೧೯೭೩ ರವರೆಗೆ ೨೬ ಕೋಟಿ ರೂಪಾಯಿ ಖರ್ಚಾಗಿದ್ದು ಅದರಲ್ಲಿ ೧೬ ಕೋಟಿ ರೂಪಾಯಿ ಮಾತ್ರ ಸರ್ಕಾರಕ್ಕೆ ಬಂದಿದ್ದು ಅಲ್ಲಿಂದೀಚೆಗೆ ೧೦ ಕೋಟಿ ರೂಪಾಯಿ

ಗಳನ್ನು ನಮ್ಮ ಸರ್ಕಾರ ತಂದಿದೆ. ಒಟ್ಟು ೪೪ ಕೋಟಿ ರೂಪಾಯಿಗಳು ಈ ಕೆಲಸಕ್ಕೆ ಖರ್ಚಾಗಿರಬೇಕಾದರೆ ೨೬ ಕೋಟಿ ರೂಪಾಯಿಗಳನ್ನು ಮಾತ್ರ ಕೇಂದ್ರದಿಂದ ತಂದಿದ್ದಾರೆ. ಬಾಕಿ ಹಣವನ್ನು ತರತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇಲ್ಲವೇ ಎಂದು ಕೇಳುತ್ತೇನೆ. ಈಗ ಖರ್ಚಾಗಿರುವ ೪೪ ಕೋಟಿ ರೂಪಾಯಿಗಳ ಜೊತೆಗೆ ಇನ್ನೂ ೧೫೬–೧೬ ಕೋಟಿ ರೂಪಾಯಿ ಖರ್ಚಾಗಲಿದ್ದು ಒಟ್ಟಿನಲ್ಲಿ ಬರಗಾಲ ಪರಿಸ್ಥಿತಿಗೆ ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಸಂದರ್ಭ ಬಂದಿದೆ. ಇದರಲ್ಲಿ ಅರ್ಧ ಭಾಗವನ್ನು ಸಹಾಯಧನವಾಗಿ ಕೊಡಿ ಮತ್ತು ಅರ್ಧ ಭಾಗವನ್ನು ಸಾಲವಾಗಿ ಪರಿಗಣನೆ ಮಾಡಿ ಎಂದು ಕೇಂದ್ರ ಸರ್ಕಾರವನ್ನು ಕೇಳಿದ್ದಾರೆ. ಹೀಗೆ ಕೇಳುವುದಕ್ಕೆ ಇವ ನ ಯಾರು ಎಂದು ನಾನು ಕೇಳುತ್ತೇನೆ. ಪೂರ್ತಿ ಹಣವನ್ನು ಸಹಾಯಧನವಾಗಿ ಕೊಡಿ ಎಂದು ಕೇಳುವುದರ ಬದಲು ಅರ್ಧ ಸಹಾಯಧನವಾಗಿ ಕೊಟು ಇನ್ನು ಅರ್ಧ ಭಾಗವನ್ನು ಸಾಲವಾಗಿ ಪರಿಗಣಿಸಿ ಎಂದು ಕೇಳಿದ್ದಾರೆ. ಬರಗಾಲವನ್ನು ಎದುರಿಸುವುದಕ್ಕೆ ಹಣವನ್ನು ಖರ್ಚು ಮಾಡತಕ್ಕ ಕಾಲದಲ್ಲಿ ಆ ಹಣವೆಲ್ಲ ಕೇಂದ್ರ ಸರ್ಕಾರದಿಂದ ನಮಗೆ ಬರುತ್ತದೆ ಎನ್ನುವ ಭರವಸೆಯನ್ನು ಈ ಸದನದ ಮೂಲಕ ರಾಜ್ಯದ ಜನರಿಗೆ ಕೊಟ್ಟಿದ್ದಾರೆ. ಆ ಮಾತು ಈಗ ಸುಳ್ಳಾಗಿದೆ ಈಗಿನ ಕಠಿಣ ಪರಿಸ್ಥಿತಿಯನ್ನು ಹೇಗೆ ಎದುರಿಸುತ್ತಾರೆ ಎನ್ನುವುದು ಹೇಗೆ ನಿಭಾಯಿಸುತ್ತಾರೆ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ರಾಜ್ಯದ ಬೇರೆ ಭಾಗದಲ್ಲಿ ಆಗಬೇಕಾದ ಕೆಲಸ ಕಾರ್ಯಗಳಿಗಾಗಿ ಏನು ಹಣವನ್ನು ಇಟ್ಟಿದ್ದರು ಅದನ್ನೆಲ್ಲ ಬರಗಾಲ ಪ್ರದೇಶಗಳಲ್ಲಿ ಖರ್ಚು ಮಾಡಿದ್ದಾರೆ. ಹೋದ ಸಾರಿ ಪ್ರತಿ ತಾಲ್ಲೂಕಿನಲ್ಲಿಯೂ ೫೦ ಮೈಲಿ ರಸ್ತೆಯನ್ನು ತೆಗೆದುಕೊಂಡಿದ್ದು ಅಲ್ಲಿ ಕಲ್ವರ್ಟ್‌ಗಳನ್ನು ಮಾಡಿಲ್ಲ, ಕೆಲಸವೆಲ್ಲ ಅರ್ಧಮರ್ಧವಾಗಿ ನಿಂತಿವೆ. ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಸಿಡಿದೇಳದೆ ಹೋದರೆ, ತೀಕ್ಷ್ಣವಾಗಿ ಹೋರಾಟ ಮಾಡದೆ ಹೋದರೆ ನಮಗೆ ಬರಬೇಕಾದ ಹಣ ಬಾರದೆ ಕೇಂದ್ರ ಸರ್ಕಾರ ತಾಳ ಹಾಕಿದ ಹಾಗೆ ಇವರು ಕುಣಿಯಬೇಕಾಗುತ್ತದೆ. ಇದರಿಂದ ರಾಜ್ಯದ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಹಳೇ ಮೈಸೂರಿನ ಭಾಗವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿದ್ದಾರೆ ಎಂದು ಕಟುವಾಗಿ ಟೀಕೆ ಮಾಡಬೇಕಾದ ಸಂದರ್ಭ ಬಂದೀತು ಎಂದು ಹೇಳುತ್ತೇನೆ.

ರಾಜ್ಯ ಸರ್ಕಾರದ ನೌಕರರಿಗೆ ಸಂಬಳ ಕೊಡುವುದಕ್ಕೇ ಒಂದೊಂದು ಸಲ ಶ್ರಮಪಡಬೇಕಾಯಿತು ಎಂದು ಮಾನ್ಯ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಇಂಥ ಚಿಂತಾಜನಕವಾದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇಂಥ ಸನ್ನಿವೇಶದಲ್ಲಿ ನಮ್ಮ ಸರ್ಕಾರದವರು ಹೆಚ್ಚುವರಿ ಬೇಡಿಕೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಬಹುಶಃ ಈ ಸಾಲಿನಲ್ಲಿ ಇದೊಂದೇ ಹೆಚ್ಚುವರಿ ಬೇಡಿಕೆಯಲ್ಲ, ಇನ್ನೂ ಒಂದೆರಡು ಹೆಚ್ಚುವರಿ ಬೇಡಿಕೆಗಳನ್ನು ಸರ್ಕಾರದವರು ತರುತ್ತಾರೆ ಎನ್ನುವ ಖಾತ್ರಿ ನನಗಿದೆ. ಯಾವ ಯಾವ ಮಂತ್ರಿಗಳು, ಯಾವ ಯಾವ ವರ್ಗದವರು ಎಷ್ಟೆಷ್ಟು ಈ ಸರ್ಕಾರವನ್ನು ಕೊಳ್ಳೆ ಹೊಡೆದು ಅವರವರಿಗೆ ಬೇಕಾದ ಕೆಲಸಗಳನ್ನು ಮಾಡುವ ದೃಷ್ಟಿಯಿಂದ ಹಣ

ಖರ್ಚಾಗಿ ಹೆಚ್ಚುವರಿ ಬೇಡಿಕೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರಾಜ್ಯದ ಸಮಗ್ರ ದೃಷ್ಟಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಯೋಜನೆಗಳನ್ನು ರೂಪಿಸಿ ಕಾರ್ಯಕ್ರಮ ಕೈಕೊಂಡು ಅದಕ್ಕೆ ಬೇಕಾದ ಹಣವನ್ನು ತೊಡಗಿಸುವ ದೃಷ್ಟಿಯಿಂದ ಹೆಚ್ಚುವರಿ ಬೇಡಿಕೆಯನ್ನು ತರುತ್ತಿಲ್ಲ. ತಮಗೆ ಬೇಕಾದವರ ಆಸಕ್ತಿ, ಹಿತ ಮತ್ತು ಒತ್ತಾಯದಿಂದ ಅವರಿಗೆ ಬೇಕಾದಂತೆ ಹಣವನ್ನು ಕೊಟ್ಟು ಹೆಚ್ಚುವರಿ ಬೇಡಿಕೆಯನ್ನು ತರುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟರೆ ತಾವು ಕೂಡ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ ಡಿಮಾಂಡ್ ೧೭ ರಲ್ಲಿ ಹೇಳಿರುವಂತೆ ಕೇಂದ್ರ ಸರ್ಕಾರದ ನಶಿದಲ್ಲಿರತಕ್ಕ ನ್ಯಾಷನಲ್ ಫಿಟನೆಸ್ ಕಾರ್ಪ್ಸ್ ಸಂಸ್ಥೆಯನ್ನು ಈ ಹೊತ್ತು ರಾಜ್ಯ ಸರ್ಕಾರ ವಹಿಸಿಕೊಂಡು ಅವರ ಮೇಲ್ವಿಚಾರಣೆಯನ್ನು ಸರ್ಕಾರವೇ ನಿರ್ವಹಿಸಬೇಕಾಗಿದೆ. ಮತ್ತು ಅದರ ಖರ್ಚು ವೆಚ್ಚಗಳನ್ನೂ ನೋಡಿಕೊಳ್ಳುತ್ತದೆ. ಹಿಂದೆ ಎಚ್. ಇ. ಸಿ. ಪಿ ಸಂಸ್ಥೆ ಮೈಸೂರು ಸರ್ಕಾರದ ಕೈಕೆಳಗೆ ಇತ್ತು. ಅದು ರದ್ದಾದ ಮೇಲೆ ಆ ಕೆಲಸಗಾರರನ್ನು ಬೇರೆ ಕಡೆಗೆ ಎಂ. ಎಸ್. ಇ. ಬಿ ಗೆ ಮತ್ತು ಮೈಸೂರು ಪವರ್ ಕಾರ್ಪೊರೇಷನ್ನಿಗೆ ವರ್ಗಾವಣೆ ಮಾಡಿದರು. ಅವರ ಸೇವೆಯನ್ನು ಸರ್ಕಾರ ಪವರೇ ಮುಂದುವರಿಸಿಕೊಂಡು ಬರುವುದಕ್ಕೆ ಸಾಧ್ಯವಾಗಲಿಲ್ಲ. ಯಾರು ಬೇಕೋ ಅವರನ್ನು ಸರ್ಕಾರದ ಸೇವೆಯಲ್ಲಿ ಉಳಿಸಿಕೊಳ್ಳುವ ದೃಷ್ಟಿಯಿಂದ, ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇಂಥ ಕೆಲಸ ಮಾಡಿದ್ದಾರೆ. ಇದು ಕೇವಲ ಒತ್ತಾಯದಿಂದ ಆಗಿದೆ ಎಂದು ನಾನು ಹೇಳುತ್ತೇನೆ.

೨೭ ನೇ ಡಿಮಾಂಡಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯವನ್ನು ಕಟ್ಟುವುದಕ್ಕೆ ಸುಮಾರು ೬೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನು ಕೊಡುವಾಗ ಕನಿಷ್ಟ ೭೫ ಪರ್ಸೆಂಟ್ ಸ್ಥಾನಗಳನ್ನು ಹರಿಜನ ಮತ್ತು ಗಿರಿಜನರಿಗೆ ಕೊಡಬೇಕೆಂದು ಷರತ್ತು ಹಾಕಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಬಹಳ ಅನಿವಾರ್ಯವಾಗಿ ಹೇಳಬೇಕಾಗಿದೆ. ಅನೇಕ ಜನ ಹರಿಜನ ಮುಖಂಡರು ಈ ದೇಶದಲ್ಲಿ ಹರಿಜನರು ತೀರ ಶೋಷಣೆಗೆ ಒಳಗಾಗಿದ್ದಾರೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ ನನ್ನಂಥವರು ಮಾತು ಮಾತಿಗೆ ಹರಿಜನ ಗಿರಿಜನರ ಪ್ರಶ್ನೆ ಒಂದಾಗ ಅಷ್ಟೇ ಕಠೋರವಾಗಿ ಪ್ರಾಮುಖ್ಯವಾಗಿ ವಾದ ಮಾಡಿದ್ದೇನೆ, ಸಾಮಾನ್ಯವಾಗಿ ರಾಜ್ಯದಲ್ಲಿರತಕ್ಕ ಹರಿಜನರಷ್ಟೇ ಶೋಷಣೆಗೆ ಒಳಗಾಗಿರತಕ್ಕ, ಸಾಮಾಜಿಕವಾಗಿ ಹಿಂದುಳಿದಿರತಕ್ಕ ವರ್ಗದ ಜನರಿದ್ದಾರೆ. ಕೆಂಡೂರು ಭಾಗದಲ್ಲಿ ಬೇಡರಿದ್ದಾರೆ. ಅವರಿಗಿಂತ ಹರಿಜನರು ಯಾವ ಸ್ಥಿತಿಯಲ್ಲಿ ಕಡಿಮೆ ಇದ್ದಾರೆ? ಸೇಕಡ ೭೫ ರಷ್ಟು ಸ್ಥಾನಗಳನ್ನು ಹರಿಜನ ಗಿರಿಜನರಿಗೆ ಮೀಸಲಿಡಬೇಕೆಂದು ಹೊರಟಿದ್ದಾರೆ. ಸಾಮಾಜಿಕವಾಗಿ ಹಿಂದುಳಿದಿರತಕ್ಕವರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿ ಇಡುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಸರ್ಕಾರದವರು ಇಂಥವರಿಗೂ ಸ್ಥಾನಗಳನ್ನು ಮೀಸಲಿಡಬೇಕೆಂಬ ಬಗ್ಗೆ ಏಕೆ ಷರತ್ತು ಹಾಕಲಿಲ್ಲ? ಈ ಹೊತ್ತು ಹಿಂದುಳಿದ ವರ್ಗದ ಆಯೋಗಕ್ಕೆ ಜುಡಿಷಿಯಲ್ ಪವರ್ ಕೊಡಬೇಕೆಂದು ಕೇಳಿದರೆ ಸಮಾಜಕಲ್ಯಾಣ ಮಂತ್ರಿಗಳು

ಇನ್ನೂ ಪುನಸ್ಸು ಮಾಡುತ್ತಿಲ್ಲ. ಈ ರಾಜ್ಯದಲ್ಲಿರುವ ಸಾಮಾಜಿಕವಾಗಿ ಹಿಂದುಳಿದಿರುವ ವರ್ಗದವರು ಒಂದುಗೂಡಿ ನಿಂತರೆ ಯಾರೂ ಅವರನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಹೊತ್ತು ಹರಿಜನ ಗಿರಿಜನರ ಸಮಸ್ಯೆ ಎಷ್ಟು ಪ್ರಮುಖವಾಗಿದೆಯೋ, ಸಾಮಾಜಿಕವಾಗಿ ಹಿಂದುಳಿದಿರತಕ್ಕ ಶೋಷಣೆಗೆ ಒಳಗಾಗಿರತಕ್ಕ ಅನೇಕ ಸಣ್ಣಪುಟ್ಟ ಪಂಗಡಗಳು ಅವರಿಗಿಂತಲೂ ಕಡಿಮೆ ಸ್ಥಿತಿಯಲ್ಲಿದ್ದು ಅವರ ಸಮಸ್ಯೆಯೂ ಅಷ್ಟೇ ಏಕೆ ಅದಕ್ಕಿಂತಲೂ ಪ್ರಮುಖವಾಗಿದೆ. ಆದರೆ ಅವರಿಗೆ ಈ ತರಹ ಯಾವ ರೀತಿಯ ಪರಿಹಾರವನ್ನು ಕೊಟ್ಟಿದ್ದಾರೆ, ಯಾವ ರೀತಿಯ ಉಪಕಾರವನ್ನು ಮಾಡಿದ್ದಾರೆ? ಕೇವಲ ಒತ್ತಾಯಕ್ಕೆ ಮಣಿದು ಇಂಥ ಅನುಕೂಲವನ್ನು ಕೇವಲ ಒಂದು ವರ್ಗಕ್ಕೆ ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಎಚ್ಚರಿಕೆಯನ್ನು ಕೊಡುತ್ತೇನೆ, ದಯವಿಟ್ಟು ಈ ರಾಜ್ಯದಲ್ಲಿ ಅನೇಕ ಸಮಾಜಗಳು, ಅನೇಕ ಜಾತಿಗಳು ಬಹಳ ಹಿಂದುಳಿದ ಸ್ಥಿತಿಯಲ್ಲಿವೆ. ಬೇಡರಿರಬಹುದು, ಅಲೆಮಾರಿಗಳು, ನೆಮ್ಯೂಡಿಕ್ಸ್ ಮತ್ತು ಸೆಮಿ ನೆಮ್ಯೂಡಿಕ್ಸ್‌ಗೊಲ್ಲರು,ಲಂಬಾಣಿಗಳು, ಜೋಗಿಗಳು, ಕಾಡು ಕುರುಬರು ಇದ್ದಾರೆ. ಹಾಗೆಯೇ ಕಾರವಾರದ ಕಡೆ ಗೌಳಿಗಳು ಎಂದು ಇದ್ದಾರೆ. ಅವರು ಕೊರಳಲ್ಲಿ ಮಣಿ ಹಾಕಿಕೊಂಡಿರುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಮರಾಠಿಗರು ಕಜ್ಜಿಶುಕುಬರು ಎಂದು ಇದ್ದಾರೆ. ಹೀಗೆ ಅನೇಕ ಜಾತಿಗಳಿವೆ. ಇವರೆಲ್ಲರೂ ಹರಿಜನರಿಗಿಂತ ಅತ್ಯಂತ ಹೀನ ಸ್ಥಿತಿಯಲ್ಲಿದ್ದಾರೆ. ಅವರಿಗೆ ಈ ರೀತಿಯ ಪರಿಹಾರವನ್ನೇನಾದರೂ ಕೊಟ್ಟಿದ್ದಾರೆಯೇ? ಹಿಂದುಳಿದ ವರ್ಗದ ಆಯೋಗಕ್ಕೆ ಯಾವ ಜನ ಮುಂದೆ ನಿಂತು ಸಹಾಯ ಮಾಡಬೇಕಾಗಿತ್ತೋ ಆ ಜನ ಅದಕ್ಕೆ ಅಡ್ಡ ಬರುತ್ತಿದ್ದಾರೆ. ಮುಂದುವರಿದ ಜನಾಂಗ ಅಡ್ಡ ಬಂದಿದ್ದರೆ ಹೆದರಬೇಕಾಗಿರಲಿಲ್ಲ, ಸಂಶಯಪಡಬೇಕಾದ ಅಗತ್ಯವಿರಲಿಲ್ಲ. ಶೋಷಣೆಗೆ ಒಳಗಾಗಿರತಕ್ಕ ಹರಿಜನ ಗಿರಿಜನ ಮುಖಂಡರು ಹಿಂದುಳಿದ ಜನಾಂಗದ ಆಯೋಗಕ್ಕೆ ವಿರೋಧ ಮಾಡತಕ್ಕ ಸಾಹಸಪಟ್ಟು ಬಹಿರಂಗವಾಗಿ ಎದುರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ದೇಶದಲ್ಲಿನ ಸಾಮಾಜಿಕವಾಗಿ ಹಿಂದುಳಿದಿರತಕ್ಕ ಜನಾಂಗ ಅಪಾರವಾಗಿ ನೊಂದಿದೆ.

ಶ್ರೀ ಕೆ. ಪ್ರಭಾಕರ.—ಮಾನ್ಯ ಸದಸ್ಯರಿಂದ ಯಾವುದಾದರೂ ವಿಚಾರಗಳು ಗೊತ್ತಿದ್ದರೆ ಅದನ್ನು ಸಭೆಯಲ್ಲಿ ಹೇಳುತ್ತಾರೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದುಳಿದ ವರ್ಗದ ಆಯೋಗ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಬೇಕಾದಷ್ಟು ಅಡಚಣೆಗಳಿವೆ. ಆಯೋಗಕ್ಕೆ ಮ್ಯಾಜಿಸ್ಟೀರಿಯಲ್ ಪವರ್ಸ್ ಕೊಡಬೇಕೆಂದು ಕೇಳಿದರೆ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಈ ಹೊತ್ತಿನವರೆಗೂ ಯಾವ ತೀರ್ಮಾನವನ್ನೂ ಕೈಗೊಳ್ಳಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಯೋಗಕ್ಕೆ ಮ್ಯಾಜಿಸ್ಟೀರಿಯಲ್ ಪವರ್ ಏಕೆ ಬೇಕು ಎನ್ನುವುದನ್ನು ಹೇಳುತ್ತಾರೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಇಲಾಖೆಗಳಿಂದ ಬೇಕಾದ ಅಂಕಿ ಅಂಶಗಳನ್ನು ಆಯೋಗ ಕೇಳಿದರೆ ಈ ಹೊತ್ತಿನವರೆಗೂ ಅದನ್ನು ಒದಗಿಸಿ ಕೊಟ್ಟಿಲ್ಲ. ಮ್ಯಾಜಿಸ್ಟೀರಿ

ಯಲ್ ಪನರ್ ಇದ್ದರೆ, ಒಂದು ವೇಳೆ ಅಂಕಿ ಅಂಶಗಳನ್ನು ಒದಗಿಸಿ ಕೊಡದೆ ಇದ್ದರೆ ಅವನ್ನು ಒದಗಿಸಿಕೊಡುವಂತೆ ಒತ್ತಾಯ ಮಾಡಿ ಅಧಿಕಾರವನ್ನು ಚಲಾಯಿಸುವುದಕ್ಕೆ ಅವಕಾಶವಿರುತ್ತದೆ. ಅದಲ್ಲದೆ ಇಲಾಖೆಯ ಅಧಿಕಾರಿಗಳನ್ನು ಅಂಕಿ ಅಂಶ ಒದಗಿಸ ಬೇಕೆಂದು ಕೇಳಿದರೆ ಅವರು ಒದಗಿಸದೆ ಕಾಲ ಕಳೆಯುತ್ತಾರೆ. ಅದಕ್ಕಾಗಿ ಇಂಥ ಅಧಿಕಾರಬೇಕು.

ಒಂದು ವೇಳೆ ಅಕಸ್ಮಿಕವಾಗಿ ಕೇಳಿದ ಪ್ರಶ್ನೆಗೆ ಉತ್ತರ ಕೊಡದೇ ಹೋದರೆ They can be held up for contempt. ಅದುವರಿಂದ ಈ ಸನ್ನಿವೇಶದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಿದ ವಿದ್ಯಾನಿಲಯದಲ್ಲಿ ಸಾಮಾಜಿಕ ವಾಗಿ ಹಿಂದುಳಿದಿರತಕ್ಕವರಿಗೆ, ಅನೇಕ ಸಣ್ಣಪುಟ್ಟ ಜನಾಂಗದವರಿಗೆ ಸ್ಥಾನಗಳನ್ನು ದಯವಿಟ್ಟು ವೀಸಲಾಗಿಡಬೇಕು.

3 P. M.

ಶ್ರೀ ಕೆ. ಪ್ರಭಾಕರ.— ಕೂಡಬೇಡಿ ಎಂದು ಹರಿಜನರು ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಹರಿಜನ ಮುಖಂಡರು ಹೇಳಿದರು ಎಂದು ಹೇಳಿದೆ.

ಶ್ರೀ ಕೆ. ಪ್ರಭಾಕರ.— ಯಾವ ಮುಖಂಡರು? ಹರಿಜನ ಗಿರಿಜನ ಆರೀತಿ ಹೇಳಬಾರದು. ಎಲ್ಲರೂ ಮುಂದುವರಿಯಬೇಕು. ಒಂದು ವೇಳೆ ಹಾಗೆ ಹೇಳಿದ್ದರೆ ಯಾವ ಸಂದರ್ಭದಲ್ಲಿ ಎಂದು ನಾವು ತಿಳಿದುಕೊಳ್ಳುವುದಕ್ಕೆ ಇಲಿಸ್ಟ್ರೇಟ್ ಮಾಡಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.— ಮಾಡುತ್ತೇನೆ. ಮೈಸೂರಿನಲ್ಲಿ ದೊಡ್ಡ ವಿಶ್ವ ವಿದ್ಯಾನಿಲಯವಿದೆ, ದೊಡ್ಡ ದೊಡ್ಡ ನಗರವಿರುವ ಕಡೆ ಅನೇಕ ವಿದ್ಯಾನಿಲಯ ಇವೆ. ರಾಜ್ಯದ ಬೇರೆ ಭಾಗಗಳಲ್ಲಿ ಎಲ್ಲಿ ಕಾಲೇಜುಗಳಿವೆ ಅಂಥ ಕಡೆ ವಿದ್ಯಾನಿಲಯಗಳು ಇಲ್ಲವೇ ಇರುವುದರಿಂದ ಹರಿಜನ ಗಿರಿಜನ ಮಕ್ಕಳಿಗೆ, ಹಿಂದುಳಿದ ಜನಾಂಗದ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಅನೇಕ ಆತಂಕಗಳಾಗಿವೆ. ಕೇವಲ ನಗರ ಪ್ರದೇಶಗಳಲ್ಲಿ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಬದಲಾಗಿ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕ ಕೇಂದ್ರಗಳಲ್ಲಿ ಸಂಬಂಧಪಟ್ಟ ವಿದ್ಯಾನಿಯಗಳನ್ನು ಪ್ರಾರಂಭ ಮಾಡಿದರೆ ಇಂಥ ಸಂದರ್ಭದಲ್ಲಿ ಪೆಜ್ಜುವರಿ ಬೇಡಿಕೆ ತಂದರೆ ಮಾನ್ಯ ಹಣಕಾಸಿನ ಸಚಿವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ತಾವು ಮಾಜಿ ಮಹಾರಾಜರು ನಿಮ್ಮ ಸೊಂಡೂರಿನಲ್ಲಿ ಇಂಥ ವಿದ್ಯಾನಿಲಯ ಸ್ಥಾಪನೆ ಮಾಡಿದ್ದರೆ, ಅವರಿಗೂ ಒಂದು ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದ್ದರೆ ಖಂಡಿತವಾಗಿ ಒಪ್ಪುತ್ತಿದೆ. ಆ ಕೆಲಸ ಈಗ ಮಾಡಿ ಮತ್ತೊಂದು ಬೇಡಿಕೆ ತನ್ನಿ. ಅದಕ್ಕೆ ಸಂಪೂರ್ಣ ಸ್ವಾಗತ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹಾಗೆಯೇ ಸಮಾಜ ಕಲ್ಯಾಣ ಇಲಾಖೆಯವರ ಮುಖಾಂತರ ಕೆಲವು ಹರಿಜನ

ಗಿರಿಜನ ಕಮ್ಯುನಿಟಿ ಸೆಂಟರ್ಸ್ ಬಿಲ್ಡಿಂಗ್ ಕಟ್ಟುವದಕೋಸ್ಕರ ೫ ಲಕ್ಷ ರೂಪಾಯಿಗಳ ಹೆಚ್ಚುವರಿ ಬೇಡಿಕೆಯನ್ನು ತಂದಿದ್ದೀರಿ. ಕಲ್ಯಾಣ ಕೇಂದ್ರಗಳು ಅನೇಕ ಕಡೆ ಕಟ್ಟಲ್ಪಟ್ಟಿವೆ. ಅಲ್ಲಿಯ ಸ್ಥಿತಿ ನೋಡಿದ್ದೇನೆ. ಅಲ್ಲಿ ಕೂತುಕೊಳ್ಳಲಿಕ್ಕೆ ಜಾಗವಿಲ್ಲ, ಕಸ ಗುಡಿಸತಕ್ಕ ಜನವಿಲ್ಲ. ಅಲ್ಲಿಗೆ ಬಂದು ನೋಡತಕ್ಕವರು ಇಲ್ಲ, ಕಲ್ಯಾಣ ಕೇಂದ್ರಗಳನ್ನು ಕಟ್ಟುವುದರಿಂದ ಜನ ಉದ್ಧಾರವಾಗುವುದಿಲ್ಲ ಜೊತೆಗೆ ತಾವು ಅಲ್ಲಿ ಒಂದು ಭಿಕ್ಷುಕರ ಕೇಂದ್ರವನ್ನು ನಿರ್ಮಾಣ ಮಾಡುತ್ತೀರಿ. ಕಲ್ಯಾಣ ಮಂದಿರಗಳನ್ನು ಕಟ್ಟಿದರೆ ಅದನ್ನು ವ್ಯವಸ್ಥಿತವಾಗಿ ನೋಡಿಕೊಂಡು ಹೋಗಬೇಕೆಂಬ ಪ್ರಜ್ಞೆ ಜನರಲ್ಲಿ ಬೆಳೆದಿಲ್ಲ. ಸುಮ್ಮನೆ ಮನೆ ಕಟ್ಟಿದರೆ ಅಲ್ಲಿಗೆ ಭಿಕ್ಷುಕರು ಬಂದು ಅಲ್ಲಿ ಉಳಿದುಕೊಂಡು ಅವಿಗೆ ಮಾಡಿಕೊಂಡು ಇರುವುದಕ್ಕೆ ಅವಕಾಶವಾಗುತ್ತದೆ. ಅದನ್ನು ನೋಡುವುದಕ್ಕೆ ಯಾರೂ ಬರುವದಿಲ್ಲ. ಅಂಥ ಸ್ಥಿತಿ ಇದೆ ಹೀಗಿರುವಾಗ ನೀವು ಮತ್ತೆ ಕಲ್ಯಾಣ ಕೇಂದ್ರಗಳನ್ನು ಕಟ್ಟುವುದಕ್ಕೆ ಹೊರಟಿರುವುದು ಮೂರ್ಖತನವೇ ಹೊರತು ಬೇರೆಯಲ್ಲ. ರಾಜ್ಯದಲ್ಲಿ ಹಿಂದೆ ಮಾಡಿದಂಥ ಕೆಲಸ ಎಷ್ಟರ ಮಟ್ಟಿಗೆ ರೂಢಿಸಿಕೊಂಡು ಬಂದಿದೆ ಎಂದು ನೋಡದೆ ಅದೇ ಕೆಲಸ ಮುಂದುವರಿಸುವುದಾದರೆ ಕೇವಲ ಹಣ ಹಾಳು ಮಾಡುವುದೇ ವಿನಹಃ ಒಳ್ಳೆಯದು ಮಾಡುವುದಕ್ಕಾಗುವದಿಲ್ಲ. ಹೆಚ್ಚುವರಿ ಬೇಡಿಕೆ ಇಡತಕ್ಕ ಕಾಲದಲ್ಲಿ ೫ ಲಕ್ಷ ರೂಪಾಯಿ ಕಲ್ಯಾಣ ಕೇಂದ್ರಗಳನ್ನು ಕಟ್ಟುವುದಕ್ಕೆ ಬದಲಾಗಿ ವಿದ್ಯಾನಿಲಯಗಳನ್ನು ಕಟ್ಟಿದರೆ ಹೆಚ್ಚಿನ ಪ್ರಯೋಜನ ಸಿಗುತ್ತದೆ. ತಾಲ್ಲೂಕ ಕೇಂದ್ರಗಳಲ್ಲಿ, ಮತ್ತು ಹೋಬಳಿ ಕೇಂದ್ರಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿದರೆ ಹರಿಜನ ಗಿರಿಜನ ಮಕ್ಕಳಿಗೆ ಮತ್ತು ಹಿಂಮುಳಿದವರ ಮಕ್ಕಳಿಗೆ ಓದುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಸಾಮಾಜಿಕ ಕಲ್ಯಾಣ ಕೇಂದ್ರಗಳನ್ನು ಕಟ್ಟುವ ಕೆಲಸ ಕೈಬಿಡಬೇಕು, ಅದರಿಂದ ಯಾವ ಪುರುಷಾರ್ಥ ಸಾಧಿಸಿದಂತಾಗುವುದಿಲ್ಲ ಎಂದು ಹೇಳುತ್ತೇನೆ.

ಸ್ವಾಮಿ, ೫೫ ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಜಯಂತಿ ಗ್ರಾಮವನ್ನು ಚುನಾಯಿಸಿ ಕೊಂಡಿದ್ದೀರಿ. ಜಯಂತಿ ಗ್ರಾಮದಲ್ಲಿ ೧೩೦೦ ಮನೆಗಳನ್ನು ಕಟ್ಟುವುದಕ್ಕೆ ೨೪ ಲಕ್ಷ ರೂ. ಹಣವನ್ನು ಕೊಟ್ಟು ಹೆಚ್ಚುವರಿ ಬೇಡಿಕೆಯನ್ನು ತಂದಿದ್ದೀರಿ. ತಮಗೆ ನಾನೊಂದು ಪ್ರಶ್ನೆ ಕೇಳುತ್ತೇನೆ. ರಾಜ್ಯದಲ್ಲಿ ಒಟ್ಟು ೧೫೭ ತಾಲ್ಲೂಕ ಇದ್ದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಗ್ರಾಮ ಎಂದರೆ ೧೫೭ ಜಯಂತಿ ಗ್ರಾಮಗಳನ್ನು ಚುನಾಯಿಸಿ ಕೊಂಡಿದ್ದೀರಿ. ೨೪ ಲಕ್ಷ ಕೊಟ್ಟಿದ್ದೀರಿ ಕೊಟ್ಟಮೇಲೆ ಪ್ರತಿಯೊಂದು ಜಯಂತಿ ಗ್ರಾಮಕ್ಕೂ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ ೧೫೭ ಗ್ರಾಮಕ್ಕೂ ಕೂಡ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ೧೦೦ ಕ್ಕಿಂತಲೂ ಕಡಿಮೆ ಗ್ರಾಮಕ್ಕೆ ಕೊಟ್ಟಿದ್ದೀರಿ. ಕೊಟ್ಟರೆ ಪ್ರತಿಯೊಂದು ಗ್ರಾಮಕ್ಕೂ ಕೂಡಿ, ಇಲ್ಲದೇ ಹೋದರೆ ಒಬ್ಬರಿಗೆ ಒಂದು ಮತ್ತೊಬ್ಬರಿಗೆ ಒಂದು ಮಾಡುವುದಕ್ಕೆ ಹೋಗಬೇಡಿ. ಈ ದೃಷ್ಟಿಯಿಂದ ತಾರತಮ್ಯ ಮಾಡಿದ್ದೀರಿ. ತಾರತಮ್ಯ ತೊಡೆದುಹಾಕಿ ಯಾವ

ತಾಲ್ಲೂಕಿಗೆ ಜಯಂತಿ ಗ್ರಾಮ ಮನೆ ಕಟ್ಟಿಕೊಳ್ಳುವುದಕ್ಕೆ ಹಣ ಒದಗಿಸಿಲ್ಲ ಅವರಿಗೆ ಪುನಃ ಒದಗಿಸಲು ಹಣವನ್ನು ಇಲ್ಲಿ ತೆಗೆದು ಇಡಬೇಕೆಂದು ಹೇಳುತ್ತೇನೆ. ಸೊಂಡೂರಿನಲ್ಲಿ ಕೊಟ್ಟಿದ್ದಿರೋ ಇಲ್ಲವೋ ಗೊತ್ತಿಲ್ಲ, ಕೊಡದಿದ್ದರೆ ಕೊಡಿ

ಸ್ವಾಮಿ, ತಾವು ಕುದುರೆಮುಖ ಕಡೆಯ ಯೋಜನೆಗೆ ರಸ್ತೆ ನಿರ್ಮಾಣಕ್ಕೋಸ್ಕರ ಪ್ರತ್ಯೇಕ ಒಂದು ಡಿವಿಜನ್ ತೆಗೆದುಕೊಳ್ಳುವುದಕ್ಕೆ ಹಣವನ್ನು ಒದಗಿಸಿಕೊಂಡಿದ್ದೀರಿ ತಾವು ಖರ್ಚನ್ನು ಕಡಿಮೆ ಮಾಡಿ, ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ತೊಡಗಿಸಬೇಕು ಎಂದು ಹೇಳುತ್ತೀರಿ, ಜೊತೆಗೆ ಇದನ್ನು ಸಾಮಾನ್ಯ ಲೋಕೋಪಯೋಗಿ ಇಲಾಖೆಯಿಂದ ಮಾಡಿಸಲಿಕ್ಕೆ ಸಾಧ್ಯವಿದ್ದರೂ ಕೂಡ ಪ್ರತ್ಯೇಕ ಇಲಾಖೆಯನ್ನು ನಿರ್ಮಾಣ ಮಾಡಿದ್ದೀರಿ. ಇದಕ್ಕೆ ಇಟ್ಟಿಳಿಂದ ಲಕ್ಷ ಖರ್ಚು ಮಾಡಿ ಒಂದು ಪ್ರತ್ಯೇಕ ಡಿವಿಜನ್ ಸ್ಥಾಪನೆ ಮಾಡಿದ್ದೀರಿ. ಇದು ಉಳಿತಾಯ ಮಾಡುವ ಲಕ್ಷಣ ಅಲ್ಲ. ತಾವು ಮಾಡತಕ್ಕ ಉದ್ದೇಶವಾದರೂ ಏನು? ಇಷ್ಟು ಹಣವನ್ನು ನೀರಾವರಿಗೆ ಕೊಟ್ಟರೆ ಒಂದು ವರ್ಷದಲ್ಲಿ ಉತ್ಪಾದನೆ ಮಾಡಿಕೊಡುತ್ತಿದ್ದರು. ಶೈತರಿ ಗೊಸ್ಕರ ಖರ್ಚು ಮಾಡುತ್ತಿಲ್ಲ. ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸುವುದಕ್ಕೆ ಅವಕಾಶವಿತ್ತು. ಇವತ್ತು ರಸ್ತೆ ಮಾಡಿಸುವುದಕ್ಕೆ ದುಡ್ಡು ಇಲ್ಲ, ನೋರಿ ನೂಡುವುದಕ್ಕೆ ಇಲ್ಲ, ಜೊಸ ಕೆರೆ ಮಾಡುವುದಕ್ಕೆ ದುಡ್ಡು ಇಲ್ಲ ಹೆಚ್ಚೆಚ್ಚು ಉಳಿತಾಯ ಮಾಡಬೇಕು ಎಂದು ಹೇಳುತ್ತಿದ್ದೀರಿ. ಶೇಕಡ ೩೦ರಷ್ಟು ಹಣವನ್ನು ಖೋತ ಮಾಡುವ ಸಂಧರ್ಭ ಬಂದಿದೆ ಎಂದು ಹೇಳುತ್ತೇನೆ. ಇಂಥ ಹಣದ ಮುಗ್ಗಟ್ಟು ಇರಬೇಕಾದರೆ ಪುನಃ ಒಂದು ಡಿವಿಜನ್ ನಿರ್ಮಾಣ ಮಾಡಿ ಕೆಲಸ ಮಾಡತಕ್ಕ ಉದ್ದೇಶ ನೇನು? ಆದುದರಿಂದ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ಕೆಲಸಗಳನ್ನು ದಯವಿಟ್ಟು ಕೈಬಿಟ್ಟು ಇರತಕ್ಕ ಸಿಬ್ಬಂದಿ ವರ್ಗದಿಂದ ಇರತಕ್ಕ ಇಲಾಖೆಯಿಂದ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಿಸುವುದಕ್ಕೆ ಪ್ರಯತ್ನಪಡಬೇಕು.

ಜೊತೆಗೆ ಶುಗರ್ ಡೈರೆಕ್ಟರ್ ಹೊಸ ಇಲಾಖೆಯನ್ನು ಪ್ರಾರಂಭ ಮಾಡಿದ್ದೀರಿ, ಸರ್ಕಾರದ ನಿಯಂತ್ರಿಸುವುದಕ್ಕೆ ಸರ್ಕಾರವ ವೆಚ್ಚವಿಚಾರಣೆ ನೋಡಿಕೊಳ್ಳುವುದಕ್ಕೆ ಪ್ರತ್ಯೇಕ ಡೈರೆಕ್ಟರ್ ನಿರ್ಮಾಣ ಮಾಡಿ ಪ್ರತ್ಯೇಕ ಸಿಬ್ಬಂದಿ ವರ್ಗ ಸೃಷ್ಟಿಸಿಕೊಟ್ಟು ಅದಕ್ಕೆ ಹೆಚ್ಚುವರಿ ಬೇಡಿಕೆಯನ್ನು ತಂದಿದ್ದೀರಿ. ನಾನು ಕೇಳುತ್ತೇನೆ ಇವತ್ತಿನವರೆಗೆ ಸಕ್ಕರೆಯನ್ನು ನಾವು ಉತ್ಪಾದನೆ ಮಾಡುತ್ತಿದ್ದೇವೆ, ಸಕ್ಕರೆ ವಿತರಣೆ ಆಗುತ್ತಿದೆ. ಈಗಿರತಕ್ಕದರಲ್ಲಿ ಏನು ತೊಂದರೆ ಇದೆ? ನನಗನ್ನಿಸುತ್ತದೆ. ಯಾರೋ ಒಬ್ಬ ಮುಖ್ಯ ಅಧಿಕಾರಿಗೆ ಒಂದು ದೊಡ್ಡ ಹುದ್ದೆಯನ್ನು ನಿರ್ಮಿಸಬೇಕಾಗಿದೆ. ಏಕಾತಕ್ಕೆಂದರೆ ಸಹಕಾರ ಇಲಾಖೆಯಲ್ಲಿ ರಜಿಸ್ಟ್ರಾರ್‌ರವರು ಇದ್ದುಬಿಟ್ಟಿದ್ದಾರೆ. ಅವರ ಗ್ರೇಡಿನವರು ಬೇರೆ ಅವರಿಗೆ ಅವಕಾಶ ಇಲ್ಲದೇ ಇರುವುದರಿಂದ ಯಾರೋ ಒಬ್ಬರಿಗೆ ಸಹಕಾರ ಇಲಾಖೆಯಲ್ಲಿ ಉನ್ನತ ಸ್ಥಾನವನ್ನು ಕೊಡುವ ದೃಷ್ಟಿಯಿಂದ ಶುಗರ್ ಡೈರೆಕ್ಟರ್‌ರವರನ್ನು ಹುದ್ದೆಯನ್ನು ಸ್ಥಾಪನೆಮಾಡಿ ಉನ್ನತ ಹುದ್ದೆ ಕೊಟ್ಟು ಅವರಿಗೆ

ಪ್ರತ್ಯೇಕ ಸಿಬ್ಬಂದಿ ವರ್ಗ ಸೃಷ್ಟಿ ಮಾಡಿಕೊಟ್ಟಿದ್ದಿರಿಯೇ ವಿನಹ ನಿಜವಾಗಿ ರಾಜ್ಯದ ದೃಷ್ಟಿಯಿಂದ ಸರ್ಕಾರ ಉತ್ಪಾದನೆ ವಿತರಣೆಯ ದೃಷ್ಟಿಯಿಂದ ಇದು ಒಳ್ಳೆಯ ಯೋಜನೆಯಲ್ಲ, ಒಳ್ಳೆಯ ಕಾರ್ಯಕ್ರಮವಲ್ಲ ಅದರಲ್ಲೂ ಕೂಡ ತಾವು ಅನಾವಶ್ಯಕವಾಗಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದೀರಿ, ಮಾಡಿಕೊಂಡಿದ್ದೀರಿ ವಿನಹ ಅದರಿಂದ ರಾಜ್ಯದ ಭಂಡಾರಕ್ಕೆ ಉಳಿತಾಯದ ಕೆಲಸ ಮಾಡಿದಂತಾಗಲಿಲ್ಲ ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡುವುದು ಅತ್ಯಗತ್ಯ ಇದೆ. ಇದು ಫುಡ್ ಕಾರ್ಪೋರೇಶನ್ನಿನಲ್ಲಿ ಬರುತ್ತದೆ ಇದಕ್ಕೆ ಮತ್ತೆ ಹಣವನ್ನು ಖರ್ಚು ಮಾಡಿದ್ದೀರಿ ಇದು ಒಂದು ಆಹಾರ ಪದಾರ್ಥ ಅಂಗವಾಗಿದೆ. ಅದಕ್ಕೆ (ಫುಡ್) ಕಾರ್ಪೋರೇಷನ್‌ಗೆ ವಹಿಸಿಕೊಟ್ಟರೆ ಎರಡೂ ಕೆಲಸವಾಡುವುದಕ್ಕೆ ಆಗುತ್ತದೆ. ಪ್ರತ್ಯೇಕ ಶುಗರ್ ಡೈರೆಕ್ಟರ್ ಅನಾವಶ್ಯಕವೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೀನೆ.

ಅಧ್ಯಕ್ಷರೇ, ಈಗಾಗಲೇ ನಮ್ಮ ಗದುಗಿನ ಹತ್ತಿ ಗಿರಣಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಅದಕ್ಕೂ ಕೂಡ ಶೇರ್‌ಕ್ಯಾಪಿಟಲ್ ಕೊಟ್ಟ ಬಗ್ಗೆ, ಹೆಚ್ಚುವರಿ ಬೇಡಿಕೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಪುನಃ ಹಣಕಾಸಿನ ಮಂತ್ರಿಗಳಿಗೆ ಹೇಳುತ್ತೇನೆ. ಹುಲಕೋಟಿ ಮಿಲ್‌ಗಾಗಲಿ ಇನ್ನಿತರ ಸಹಕಾರಿ ಕ್ಷೇತ್ರದಲ್ಲಿ ಸ್ಥಾಪನೆಯಾಗತಕ್ಕ ಹತ್ತಿ ಗಿರಣಿಗಳಿಗಾಗಲಿ ಶೇರ ಕ್ಯಾಪಿಟಲ್ ಕೊಡಬೇಕು ಎನ್ನುವ ಕಲ್ಪನೆ ಆಯವ್ಯಯ ಪಟ್ಟಿ ತಯಾರು ಮಾಡತಕ್ಕ ಕಾಲದಲ್ಲಿ ಇದ್ದಿದ್ದರೆ, ಈಗ ಹಣವನ್ನು ಪ್ರತ್ಯೇಕವಾಗಿ ತೆಗೆದಿಡುತ್ತಿದ್ದಿರಿ. ಅನಿತ್ತು ತೆಗೆದಿಡಲಿಲ್ಲ. ನಂತರ ಹಣವನ್ನು ಕೊಡ ಬೇಕೆಂದು ಹೆಚ್ಚುವರಿ ಬೇಡಿಕೆ ತಂದಿದ್ದೀರಿ. ನಾನು ಪ್ರಾರಂಭದಲ್ಲೇ ಹೇಳಿದೆ. ಯಾರ ಶಕ್ತಿ ಎಷ್ಟು ಇದೆ, ಯಾರು ಎಷ್ಟು ನಿಮ್ಮನ್ನು ಹಿಡಿದು ನಿಲ್ಲಿಸಬಲ್ಲರು, ಯಾರು ಎಷ್ಟು ನಿಮ್ಮನ್ನು ಒಲಿಸಿಕೊಳ್ಳಬಲ್ಲರು, ಅವರಿಗೆ ಸಹಾಯ ಮಾಡುವುದು ಹೆಚ್ಚುವರಿ ಬೇಡಿಕೆ ತರುವ ರೀತಿಯಾಗಿದೆ ಈ ರೀತಿ ಮಾಡುವುದು ಸಾಮೂಹಿಕವಾಗಿ ರಾಜ್ಯದ ಒತ್ತಾಸಕ್ತಿಯನ್ನು ಇಟ್ಟುಕೊಂಡು ಮಾಡುವ ಕೆಲಸವಲ್ಲ ಯಾರು ಯಾರಿಗೆ ಹೆಚ್ಚು ಶಕ್ತಿ ಇದೆ, ಅವರನ್ನು ಒಲಿಸಿಕೊಳ್ಳುವ ದೃಷ್ಟಿಯಿಂದ ಮಾಡಿದ್ದೀರಿ. ಕೆ. ಎಚ್. ಪಾಟೀಲರು ಗದುಗಿನ ಹತ್ತಿ ಗಿರಣಿಯಲ್ಲಿ ತಮ್ಮ ಆಸಕ್ತಿಯನ್ನು ಹೊಂದಿದ್ದರಿಂದ, ಹಣಕಾಸಿನ ಸಚಿವರ ಮೇಲೆ ಮತ್ತು ಮುಖ್ಯಮಂತ್ರಿಯವರ ಮೇಲೆ ಪ್ರಬಲವಾದ ಒತ್ತಾಯವನ್ನು ತಂದಿದ್ದೇ ಕಾರಣ; ಇವತ್ತು ಹಣವನ್ನು ಹತ್ತಿ ಗಿರಣಿಗೆ ಕೊಡುವ ಹೆಚ್ಚುವರಿ ಬೇಡಿಕೆಯನ್ನು ತಂದಿದ್ದೀರಿ ಯಾವ ಸಂದರ್ಭದಲ್ಲಿ ಹಣ ಕೊಟ್ಟಿದ್ದೀರಿ ಎಂದರೆ,

"The society had collected a share capital of about Rs. 30 lakhs and it had also got the Industrial Licence and placed orders with M/s. Volta's Ltd., for supply of machinery. On the advice of the Registrar of Co-operative Societies, sanction was accorded for the contribution of a

sum of Rs. 44 lakhs (32 lakhs towards Government share capital to the Mills and Rs. 12 lakhs being the NCDC share).

ಓಲ್ಟಾಸ್ ಕಂಪನಿಗೆ ಇವತ್ತು ಆರ್ಡರ ಕೊಟ್ಟುಬಿಟ್ಟಿದ್ದೀರಿ. ಅವರಿಗೆ ಬೇಕಾದಂಥ ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ಆರ್ಡರ ಕೊಟ್ಟಿದ್ದೀರಿ. ಹಣವೆಲ್ಲ ಎಲ್ಲಿಗೆ ಹೋಗಬೇಕು? ಸರ್ಕಾರವನ್ನು ಬೆನ್ನುಹತ್ತಿ ಪ್ರಭಾವ ಉಪಯೋಗಿಸಿಕೊಂಡು ಶೇರ ಕ್ಯಾಪಿಟಲ್ ಮುಖಾಂತರ ಹಣ ಪಡೆದುಕೊಂಡು ಕಂಪನಿಗೆ ಹಣ ತೀರಿಸಿದ್ದೀರಿ. ನಿಮ್ಮ ಮೇಲೆ ಒತ್ತಾಯ ಬಾರದೇ ಹೋಗಿದ್ದರೆ ಇಂತಹ ತಿರ್ಮಾನ ಮಾಡುತ್ತಾ ಇರಲಿಲ್ಲ. ಅದುದರಿಂದ ತಮ್ಮ ಹೆಚ್ಚುವರಿ ಬೇಡಿಕೆಗಳು ಯಾವುದೇ ಆಧಾರವಿಲ್ಲದೆ, ಯಾವುದೇ ಪ್ರಾಮಾಣಿಕತನವಿಲ್ಲದೆ ಕೇವಲ ಒತ್ತಾಯ ಮತ್ತು ಆಸಕ್ತಿವಂತರ ಪ್ರಭಾವಕ್ಕೆ ಒಳಗಾಗಿ ಹೆಚ್ಚು ಹಣವನ್ನು ಖರ್ಚು ಮಾಡಿ ಹೆಚ್ಚುವರಿ ಬೇಡಿಕೆ ತಂದಿದ್ದೀರಿ. ಆ ದೃಷ್ಟಿಯಿಂದ ಈ ಒಂದು ಬೇಡಿಕೆಯನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತಾ. ನನಗೆ ಎರಡು ಮಾತನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ):—ಮಾನ್ಯ ಸಭಾಧ್ಯಕ್ಷಿಣಿಯರೇ, ನಮ್ಮ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ ಮೊದಲನೆಯದಾಗಿ ರಾಜ್ಯದ ಸರಿಯಾದಂಥ ಹಣಕಾಸಿನ ಪರಿಸ್ಥಿತಿಯನ್ನು ನಮ್ಮ ಮುಂದೆ ಇಡಲಿಲ್ಲ. ಅದರ ಜೊತೆಗೆ ಮೊದಲಿನಿಂದ ಕೊನೆಯವರೆಗೆ ಪೂರ್ತಿಯಾಗಿ ಈ ಡಿಮ್ಯಾಂಡನ್ನು ನೋಡಿದರೆ ಹಳೇ ಮೈಸೂರಿಗೆ ಬಹಳವಾಗಿ ಅನ್ಯಾಯವಾಗಿದೆ. ಈಗ ಏನೇನು ಬೇಡಿಕೆಗಳನ್ನು ಕೇಳುತ್ತಾ ಇದ್ದೀರಿ, ಅವೆಲ್ಲ ಹೊಸದಾಗಿ ಮೈಸೂರು ರಾಜ್ಯಕ್ಕೆ ಸೇರಿದ ಭಾಗಗಳಿಗೆ ಆಗಿದೆಯೇ ಹೊರತು, ಹಳೇ ಮೈಸೂರು ಭಾಗಗಳಿಗೆ ಆಗದೆ ಅನ್ಯಾಯ ಮಾಡಿದ್ದೀರಿ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಅದರ ಜೊತೆಗೆ ಟೋಕನ ಗ್ರಾಂಟ್ ಎನ್ನುವ ಹೆಸರಿನಲ್ಲಿ ಬರೀ ನೂರು ರೂಪಾಯಿ ತೆಗೆದುಕೊಂಡು ಬ್ಲಾಂಕ ಚೆಕ್ ತೆಗೆದುಕೊಂಡಿದ್ದೀರಿ. ಯಾವುದಕ್ಕೆ ಎಷ್ಟು ಖರ್ಚಾಗಬಹುದು, ಹೇಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನೀವು ಕೇಳದೆ, ಒರೀ ಟೋಕನ ಗ್ರಾಂಟ್ ಎಂದು ಬರೀ ಬ್ಲಾಂಕ ಚೆಕ್ಕನ್ನು ಅಸೆಂಬ್ಲಿಯಿಂದ ತೆಗೆದುಕೊಂಡು ಸ್ವೇಚ್ಛಾ ರೀತಿಯಲ್ಲಿ ಮನಸ್ಸಿಗೆ ಬಂದಹಾಗೆ ದುಡ್ಡು ಖರ್ಚು ಮಾಡುವುದಕ್ಕೆ ಪ್ರಯತ್ನಸಟ್ಟಿರಿ ಎಂದು ಗೊತ್ತಾಗುತ್ತದೆ. ಪ್ರತಿಯೊಂದು ಐಟಮನ್ನು ನೋಡಿದರೂ ಕೂಡ "The amount will be met by appropriation and savings" ಎಂದು ಹೇಳಿದ್ದೀರಿ. ಯಾವುದರಿಂದ ಅಪ್ರೋಪ್ರಿಯೇಟ್ ಮಾಡುತ್ತೀರಿ, ಯಾವುದರಿಂದ ಸೇವಿಂಗ್ಸ ಮಾಡುತ್ತೀರಿ ಎನ್ನುವ ಬಗ್ಗೆ ವಿವರ ಕೊಟ್ಟಿಲ್ಲ. ರಾಜ್ಯದ ಹಣಕಾಸಿನ ಪರಿಸ್ಥಿತಿ ಸಾಕಾದಷ್ಟು ಹದಗೆಟ್ಟು ಹೋಗಿದೆ ಎಂಬುದು ಗೊತ್ತಾಗಿದೆ. ನಾನು ಕಂಡ ಹಾಗೆ ಕಮರ್ಷಿಯಲ್ ಟ್ಯಾಕ್ಸ ಆಫೀಸರಿಗೆ ರಜಾ ಕೊಟ್ಟು ಅಂಗಡಿಗಳಿಗೆ ಹೋಗಿ ಒತ್ತಾಯಪೂರ್ವಕವಾಗಿ ಸೇವಿಂಗ್ಸ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಎಂದು ಪ್ರತಿ

ಯೊಬ್ಬರಿಗೂ ಟಾರ್ಜೆಟ್ ಫಿಕ್ಸ್ ಮಾಡಿರುವುದು ನನ್ನ ಕಿವಿಗೆ ಬಿದ್ದಿದೆ. ಈ ರೀತಿ ಹಣ ಕಾಸಿನ ಪರಿಸ್ಥಿತಿ ಬಹಳ ಹದಗೆಟ್ಟಿರುವುದರಿಂದ ನೀವು ಹಣವನ್ನು ವಸೂಲು ಮಾಡು ವುದಕ್ಕೋಸ್ಕರ ಒತ್ತಾಯಪೂರ್ವಕವಾಗಿ, ಇನಪ್ಲೂಯನ್ಸ್ ಉಪಯೋಗಿಸಿ, ಕಮರ್ಷಿ ಯಲ್ ಟ್ಯಾಕ್ಸ್ ಹಣ ವಸೂಲು ಮಾಡುವುದು ಶೋಚನೀಯವಾದ ವಿಚಾರ. ಸೇವಿಂಗ್ಸ್ ಮಾಡುವುದಕ್ಕೆ ಒತ್ತಾಯಪೂರ್ವಕವಾಗಿ ಇನ್‌ಫ್ಲೂಯನ್ಸ್ ತರಬಾರದು ಎಂದು ನನ್ನ ವಾದ. ಈಗ ಈ ವರ್ಷ ಬಡ್ಜೆಟ್ ಇಯರ್ ಕಳೆದು ೬ ತಿಂಗಳಾಗುತ್ತಾ ಬಂತು. ಈ ೬ ತಿಂಗಳಲ್ಲಿ ಎಷ್ಟು ಆದಾಯ ಬಂದಿದೆ, ಎಷ್ಟು ಖರ್ಚಾಗಿದೆ. ಎಷ್ಟು ನಿರೀಕ್ಷಣೆ ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಅಂದಾಜು ಕೊಟ್ಟಿದ್ದರೆ ಪ್ರಯೋಜನವಾಗುತ್ತಿತ್ತು. ನಾವು ಈ ಎಸ್ಟಿಮೇಟ್ ಬಗ್ಗೆ ಒಂದು ತೀರ್ಮಾನ ಹೇಳುವುದಕ್ಕೆ ಸರಿಹೋಗುತ್ತಿತ್ತು. ಪವರ ಕಟ್ಟಾಗಿ, ಕ್ಷಾಮ ಪರಿಸ್ಥಿತಿ ಉಂಟಾಗಿ, ನಿಮ್ಮ ಹಣಕಾಸಿನ ಪರಿಸ್ಥಿತಿ ನಿರೀಕ್ಷೆ ಮಾಡಿ ರುವ ರೀತಿಯಲ್ಲಿ ಆದಾಯ ವಸೂಲಾಗುವುದಿಲ್ಲ ಎನ್ನುವ ನಂಬಿಕೆ ನಿಮಗೆ ಇದೆ. ಹೀಗಿದ್ದರೂ ಕೂಡ ಬಡ್ಜೆಟ್‌ನಲ್ಲಿ ಸೇವಿಂಗ್ಸ್ ಉಳಿಸುತ್ತೇವೆ, ಅಪ್ರೋಪ್ರಿಯೇಷನ್ ಮಾಡುತ್ತೇವೆ ಎಂದು ಹೇಳತಕ್ಕದ್ದು ಆಧಾರರಹಿತವಾದುದು. ಕೊಡಬೇಕಾದ ಅಂಕಿ ಅಂಶ ಕೊಟ್ಟು, ಕಳೆದ ತಿಂಗಳಲ್ಲಿ ನಿಮ್ಮ ಬಡ್ಜೆಟ್ ಪ್ರಕಾರ ಎಷ್ಟು ಎಸ್ಟಿಮೇಟ್ ಇತ್ತು, ಎಷ್ಟು ಬಂದಿದೆ ಎನ್ನುವ ಬಗ್ಗೆ ವಿವರ ಕೊಟ್ಟಿಲ್ಲ; ಖರ್ಚಿನ ವಿವರ ಕೊಟ್ಟಿಲ್ಲ. ಇಲ್ಲಿ ಕೊಟ್ಟಿರತಕ್ಕ ಪ್ರತಿಯೊಂದು ಡಿಮ್ಯಾಂಡಿಗೂ ಕೂಡ "This will be met out of appropriation and savings" ಎನ್ನುವ ವಾದ ಕೇಳಿರತಕ್ಕದ್ದು "It is only a window-dressing and not a real fact." ಎಂದು ಹೇಳಬೇಕಾಗುತ್ತದೆ. ಮತ್ತು ಅನೇಕ ಸಂದರ್ಭದಲ್ಲಿ ಬಡ್ಜೆಟ್ ಮಾಡಿದಾಗ ಇವನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅದುದರಿಂದ ಇವನ್ನು ಸೇರಿಸಬೇಕಾಗಿದೆ ಎಂದು ಹೇಳುತ್ತಿದ್ದೇನೆ. ಅದುದರಿಂದ ಬಡ್ಜೆಟಿಂಗ್ ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ ಎನ್ನುವ ಆರೋಪ ಹೇಳಬೇಕಾಗಿದೆ. ಅದಕ್ಕೆ ಸಾಕಾದಷ್ಟು ಎಚ್ಚರಿಕೆ ತೆಗೆದು ಕೊಳ್ಳುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದರ ಜೊತೆಗೆ ತಮ್ಮ ಭಾಷಣ ದಲ್ಲಿ, ನಮ್ಮ ಬಡ್ಜೆಟನ್ನು ಮಂಡಿಸುವಾಗ ನಮ್ಮ ಅನ್ ಎಂಪ್ಲಾಯ್‌ಮೆಂಟ್ ಬಗೆಹರಿ ಸುತ್ತೇವೆ, ಗರೀಬಿ ಹಠಾವೋ ಹೋಗಿಸುತ್ತೇವೆ, ಉತ್ಪನ್ನವನ್ನು ಅನೇಕರೀತಿಯಲ್ಲಿ ಹೆಚ್ಚು ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಆ ಭರವಸೆ ಯಾವುದೂ ಈಡೇರ ಲಿಲ್ಲ. ಸಾಮಾನುಗಳ ಬೆಲೆ ಯದ್ವಾತದ್ವಾ ಏರುತ್ತಿದೆ. ಮನುಷ್ಯ ಜೀವನ ಮಾಡು ವುದಕ್ಕೆ ಕಷ್ಟವಾಗಿದೆ. ಹೀಗಿರುವ ಸಂದರ್ಭದಲ್ಲಿ ಸರ್ಕಾರ ಹಣಕಾಸಿನ ಹಿಡಿತವಿಲ್ಲದೆ, ಹಣಕಾಸು ವ್ಯಯ ಮಾಡುವ ರೀತಿಯಲ್ಲಿ ಪೂರ್ತಿ ನಿಶಕ್ತವಾಗಿದೆ ಸರಿಯಾದ ರೀತಿ ಯಲ್ಲಿ ಮಾಡಲಿಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಅನೇಕ ಸಂದರ್ಭ ಗಳಲ್ಲಿ ನೀವು ಕೊಡತಕ್ಕ ಸಂಬಳ ಸಾರಿಗೆಗಳು ಹೆಚ್ಚು ಕೊಟ್ಟಿದ್ದೀರೇ ಹೊರತು ಆಗ ಬೇಕಾದ ಡೆವಲಪ್‌ಗೆ ಹಣ ಸಾಲುವುದಿಲ್ಲ ಎಂದು ಡಿಮ್ಯಾಂಡ ನಂಬರ ೩೩ ರಲ್ಲಿ ಕೊಟ್ಟಿರತಕ್ಕ ಎಕ್ಸಪ್ಲನೇಟರಿ ನೋಟನಲ್ಲಿ ಎಸ್ಟಾಬ್ಲಿಷಮೆಂಟ್ ಫಾರ್ ರಿಲೀಫ ಸೆಂಟರ್ಸಗೆ ಎಸ್ಟಾಬ್ಲಿಷಮೆಂಟಗೆ ೧ ಲಕ್ಷ ೭೫ ಸಾವಿರ ಖರ್ಚು ಮಾಡಿದ್ದೀರಿ. ಆದರೆ ಒಟ್ಟು ಸೆಂಟ

ರಗೆ ಖರ್ಚಾಗಿರತಕ್ಕ ೩ ಲಕ್ಷ ೩೨ ಸಾವಿರದಲ್ಲಿ ಅರ್ಧಭಾಗಕ್ಕಿಂತ ಹೆಚ್ಚಿಗೆ ಎಸ್ಟಾ, ಬ್ಲಿಷಮೆಂಟೇ ತಿಂದು ಹಾಕಿದೆ. ಈ ರೀತಿ ಎಸ್ಟಾಬ್ಲಿಷಮೆಂಟನ್ನು ಗೆಡಂಭೂತವಾಗಿ ಬೆಳೆಸಿಕೊಂಡು ಹೋಗುತ್ತಿದ್ದೀರಿ. ಬೇಕಾದವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಆಫೀಸರ್ಸ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಅಡೀಷನಲ್ ಡೈರೆಕ್ಟರ್ಸ್, ಜಾಯಿಂಟ ಡೈರಿಕ್ಟರ್ಸನ್ನು ಹೆಚ್ಚು ಮಾಡುತ್ತಾ ಇರತಕ್ಕದ್ದು, ಅವರಿಗೆ ಬೇಕಾದಂಥ ಇಲಾಖೆಯನ್ನು ಹೆಚ್ಚು ಮಾಡುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಎಕಾನಮಿ ಮಾಡಬೇಕೆಂದು ಡೆವಲಪಮೆಂಟ ಪರ್ಪಸಗೆ ಹಣ ಒದಗಿಸಬೇಕು ಎಂದು ಈ ರೀತಿ ಯಾವುಯಾವುದೋ ಒತ್ತಾಯ ಬಂದಾಗ ಹೊಸ ಹೊಸ ಹುದ್ದೆಗಳನ್ನು ಹೆಚ್ಚು ಮಾಡುವುದು ಡಿಪಾರ್ಟಮೆಂಟಗಳನ್ನು ಹೆಚ್ಚು ಮಾಡುವುದು ಬಹಳ ಶೋಚನೀಯವಾದ ವಿಚಾರ. ಹೀಗಿದ್ದರೆ ಇವತ್ತಲ್ಲ ನಾಳೆ ಎಸ್ಟಾಬ್ಲಿಷ್‌ಮೆಂಟ ಚಾರ್ಜಿಸ್ ಸರ್ಕಾರದ ವರಮಾನವನ್ನು ತಿನ್ನತಕ್ಕ ಸಂದರ್ಭ ಬರಬಹುದು.

ನಮ್ಮ ಡೆವಲಪ್‌ಮೆಂಟ ಪರ್ಪಸ್‌ಗೆ ಅನೇಕ ಸಂದರ್ಭದಲ್ಲಿ ಹಣ ಉಳಿಯದೇ ಇರತಕ್ಕಂಥ ಸಂದರ್ಭ ಬರಬಹುದು. ಆದುದರಿಂದ ತಾವು ಖರ್ಚು ಮಾಡುವಾಗ ಎಚ್ಚರಿಕೆಯಿಂದ ನೋಡಿ ಖರ್ಚು ಮಾಡಬೇಕು. ಹಾಗೆ ಯೋಚನೆ ಮಾಡದೆ ಖರ್ಚು ಮಾಡಿದರೆ ಆಮೇಲೆ ಅವರ ಪೂರ್ತಿಕೆಯನ್ನು ಈಡೇರಿಸುವುದಕ್ಕಾಗುವುದಿಲ್ಲ. ಮೊದಲು ಯಾವ ಕೆಲಸಕ್ಕಾದರೂ ಆಗಲಿ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದು ಕೊಳ್ಳುವಾಗ ಆ ಕೆಲಸಕ್ಕೆ ತಕ್ಕಂತೆ ತೆಗೆದುಕೊಳ್ಳಬೇಕು. ಹಾಗೆ ಮಾಡದೆ ಮೊದಲು ಹೆಚ್ಚಾಗಿ ಲೋಕಲ್ ಕ್ಯಾಂಡಿಡೇಟ್ಸ ತೆಗೆದುಕೊಳ್ಳುವದು ಅನಂತರ ಅವರನ್ನು ರಿಟ್ರೆನಡ್ ಮಾಡುವದು ಇದು ಸರಿಯಲ್ಲ. ಸುಮ್ಮನೆ ಸಂಖ್ಯಾಬಲ ನೋಡಿಕೊಂಡು ಕೆಲಸಕ್ಕೆ ತೆಗೆದುಕೊಳ್ಳುವದು ಸರಿಯಲ್ಲ. ಇದರಿಂದ ಬರೀ ಸಂಖ್ಯಾಬಲ ಜಾಸ್ತಿಯಾಗುತ್ತದೇ ಹೊರತು ಡಿಪಾರ್ಟಮೆಂಟ್ ಕೆಲಸ ಸರಿಯಾಗಿ ನಡೆಯುವದಿಲ್ಲ ಅಲ್ಲದೆ ಸರ್ಕಾರದಿಂದ ಮುಡ್ಡೂ ಕೂಡ ಜಾಸ್ತಿ ಖರ್ಚಾಗುತ್ತದೆ. ಆದುದರಿಂದ ಕೆಲಸಕ್ಕೆ ತೆಗೆದುಕೊಳ್ಳುವಾಗ ಎಷ್ಟು ಬೇಕಾಗುತ್ತದೋ ಅಷ್ಟನ್ನು ಮಾತ್ರ ತೆಗೆದುಕೊಂಡರೆ ಒಂದು ರಿಟ್ರೆಂಚಮೆಂಟ ಮಾಡುವ ಪ್ರಶ್ನೆಯಾಗಲೀ ಅಥವಾ ಹೆಚ್ಚು ಖರ್ಚು ಬರುವದಾಗಲೀ ಇರುವದಿಲ್ಲ.

ಇನ್ನು ಡಿಮ್ಯಾಂಡ ನಂಬರ ೧೭ರಲ್ಲಿ ಎಜುಕೇಶನ್ ಎಕ್ಸಕ್ಲೂಡಿಂಗ ಯೂತ್ ಸರ್ವಿಸ್‌ನಲ್ಲಿ ನ್ಯಾಷನಲ್ ಫಿಟ್‌ನೆಸ್ ಕಾರ್ಪ್ಸ ತೆಗೆದುಕೊಂಡರೆ ಅವರನ್ನು ಕಿತ್ತು ಹಾಕತಕ್ಕೇಕ ಎನ್ನುವ ಕೂಗು ಇದೆ. ಆದುದರಿಂದ ಈ ಬಗ್ಗೆ ಖರ್ಚು ಮಾಡುವಾಗ ಪೂರ್ತಿಯೇ ಯೋಚನೆ ಮಾಡಿ ಆ ಕೆಲಸಕ್ಕೆ ಎಷ್ಟು ಸಂಖ್ಯೆ ಬೇಕೋ ಅಷ್ಟನ್ನು ತೆಗೆದು ಕೊಂಡಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ.

ಇನ್ನು ಡಿಮ್ಯಾಂಡ ನಂಬರ ೨೦ರಲ್ಲಿ ಹೇಳುವದಾದರೆ ಈಗ ನಮ್ಮ ರಾಜ್ಯದಲ್ಲಿ

ಕೋ ಆಪರೇಟೀವ್ ಷುಗರ ಫ್ಯಾಕ್ಟರೀಸ್ ಏನು ಇವೆ ಅದರ ಜೊತೆಗೆ ಇನ್ನೂ ೧೦ ಷುಗರ್ ಫ್ಯಾಕ್ಟರೀಸ್ ಮಾಡಬೇಕು ಅಂತ ಇದ್ದಾರೆ. ಒಂದು ಕಡೆ ನೋಡಿದರೆ ಅನೇಕ ಷುಗರ್ ಫ್ಯಾಕ್ಟರಿಗಳಲ್ಲಿ ಷುಗರ್‌ಕೇನ್ ಇಲ್ಲದೇ ನಿಪ್ರೆ ಮಾಡುತ್ತಾ ಇವೆ. ಇನ್ನೊಂದು ಕಡೆ ನೋಡಿದರೆ ಕೆಲವು ಕಬ್ಬನ್ನು ಉಪಯೋಗಿಸಿ ಏನು ಸಕ್ಕರೆ ಆಗುತ್ತದೋ ಆ ಸಕ್ಕರೆ ಬೆಲೆ ಒಂದಕ್ಕೆರಡರಷ್ಟು ಹೆಚ್ಚುತ್ತಾ ಇದೆ.

ಇನ್ನು ಡಿಮ್ಯಾಂಡ ನಂಬರ ೩೩ರಲ್ಲಿ ನೋಡಿದರೆ ಹೋಲ್‌ಸೇಲ್ ಸ್ಟೋರ್ಸ್ ಗಳನ್ನು ಮಾಡುವದಕ್ಕೆ ಸಹಾಯಧನ ಕೊಡುತ್ತಿದ್ದಾರೆ. ಅದರಲ್ಲಿ ಕೆಲವು ಸ್ಟೋರ್ಸ್ ಗಳನ್ನು ಬಿಟ್ಟರೆ ಬಾಕಿಯವೆಲ್ಲಾ ಪಾಪರ್ ಆಗಿವೆ. ಉದಾಹರಣೆಗೆ ಚಾಮರಾಜ ಪೇಟೆಯಲ್ಲಿ ಒಂದು ಸೊಸೈಟಿ ಇತ್ತು. ಅದು ಬಹಳ ಚನ್ನಾಗಿ ನಡೆಯುತ್ತಿತ್ತು. ಈವೊತ್ತಿನ ದಿವಸ ಅದು ಮುಚ್ಚಿಹೋಗಿ ಅದರಲ್ಲಿರುವ ಸಾಮಾನುಗಳನ್ನೆಲ್ಲಾ ಹರಾಜಿಗೆ ಇಟ್ಟಿದ್ದಾರೆ. ಅಲ್ಲಿರುವ ಹಳೇ ಸಾಮಾನುಗಳನ್ನು ಶಿಫ್ಟಿ ಪರ್ಸೆಂಟ ರಿಬೇಟ ಕೊಡುತ್ತೇವೆ ಎಂದು ಹೇಳುತ್ತಾರೆ. ಈ ರೀತಿಯಾಗಿ ಸಾರ್ವಜನಿಕರ ದುಡ್ಡನ್ನು ಹಾಳು ಮಾಡುವ ಬದಲಾಗಿ ತಾವೇ ಎಚ್ಚರಿಕೆ ವಹಿಸಿ ಈ ಅನಾವಶ್ಯಕವಾದ ಖರ್ಚುಗಳನ್ನು ಮಾಡದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ ೨೭ರಲ್ಲಿ ಹೆಡ್ಯೂಲ್ಡ ಕ್ಯಾಸ್ಟ ಅಂಡ್ ಹೆಡ್ಯೂಲ್ಡ ಟ್ರೈಬ್ಸ್ ಅವರಿಗೆ ಅನಕೂಲ ಮಾಡಿಕೊಡಬೇಕು ಎಂದು ಹೇಳುತ್ತೀರಿ. ಅವಕ್ಕೆ ನನ್ನ ವಿರೋಧ ಇಲ್ಲ. ಆದರೆ ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ಇನ್ನೂ ಬೇರೆ ಬೇರೆ ಜನಾಂಗದಲ್ಲೂ ಕೂಡ ಹಿಂದುಳಿದ ಜನ ಏನು ಇದ್ದಾರೊ ಅವರಿಗೂ ಕೂಡ ಮುಂದಕ್ಕೆ ತರುವಂಥ ಒಂದು ಯೋಜನೆ ಮಾಡಬೇಕು ಎನ್ನುವದನ್ನು ನಾನು ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮತ್ತು ಈಗ ತಾವು ಏನು ಹೇಳುತ್ತೀರಿ ಎಂದರೆ ಸೆಂಟ್ರಲ್‌ನಿಂದ ಹಣ ಎಷ್ಟು ಬರಬೇಕೋ ಅಷ್ಟು ಬರಲಿಲ್ಲ ಎಂದು. ಮತ್ತು ಇದಕ್ಕೂ ಕೂಡ ಸೆಂಟ್ರಲ್‌ನಿಂದ ಹಣ ಬರಬೇಕು ಎಂದು ಹೇಳುತ್ತೀರಿ ಆದುದರಿಂದ ನನ್ನ ಪ್ರಶ್ನೆ ಏನೆಂದರೆ ನಿಮಗೆ ಈ ಬಗ್ಗೆ ಸೆಂಟ್ರಲ್‌ನಿಂದ ಎಷ್ಟು ಬರಬೇಕಾಗಿತ್ತು? ಈಗ ಎಷ್ಟು ಬಂದಿದೆ ಅದರ ವಿವರಣೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಈ ವಿವರಣೆ ಕೊಡದೇ ಇರತಕ್ಕಂಥಾದ್ದು ನಮಗೆ ಬಹಳ ಅನುಮಾನಕ್ಕೆ ಆಸ್ಪದವಾದಂಥ ವಿಚಾರವಾಗಿದೆ.

ಇನ್ನು ಡಿಮ್ಯಾಂಡ ನಂಬರ ೩೩ ಫ್ಯಾಮಿನ್ ರಿಲೀಫ್ ಬಗ್ಗೆ ಹೇಳುವದಾದರೆ ಇದಕ್ಕೆ ಬೇಕಾದಷ್ಟು ಹಣ ಖರ್ಚಾಗಿದೆ. ಇದರ ಕೆಲಸ ನೋಡಿದರೆ ಇದರಲ್ಲಿ ಹೆಚ್ಚು ಹಣ ವ್ಯರ್ಥವಾಗಿರುವದು ಕಂಡುಬರುತ್ತದೆ. ಏತಕ್ಕೆಂದರೆ ನಾನು ಆ ಪ್ರದೇಶದಲ್ಲಿ ಹೋಗಿ ಸುತ್ತಿಕೊಂಡು ನೋಡಿಕೊಂಡು ಬಂದಿದ್ದೇನೆ. ಉದಾಹರಣೆ ಹೇಳುವದಾದರೆ ಅಲ್ಲಿ ಮಾಡಿರತಕ್ಕಂಥ ಬಂಡುಗಳ ಕೆಲಸ ನೋಡಿದರೆ ಅವೆಲ್ಲಾ ಕೊಚ್ಚಿಕೊಂಡು ಹೋಗಿದೆ. ಆದುದರಿಂದ ಅದಕ್ಕೆ ಖರ್ಚು ಮಾಡಿರುವ ಹಣ ವ್ಯರ್ಥ ಎಂದು ಹೇಳುತ್ತೇನೆ ಇದನ್ನು ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ.

ಮತ್ತು ಜಲ್ಲಿ ಗುಡ್ಡೆ ನೋಡಿದರೆ ಅದು ಎಲ್ಲಿ ಕೋದರೂ ಬಿದ್ದಿದೆ. ಅದನ್ನು ಹೇಗೆ ಉಪಯೋಗಿಸಬೇಕು ಎನ್ನುವದು ಗೊತ್ತಿಲ್ಲ ಮತ್ತು ಅದರಿಂದ ಯಾವ ರೀತಿ ಪ್ರಯೋಜನ ತೆಗೆದುಕೊಳ್ಳಬೇಕು ಎನ್ನುವದೂ ಗೊತ್ತಿಲ್ಲ. ಆದುದರಿಂದ ಈಗ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಅದು ಏನೆಂದರೆ ಈ ಫ್ಯಾಮಿನ್ ರಿಲೀಫ್‌ಗೆ ಎಷ್ಟು ದುಡ್ಡನ್ನು ಖರ್ಚು ಮಾಡಿದ್ದೀರಿ ಮತ್ತು ಅದರಿಂದ ಎಷ್ಟುಮಟ್ಟಿಗೆ ಫಲಕಾರಿಯಾಗಿದೆ ಮತ್ತು ಅದರಿಂದ ಜನರಿಗೆ ಎಷ್ಟರ ಮಟ್ಟಿಗೆ ರಿಲೀಫ್ ಸಿಕ್ಕಿತು ಮತ್ತು ಆ ದುಡ್ಡಿಗೆ ಏನು ಪ್ರತಿಫಲ ದೊರಕಿದೆ ಇದನ್ನು ಅಸೆಸ್‌ಮೆಂಟ್ ಮಾಡಿ ನಮ್ಮ ಮುಂದೆ ಇಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಏತಕ್ಕೆಂದರೆ ಆ ಪ್ರದೇಶವನ್ನು ನಾನು ನೋಡಿಕೊಂಡು ಬಂದಮೇಲೆ ಆ ಕೆಲಸಕ್ಕೆ ಹೆಚ್ಚು ಹಣ ವ್ಯರ್ಥವಾಗಿದೆ ಎಂದು ನನ್ನ ವನಸ್ಸಿಗೆ ವ್ಯಕ್ತವಾಗಿದೆ. ಅವರ ಕೈಯಲ್ಲೇ ಕೆಲಸ ತೆಗೆದುಕೊಂಡು ಆ ಕೆಲಸಕ್ಕೆ ಅಷ್ಟು ಹಣ ವ್ಯರ್ಥವಾಗುವ ಬದಲು ಹಾಗೆಯೇ ಸುಮ್ಮನೆ ಅವರ ಕೈಗೆ ದುಡ್ಡು ಕೊಟ್ಟುಬಿಟ್ಟಿದ್ದರೆ ಚೆನ್ನಾಗಿತ್ತು. ಆದುದರಿಂದ ಅದರ ಒಂದು ಅಸೆಸ್‌ಮೆಂಟ ಇಲ್ಲಿ ಇಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಅನೇಕ ಕಡೆಗಳಲ್ಲಿ ನೂಲಿನ ಅಭಾವ ಇದೆ. ನಾವು ಅಂದರೆ ಎಸ್ಟಿಮೇಟ ಕಮೀಟಿಯವರು ಟೂರ್‌ಗೆ ಹೋಗಿದ್ದಾಗ ಅನೇಕ ಕಡೆಗಳಲ್ಲಿ ನಮ್ಮನ್ನು ಘೇರಾವೋ ಮಾಡಿ ನಮಗೆ ಕೆಲಸ ಇಲ್ಲ ನೂಲು ಇಲ್ಲ, ನಮಗೆ ನೂಲನ್ನು ಒದಗಿಸಿ ಕೊಡಬೇಕು ಎಂದು ನಮ್ಮನ್ನು ಒತ್ತಾಯಪೂರ್ವಕವಾಗಿ ಕೇಳಿದರು. ಆದುದರಿಂದ ಅವರುಗಳಿಗೆ ನೂಲನ್ನು ಒದಗಿಸಿ ಕೊಡುವದರ ಬಗ್ಗೆ ತಾವು ವಿಫಲರಾಗಿದ್ದೀರಿ. ಈ ಬಗ್ಗೆ ತಾವು ಸರಿಯಾದ ಆಸಕ್ತಿ ವಹಿಸಲಿಲ್ಲ. ಆದುದರಿಂದ ಈಗಲಾದರೂ ಆ ನೇಯ್ಗೆಯವರ ಕಷ್ಟ ಪರಿಸ್ಥಿತಿ ಅರಿತುಕೊಂಡು ಅವರಿಗೆ ನೂಲನ್ನು ಎದಗಿಸಿ ಕೊಡುವ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವದಕ್ಕೆ ಇಷ್ಟಪಡುತ್ತೇನೆ.

ಇನ್ನು ಡಿವ್ಯಾಂಡ ನಂಬರ ಳಳರ ಬಗ್ಗೆ ಹೇಳುವದಾದರೆ ಗದಗ ಕೋ-ಆಪರೇಟೀವ ಟೆಕ್ಸಟೈಲ ಮಿಲ್, ಹುಲಕೋಟಿ ಅವರಿಗೆ ೫೫ಲಕ್ಷ ರೂಪಾಯಿಗಳನ್ನು ಷೇರ ಕ್ಯಾಪಿಟಲ್ ಆಗಿ ಕೊಟ್ಟಿದ್ದೀರಾ. ಅವರ ಒರಿಜಿನಲ್ ಪ್ರಾಜೆಕ್ಟ ಏನು ಇದೆ ಅನ್ನುವದನ್ನು ನಾನು ನೋಡಿದ್ದೇನೆ. ಆ ಒರಿಜಿನಲ್ ಪ್ರಾಜೆಕ್ಟನಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನಿಂದ ೫೫ಲಕ್ಷ ರೂಪಾಯಿ ತೆಗೆದುಕೊಳ್ಳುತ್ತೇನೆ ಎಂದು ಅದರಲ್ಲಿ ಇರಲಿಲ್ಲ. As an after thought this artificial necessity was created. ಆದುದರಿಂದ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದರಲ್ಲಿ ಖರ್ಚು ಮಾಡಿರತಕ್ಕಂಥ ಹಣ ನಿಮ್ಮ ಇಷ್ಟ ಪ್ರಕಾರ ಖರ್ಚು ಮಾಡುತ್ತೀರೇ ಹೊರತು ಜನಗಳಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಖರ್ಚು ಮಾಡುತ್ತಾ ಇಲ್ಲ.

ಇನ್ನು ಯೂರಿಯಾ ಮತ್ತು ಫರ್ಟಿಲೈಜರ್ಸ ಬಗ್ಗೆ ಹೇಳುವದಾದರೆ ಇದಕ್ಕೆ ದುಡ್ಡಿನ ಬೇಡಿಕೆ ಇಟ್ಟಿದ್ದೀರಾ. ನಾನು ಹೋದ ಕಡೆಯಲ್ಲಿ ಅನೇಕ ಕಡೆ ನೋಡಿದೆ. ಕೋಟ್ಯಾಂತರ ರೂಪಾಯಿ ಸೀಡ್ಸನ್ನು, ಬಹಳ ಕಡಿಮೆ ದರ್ಜೆಯಲ್ಲಿರುವ ಸೀಡ್ಸನ್ನು

ರೈತರಿಗೆ ಕೊಟ್ಟು ಆದರಿಂದ ಬೆಳೆ ಸರಿಯಾಗಿ ಬರಲಿಲ್ಲಾ ಎಂದು ಅನೇಕ ದೂರುಗಳು ಬಂದಿವೆ. ಮತ್ತು ಗೊಬ್ಬರ ಹಂಚುವದರಲ್ಲೂ ಕೂಡ ಸರ್ಕಾರ ಪೂರ್ತಾ ವಿಫಲ ವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಇದಕ್ಕೆ ಸರ್ಕಾರ ಗಮನ ಕೊಡದೇ ಹೋದರೆ ಪರಿಸ್ಥಿತಿ ಹದಗೆಟ್ಟೀತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗ ಏನಾಗಿದೆ ಎಂದರೆ ನಾವು ಪೂರ್ಣವಾಗಿ ಕೆಮಿಕಲ್ ಗೊಬ್ಬರ ವನ್ನೆ ನಂಬಿಕೊಂಡು ಈ ನ್ಯಾಚುರಲ್ ಗೊಬ್ಬರವನ್ನು ಕೈ ಬಿಟ್ಟಿದ್ದೇವೆ ಆ ಬಗ್ಗೆ ಗಮನ ಕೊಡುತ್ತಾ ಇಲ್ಲ. ಆದುದರಿಂದ ಈ ಕೆಮಿಕಲ್ ಗೊಬ್ಬರದ ಜೊತೆಗೆ ನ್ಯಾಚುರಲ್ ಗೊಬ್ಬರವನ್ನೂ ಕೂಡ ಒದಗಿಸುವದಕ್ಕೂ ಕೂಡ ಸಾಕಾದಷ್ಟು ಸರ್ಕಾರ ದವರು ಗಮನ ಕೊಡಬೇಕು ಎಂದು ಹೇಳುತ್ತೇನೆ. ಅನೇಕ ಕಡೆಗಳಿಂದ ದೂರು ಬರುತ್ತಾ ಇದೆ. ಅದು ಏನೆಂದರೆ ಈ ಯೂರಿಯಾ ಮತ್ತು ಫರ್ಟಿಲೈಜರ್ಸಿನಿಂದ ಬೆಳೆಗಳೆಲ್ಲಾ ಕೆಟ್ಟು ಹೋಗುತ್ತಾ ಇದೆ ಎಂದು ಆದುದರಿಂದ ಈ ಕೆಮಿಕಲ್ ಗೊಬ್ಬರದ ಜೊತೆಗೆ ನಮ್ಮ ಆರ್ಟಿಫಿಷಿಯಲ್ ಗೊಬ್ಬರದ ಕಡೆಗೂ ಸರ್ಕಾರ ತೀವ್ರ ಗಮನ ಕೊಡದೇ ಹೋದರೆ ನಮ್ಮ ದೇಶದ ಬೆಳೆಗೆ ಮತ್ತು ನಮ್ಮ ದೇಶದ ಆಹಾರೋ ತ್ಪಾದನೆಗೆ ಧಕ್ಕೆ ಬಂದು ತಲೆಕೆಳಗಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಈಗ ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತೇನೆ. ಈಗ ತಾವು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಫಾರ್ ದಿ ಇಯರ ೧೯೭೩—೭೪. (ಫಸ್ಟ್ ಇನ್‌ಸ್ಟಾಲ ಮೆಂಟ ಈ ವರದಿ ಇಟ್ಟಿದ್ದಿರಿ. ಇದರಲ್ಲಿ ಬೇಕಾದಷ್ಟು ಎಸ್ಟಿಮೇಟ್ ಬರುತ್ತದೆ. ಈ ರೀತಿ ಇನ್ನೊಂದು ಸಾರಿ ಎಸ್ಟಿಮೇಟ್ ಕೊಡುವಾಗ ತಾವು ಆ ವರ್ಷದ ಬಡ್ಜೆಟ್ಟಿನಲ್ಲಿ ತಮ್ಮ ರೆವಿನ್ಯೂ ಎಷ್ಟು ? ತಮ್ಮ ಎಕ್ಸ್‌ಪೆಂಡಿಚರ್ ಎಷ್ಟು ? ಮತ್ತು ನೀವು ಖರ್ಚು ಮಾಡುವ ದುಡ್ಡಿಗೆ ಅದರ ವಿವರಣೆ ಕೊಟ್ಟರೆ ಬಹಳ ಒಳ್ಳೆಯದು ? It is better when an estimate is given next time, a clear picture of income and expenditure is given. If you give us a picture as to how much you are going to get, how much adjustments and apportionments would be there, it is help us to know the real finacial position of the State.

ಆದುದರಿಂದ ಈ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಟೋಕನ್ ಗ್ರಾಂಟ್ ಎಂದು ತೆಗೆದುಕೊಳ್ಳುವುದರಿಂದ ತಾವು ಬರೀ ಬ್ಲಾಂಕ್ ಚೆಕ್ ತೆಗೆದುಕೊಂಡ ಹಾಗೆ ಆಗುತ್ತದೆ. ಹಣಕಾಸಿನ ಬಗ್ಗೆ ಒಂದು ಮಿತಿ ಇರುವುದಿಲ್ಲ. ತಮಗೆ ಯಾವರೀತಿ ಖರ್ಚುಮಾಡಬೇಕೋ ಆ ರೀತಿ ಖರ್ಚುಮಾಡುವುದಕ್ಕೆ ಅವಕಾಶವಾಗುತ್ತದೆ. ತಾವು ನಿಜವಾದ ಪರಿಸ್ಥಿತಿ ಏನು ಇದೆ ಎಂಬುದನ್ನು ನಮ್ಮ ಮುಂದೆ ಇಡಬೇಕೆಂದು ಕೇಳುತ್ತೇನೆ ಮತ್ತು ಆ ಹಣವನ್ನು ಸರಿಯಾದ ರೀತಿಯಲ್ಲಿ ವೆಚ್ಚ ಮಾಡಬೇಕಾಗುತ್ತದೆ.

ಇನ್ನು ಕೋ-ಆಪರೇಟೀವ್ ಸೆಕ್ಟಾರ್ ಬಗ್ಗೆ ನಾವು ಸ್ವಲ್ಪ ಗಮನ ಹರಿಸಬೇಕಾ ಗುತ್ತದೆ. ಕೋ-ಆಪರೇಟೀವ್ ಸೆಕ್ಟಾರ್ ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ನಮಗೆ ಅನುಕೂಲಕ್ಕಿಂತ ಅನಾನುಕೂಲಗಳೇ ಜಾಸ್ತಿ

ಯಾಗುತ್ತಿವೆ ಆದ್ದರಿಂದ ಇದರಲ್ಲಿ ನೀವು ಕೇಳಿರತಕ್ಕಂತಹ ಬೇಡಿಕೆಗಳು ತಾವು ಮಾಡಿರತಕ್ಕಂತಹ ಕೆಲಸಕಾರ್ಯಗಳು ಯಾವ ರೀತಿಯಲ್ಲೂ ಜನರಿಗೆ ಪುರೈಸಾಡಲು ಸಾಧ್ಯವಿಲ್ಲವೆಂದು ಹೇಳುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮುಲ್ಲೇಶ್ವರಂ):—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಹೆಚ್ಚುವರಿ ಬೇಡಿಕೆಯನ್ನು ಮಾನ್ಯ ಅರ್ಥಸಚಿವರು ಇಟ್ಟಿದ್ದಾರೆ ಅದನ್ನು ವಿರೋಧಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ವಿತ್ತರಾದ ಶ್ರೀಮಾನ ಬಂಗಾರಪ್ಪನವರು ಸಹಿತ ಹೇಳಿದರು ಅದು ಏನು ಎಂದರೆ ಈ ಸಪ್ಲಿಮೆಂಟರಿ ಡಿಮಾಂಡ್ ಇಡುವುದು ಎತರ್ಫೆಶ: ಸರಿಯೇ ಎಂದು, ಇದರ ಬಗ್ಗೆ ವಾದವಿವಾದಗಳು ನಡೆದಿವೆ. ಯಾವ ಸರ್ಕಾರ ತನ್ನ ಧೋರಣೆ ಏನು ಎನ್ನುವುದನ್ನು ಹೊರಡಿಸುತ್ತದೆ ಮತ್ತು ಅದರ ಆರ್ಥಿಕ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಯೋಜನೆ ಮಾಡಿರುತ್ತಾರೆ, ಅಂಥ ಒಂದು ಸರ್ಕಾರಕ್ಕೆ ಆಗಿಂದಾಗ್ಗೆ ಸಪ್ಲಿಮೆಂಟರಿ ಬಜೆಟ್‌ನ್ನು ಇಡುವ ಪರಿಸ್ಥಿತಿ ಬರುವುದಿಲ್ಲ. ಕೆಲವು ಸಮಯ ಅನಿವಾರ್ಯವಾದ ಕಾರಣಗಳಿಗೋಸ್ಕರ ಸಪ್ಲಿಮೆಂಟರಿ ಡಿಮಾಂಡ ಇಡಬೇಕಾಗಿ ಬರುತ್ತದೆ. ಅಂಥ ಸಂದರ್ಭಗಳಲ್ಲಿ ನಾವು ಕೂಡ ಯೋಜನೆ ಮಾಡಬೇಕಾಗಿ ಬರುತ್ತದೆ. ನಮ್ಮ ಅನುಭವದ ಬಗ್ಗೆ ಹೇಳುವುದಾದರೆ ಬಜೆಟ್ ಅಧಿವೇಶನ ಆದ ೨–೩ ತಿಂಗಳಲ್ಲಿ ೨–೩ ಸಪ್ಲಿಮೆಂಟರಿ ಡಿಮಾಂಡ್ಸ್ ಬರುತ್ತವೆ. ತಮ್ಮ ಧೋರಣೆ, ಆರ್ಥಿಕ ನೀತಿ ಏನು ಎಂಬುದನ್ನು ಮೊದಲೇ ಯೋಜನೆ ಮಾಡಿದ್ದರೆ ಇದನ್ನು ತಪ್ಪಿಸಬಹುದಾಗಿತ್ತು ಎಂದು ಹೇಳುತ್ತೇನೆ. ಇನ್ನು ಎರಡನೆಯದಾಗಿ ಮಾನ್ಯ ಅರ್ಥಸಚಿವರು ಒಳ್ಳೆ ಬುದ್ಧಿವಂತರು. ಅವರು ಹೇಳುವುದು ಈ ಸಪ್ಲಿಮೆಂಟರಿ ಡಿಮಾಂಡಿನಲ್ಲಿ ಏನೂ ಇಲ್ಲ, ನೀವು ಏನು ಕೊಡಬೇಕಾಗಿಲ್ಲ ಎಂದು ಹೇಳುವುದು ಅಷ್ಟೇ ಮಾತ್ರವಲ್ಲ ಇನ್ನು ಒಂದು ಏನು ಹೇಳಿದ್ದಾರೆ ಎಂದರೆ ಎಕ್ಸ್‌ಪೆಂಡಿಚರ್ ಮಾಡುವುದರೊಳಗೆ ಎಷ್ಟೋ ಮಿತವ್ಯಯಗೊಳಿಸಿ ಸರ್ಕಾರ ಹಣ ಪಡೆಯುತ್ತದೆ. ಅದಕ್ಕೋಸ್ಕರ ಹೆಚ್ಚಿಗೆ ಖರ್ಚಾಗುವುದಿಲ್ಲ ಎಂದು ಹೇಳುತ್ತಾರೆ. ನಿಜವಾಗಿ ಅದು ಸಾಧ್ಯವಿಲ್ಲದೇ ಇರುವ ಮಾತು. ಬರೀ ಎಕಾನಮಿ ಈ ಒಂದು ಪರಿಸ್ಥಿತಿಯಲ್ಲಿ, ಸಾಧ್ಯವಿಲ್ಲದೇ ಇರುವ ಮಾತು. ಒಂದು ಕಡೆ ಹೇಳುತ್ತೀರಿ ನಮ್ಮ ರಾಜ್ಯಸರ್ಕಾರದ ನೌಕರರು ಸಂಬಳ ಜಾಸ್ತಿ ಕೊಡಿ ಅಥವಾ ಡಿ. ಎ. ಪ್ಯಾರಿಟಿ ಕೊಡಿ ಎಂದು ಕೇಳಿದರೆ ಎಕಾನಮಿ ಮಾಡಬೇಕು ಎಂದು ಹೇಳುತ್ತೀರಿ ನಿಮಗೆ ಬೇಕಾದರೆ ಹೊಸಹೊಸ ಡಿಪಾರ್ಟ್‌ಮೆಂಟ್ ಸೃಷ್ಟಿ ಮಾಡುತ್ತೀರಿ. ಉದಾಹರಣೆಗೆ ಹೇಳುವುದಾದರೆ ಎಷ್ಟೋ ಕಾರ್ಪೊರೇಷನ್‌ಗಳನ್ನು ರಚನೆ ಮಾಡುತ್ತೀರಿ ಹೇಳಬೇಕಾದರೆ ಸೀಡ್ಸ್ ಕಾರ್ಪೊರೇಷನ್, ಫಾರೆಸ್ಟ್ ಕಾರ್ಪೊರೇಷನ್ ಮತ್ತೆ ಫುಡ್ ಕಾರ್ಪೊರೇಷನ್, ಷೀಪ್ ಮತ್ತು ವೂಲ್ ಬೋರ್ಡುಗಳು ಎಂದು ಬೇಕಾದಷ್ಟು ಕಾರ್ಪೊರೇಷನ್ ಮತ್ತು ಬೋರ್ಡುಗಳನ್ನು ರಚನೆಮಾಡುತ್ತೀರಿ ಇದ್ದಂಥ ಈ ಬೋರ್ಡುಗಳ ಜೊತೆಗೆ ಶುಗರ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಇನ್ನೊಂದು ಮಾಡಿದ್ದೀರಿ. ಇಷ್ಟೆಲ್ಲಾ ಹೊಸಹೊಸ ಕಾರ್ಪೊರೇಷನ್ ಮತ್ತು ಬೋರ್ಡುಗಳನ್ನು ಏತಕೆ

ಮಾಡುತ್ತೀರಿ? ಇದರಿಂದ ನಿಮ್ಮ ಖರ್ಚು ಕಡಿಮೆಯಾಗುತ್ತದೆಯೇ ಎಂದು ಮಾನ್ಯ ಮಂತ್ರಿಗಳಿಗೆ ಕೇಳುತೇನೆ. ಅದನ್ನು ಕೇಳಿದರೆ ಅವರು ಎಫಿಷಿಯೆನ್ಸಿಗೋಸ್ಕರ ಬೇಕು ಎಂದು ಹೇಳುತ್ತಾರೆ. ನನಗೆ ಏನು ಎಂದರೆ ಶ್ರೀವಾನ್ ಎ. ಜಿ. ರಾಮಚಂದ್ರರಾವ್ ರವರು ಒಂದು ರಿಪೋರ್ಟು ಕೊಟ್ಟಿದ್ದರು ಅದರಲ್ಲಿ ಒಂದು ಯಾವುದಾದರೂ ಅರ್ಜಿ ಅಥವಾ ಪತ್ರ ವಿಧಾನಸೌದಕ್ಕೆ ಬಂದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಸುಮಾರು ೬೬ ದಿವಸಗಳು ಆಗುತ್ತವೆ ಎಂದು ಹೇಳಿರುತ್ತಾರೆ. ಅಷ್ಟಾದರೂ ಕೂಡ ಏನೋ ಒಂದು ಉತ್ತರಿಸಿಕ್ಕುತ್ತದೆ. ಇದು ನಿಮ್ಮ ಎಫಿಷಿಯೆನ್ಸಿಯೇ ಎಂದು ಕೇಳುತ್ತೇನೆ. ಪಲವಾರು ಅರ್ಜಿಗಳು ಬರುತವೆ ಇವೊತ್ತು ಪೆನ್‌ಷನ್ ಅರ್ಜಿಗಳು ಬಂದರೆ ರಿಟೈರ್ ಆದ ಮನುಷ್ಯ ಸತ್ತು ಹೋದಮೇಲೆ ಪೆನ್‌ಷನ್ ಸಿಕ್ಕುತ್ತದೆ ಇದರ ಬಗ್ಗೆ ಅನೇಕ ನಿದರ್ಶನಗಳು ಇವೆ. ಅದು ಇದೇ ಮನೆಯಲ್ಲಿ ಎಷ್ಟೋ ಸಾರಿ ಚರ್ಚೆಯಾಗಿದೆ. ಇರುವ ಕಾರ್ಪೊರೇಷನ್ ಮತ್ತು ಬೋರ್ಡುಗಳ ಜೊತೆಗೆ ಅಡಿಷನಲ್ ಆಗಿ ಫುಡ್ ಕಾರ್ಪೊರೇಷನ್ ಮಾಡಿದ್ದೀರಿ. ಮೊನ್ನೆ ದಿವಸ ಏಐಸಿಸಿ ಮೀಟಿಂಗ್‌ನಲ್ಲಿ ತಾವು ಸಹಿತ ಒಪ್ಪಿಗೆಕೊಟ್ಟಿದ್ದೀರಿ ಮಾನ್ಯ ಅರಸ್‌ರವರು ಸಹಿತ ಒಂದು ಫುಡ್‌ಕಾರ್ಪೊರೇಷನ್ ಆಫ್ ಇಂಡಿಯಾ ಇದ್ದರೂ ಕೂಡಾ ಒಂದೊಂದು ರಾಜ್ಯಕ್ಕೂ ಒಂದೊಂದು ಫುಡ್ ಕಾರ್ಪೊರೇಷನ್ ಬೇಕಾಗುತ್ತದೆ ಎಂದು ಹೇಳಿದರು ಎಂದು ಕೇಳಿದ್ದೇವೆ. ಆವರು ಅದಕ್ಕೆ ಒಂದು ಕಂಡೀಷನ್ ಹಾಕಿದ್ದಾರೆ ಅದು ಏನು ಎಂದರೆ ನೀವು ಬೇಕಾದರೆ ಫುಡ್‌ಕಾರ್ಪೊರೇಷನ್ ಮಾಡಿಕೊಳ್ಳಬಹುದು ಆದರೆ ಯಾವ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ನೌಕರರು ಇದ್ದಾರೆ ಅವರನ್ನೇ ನೀವು ನೇಮಕ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಅದರಿಂದ ನಿಮ್ಮ ಫುಡ್ ಕಾರ್ಪೊರೇಷನ್ ಎಫಿಷಿಯಂಟ್ ಆಗಿ ಕೆಲಸ ಮಾಡಬೇಕಾದರೆ, ಅವರನ್ನೇ ಇಟ್ಟುಕೊಂಡು ಅದೇ ಎಫಿಷಿಯೆನ್ಸಿ ನೀವು ಕೂಡ ಮಾಡಬೇಕಾಗುತ್ತದೆ. ಯಾವರೀತಿ ಮಾಡುತ್ತೀರಿ? ಅಡ್ಮಿನಿಸ್ಟ್ರೇಷನ್ ಚಾರ್ಜಸ್ ಇದು ಎಲ್ಲಾ ರಾಜ್ಯಗಳ ತಲೆಯಮೇಲೆ ಬೀಳುತ್ತದೆ. ನೀವು ಏನು ಆಹಾರ ಧಾನ್ಯಗಳನ್ನು ಮಾರಾಟ ಮಾಡುತ್ತೀರಿ ಅದು ಜನಗಳಮೇಲೆ ಹೊರೆ ಬೀಳುತ್ತದೆ. ಜಾಸ್ತಿ ಬೆಲೆ ಕೊಡಬೇಕಾಗುತ್ತದೆಯೇ ಹೊರತು ಖರ್ಚು ಕಡಿಮೆಯಾಗುವುದಿಲ್ಲ. ತಾವು ಏನು ಹೇಳುತ್ತೀರಿ ಎಂದರೆ ಇದು ಕೇವಲ ಟೋಕನ್ ಗ್ರಾಂಟ್ ಎಂದು. ಆದರೆ ಇದು ಒಂದು ಫೈನಾನ್ಸಿಯಲ್ ಟ್ರಸ್ಟ್ ಅಥವಾ ಜಾಣತನ ಎಂದು ಹೇಳ ಬೇಕಾಗುತ್ತದೆ. ಇದು ಸರಿಯಾದ ಯೋಜನೆಯಲ್ಲ ಎಂದು ಹೇಳಬೇಕಾಗುತ್ತದೆ. ಇನ್ನು ಕುದುರೆ ಮುಖ ಯೋಜನೆಗೆ ರಸ್ತೆ ಮಾಡುವುದಕ್ಕೋಸ್ಕರ ಸಪ್ಲಿಮೆಂಟರಿ ಬಡ್ಜೆಟ್ಟಿನ ೩೧ನೇ ಡಿಮ್ಯಾಂಡನಲ್ಲಿ "In the interest of Kuduremukh Iron ore project, Government of India had to take the construction and improvement to the Road from Malleswara to Mangalore Port for which a loan assistance of Rs. 166.47 lakhs has sanctioned".ಎಂದು ಹೇಳಿದ್ದೀರಿ; ಕುದುರೆಮುಖ

ಪ್ರಾಜೆಕ್ಟಿಗೆ ರೋಡ ಬರುವುದರಲ್ಲಿ ನನಗೆ ಬಿನ್ನಾಭಿಪ್ರಾಯವಿಲ್ಲ. ಆದರೆ ಕುದುರೆ ಮುಖ ಪ್ರಾಜೆಕ್ಟನ್ನೇ ಕೈ ಬಿಡುವಂಥ ಪರಿಸ್ಥಿತಿ ಬಂದಿದೆ ಎಂದು ಕೇಂದ್ರದವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ನಮಗೆ ತಿಳಿದು ಬಂದಿದೆ. ಮೊದಲೇ ಇದನ್ನು ಮಾಡಿದ್ದರೆ, ಜಪಾನಿನವರು ಇದರ ಅದಿರನ್ನು ತೆಗೆದುಕೊಂಡು ಹೋಗುತ್ತಿದ್ದರು, ಇದು ಯಾರ ಪಾಪವೋ ಗೊತ್ತಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿರುವುದರಿಂದ ಆಸ್ಟ್ರೇಲಿಯಾ ಮತ್ತು ಇತರೆ ವಿದೇಶಿಯವರು ಕುದುರೆಮುಖದ ಅದಿರನ್ನು ಕೊಂಡು ಕೊಳ್ಳುವುದಕ್ಕೆ ಮುಂದೆ ಬರಲಿಲ್ಲ. ಈ ಯೋಜನೆಯನ್ನೇ ಕೈ ಬಿಡುತ್ತೀವೆ ಎಂದು ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಅರ್ಥಸಚಿವರಿಗೆ ಇದರ ಬಗ್ಗೆ ತಿಳಿದಿರಬೇಕು. ಈ ಯೋಜನೆ ಬರಬೇಕು ಮತ್ತು ಇದು ಕಾರ್ಯಗತವಾಗಬೇಕು, ಏಕೆಂದರೆ ಇದು ಬೃಹತ್ ಯೋಜನೆ. ಆದ್ದರಿಂದ ಈ ಯೋಜನೆಯನ್ನು ಕಾರ್ಯಗತ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಆದರೆ ಈಗ ಕುದುರೆ ಮುಖದ ರೋಡ ಬಗ್ಗೆ ದುಡ್ಡನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ ಎಂದು ಹೇಳುವುದು ಸರಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಮುಖ್ಯವಾಗಿ ಈ ಯೋಜನೆಯನ್ನು ಕಾರ್ಯಗತ ಮಾಡಬೇಕು.

Sri M. Y. GHORPADE.—Government of India is giving money.

ಶ್ರೀ ಎಂ. ಎಸ್. ಕೃಷ್ಣನ್.—ಗವರ್ನಮೆಂಟ ಆಫ್ ಇಂಡಿಯಾದವರು ದುಡ್ಡು ಕೊಡುತ್ತಾರೆ ಎಂದರೆ ಅದು ರೋಡಿಗೆ ಮಾತ್ರ,, ಈಗ ಏನಾಗಿದೆ ಎಂದರೆ, ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾಯಿ ಹೊಲಿಸಿದಂತಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಕುದುರೆಮುಖ ಪ್ರಾಜೆಕ್ಟ ಬರುವುದು ನಿಮಗೆ ಅನುಮಾನವಾದರೆ, ಅದರ ರೋಡನ್ನೂ ಬಂದ ಮಾಡುವುದು ಎಂದು ತಮ ಅಭಿಪ್ರಾಯವೇ ?

ಎಂ. ಎಸ್. ಕೃಷ್ಣನ್.—ಎಷ್ಟು ರೋಡುಗಳು ಬಂದರೂ ಒಳ್ಳೆಯದೆ, ಕೆಟ್ಟದ್ದು ಎಂದು ನಾನು ಹೇಳುವುದಿಲ್ಲ. ಆದರೆ ಕುದುರೆಮುಖ ಯೋಜನೆಯ ಬಗ್ಗೆ ಸ್ಪಷ್ಟವಾಗಿ ತಾವು ಏನು ಹೇಳುತ್ತೀರಿ?

ಡಿಮ್ಯಾಂಡ ನಂಬರ ೩೩ರಲ್ಲಿ ಫ್ಯಾಮಿನ್ ರಿಲೀಫ್ ಬಗ್ಗೆ ಹೇಳಿದ್ದಿರಿ, ಫ್ಯಾಮಿನ್ ರಿಲೀಫ್ ಬಗ್ಗೆ ಹೇಳುತ್ತಾ ೩೦ಕ್ರೂ ಕಡಿಮೆ ಮಾಡಬೇಕು ಎಂದು ಹೇಳಿದ್ದೀರಿ. ಆದರೆ ಆಗಿದ್ದು ಏನು ಎಂದರೆ, ಸರ್ಕಾರ ಒಂದು ಕಾಲಕ್ಕೆ ತನ್ನಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣ ಇರಲಿಲ್ಲ ಎಂದು ಪೇಪರಿನಲ್ಲಿ ಬಂದಿತ್ತು. ನಿಮ್ಮ ಚೆಕ್ ಪೌನ್ಸ ಆಗುವಂಥ ಪರಿಸ್ಥಿತಿ ಬಂದಿತ್ತು. ಆದರೆ ಏನೋ ಪೌನ್ಸ ಆಗಲಿಲ್ಲ, ಆಗ ನೀವು ಓಡಿ ಹೋದ್ರಿ ಮತ್ತು ಒಂದು ವ್ಯವಸ್ಥೆ ಮಾಡಿದ್ರಿ. ಇದರ ಬಗ್ಗೆ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ರಿ, ಅದು ಅಷ್ಟು ಸಮಂಜಸವಾಗಿ ಕಾಣಲಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ —ಸೆಂಟ್ರಲ್ ಗವರ್ನಮೆಂಟಿನಿಂದ ದುಡ್ಡನ್ನು ತರ ಬೇಕಾದರೆ ಇವರು ಹಾಗೆ ಹೇಳಲೇಬೇಕು. ಅದು ತಮಗೆ ಗೊತ್ತಾಗಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ನಮ್ಮ ಸ್ನೇಹಿತರಿಗೆ ಆರ್ಥಿಕ ಪರಿಸ್ಥಿತಿಯ ಬಗ್ಗೆ ಗೊತ್ತಿದೆಯೋ ಗೊತ್ತಿಲ್ಲವೋ, ಗೊತ್ತಿಲ್ಲ. He is More royal than a thing ಫ್ಯಾಮಿನ್ ರಿಲೀಫ್ ಬಗ್ಗೆ ಹಣ ಕೊಡಬೇಕಾದರೆ ರಾಜ್ಯದಲ್ಲಿ ಫಿನಾನ್ಸಿನ ಮುಗ್ಗಟ್ಟು ಇದ್ದರೂ ಕೂಡ ಸೆಂಟರನವರು ಬ್ಲಾಂಕ್ ಚೆಕ್ ಕೊಡುತ್ತಾರೆ ಎಂದು, ಎಷ್ಟು ಬೇಕಾದರೂ ಖರ್ಚುಮಾಡಿ ಎಂದು ಹೇಳಿದರು. ಮುಖ್ಯ ಮಂತ್ರಿಗಳು ಮತ್ತು ಅರ್ಥ ಸಚಿವರು ಈ ರೀತಿ ಹೇಳಿದರು. ಆದರೆ ಬ್ಲಾಂಕ ಚೆಕ್ ಹೋಗಿ ತಮ್ಮ ಚೆಕ್ ಪೌನ್ಸ ಆಗುವ ಪರಿಸ್ಥಿತಿ ಬಂತು ಕೊನೆಗೆ ಅವರು ಏನು ಹೇಳಿದರು ಅಂದರೆ, ನಾವು ಇಷ್ಟೊಂದು ದುಡ್ಡನ್ನು ಕೊಡುತ್ತೇವೆಂದು ಹೇಳಲಿಲ್ಲ ಎಂದು. ಇಂಥ ಪರಿಸ್ಥಿತಿ ರಾಜ್ಯದಲ್ಲಿ ಇದ್ದರೆ ನಾವು ಇದನ್ನು ಎದುರಿಸಲೇಬೇಕಾಗುತ್ತದೆ, ಟೀಕೆ ಮಾಡಲೇಬೇಕಾಗುತ್ತದೆ. ಏಕೆಂದರೆ, ಇವರಿಗೆ ಸರಿಯಾದ ವಿವೇಚನೆ ಇಲ್ಲದೆ ಇದ್ದುದರಿಂದ, ಹಣವನ್ನು ಸರಿಯಾಗಿ ಕೇಂದ್ರದಿಂದ ಪಡೆಯದೆ ಇದ್ದುದರಿಂದ ತಮ್ಮ ಚೆಕ್ ಪೌನ್ಸ ಆಗುವ ಪರಿಸ್ಥಿತಿ ಬಂತು.

ಡಿವ್ಯಾಂಡ ನಂಬರ ೩೩ರಲ್ಲಿ ೧೭ ವೀವರ್ಸ ಸೆಂಟರಗಳನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ವೀವರ್ಸಗೆ ಅನುಕೂಲ ಮಾಡಿಕೊಡಬೇಕಾದುದು ಅತ್ಯಾವಶ್ಯಕ. ಇದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ವೀವರ್ಸ ಪ್ರಶ್ನೆ ಬಹಳ ಮುಖ್ಯವಾದುದು. ಇದರಲ್ಲಿ ಮಗ್ಗದವರು ಕೈ ಮಗ್ಗದವರು ಇತರೆಯವರು ಬರುತ್ತಾರೆ. ಮಾನ್ಯ ಸದಸ್ಯರಾದ ಭಂಗಿಯವರು ಈ ಸಭೆಯಲ್ಲಿ ಅವರ ಸಮಸ್ಯೆಗಳನ್ನು ಹೇಳಿ ಹೇಳಿ, ಒತ್ತಾಯ ಮಾಡಿಮಾಡಿ ಒಳ್ಳೆಯ ಕೆಲಸಗಳನ್ನು ಮಾಡಿದರು. ಈಗ ಏನೋ ಸ್ವಲ್ಪ ರಿಲೀಫ್ ಸಿಕ್ಕಿದೆ ಎಂದು ಅವರೇ ಹೇಳಿದ್ದಾರೆ. ಇನ್ನೂ ಸರಿಯಾಗಿ ಅವರಿಗೆ ರಿಲೀಫ್ ಸಿಕ್ಕಬೇಕಾಗಿದೆ. ಎಲ್ಲಾ ಕಡೆಯೂ ವೀವರ್ಸ ಸೆಂಟರಗಳು ಇಲ್ಲ, ರಾಜ್ಯದಾದ್ಯಂತ ವೀವರ್ಸ ಸೆಂಟರ ಆಗಬೇಕು. ಕೇವಲ ೧೭ ಕಡೆ ಆದರೆ ಮಾತ್ರ ಸಾಲದು. ಅನೇಕ ಕಡೆಗಳಲ್ಲಿ, ಬಹು ಮುಖ್ಯವಾದ ಸ್ಥಳಗಳಲ್ಲಿ ಈ ಸೆಂಟರ್ಸಗಳು ಇಲ್ಲ. ಮೊನ್ನೆ ಬೆಂಗಳೂರಿನಲ್ಲಿ ಸಿಲ್ಕು ವೀವರ್ಸ ಸಿಲ್ಕು ಬೆಲೆ ಹೆಚ್ಚಾಗಿದೆಯೆಂದು ಸತ್ಯಾಗ್ರಹ ಮಾಡುತ್ತಿದ್ದರು. ಸಿಲ್ಕನ್ನು ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ, ಪುತ್ತು ವಿದೇಶಕ್ಕೆ ರಫ್ತು ಮಾಡುತ್ತಾರೆ. ಇದರಿಂದ ನಮಗೆ ತೊಂದರೆಯಾಗಿದೆ ಎಂದು ಸತ್ಯಾಗ್ರಹ ಮಾಡಿದರು. ಇದು ತಮಗೆ ಗೊತ್ತಾಗಿರಬಹುದು. ತಾವೂ ಕೂಡ ಅದೇ ದಾರಿಯಲ್ಲಿ ಹೋಗುವುದರಿಂದ ಇದು ತಮಗೆ ಇವರ ಪ್ರಶ್ನೆ ಗೊತ್ತಾಗಿದೆಯೆಂದು ತಿಳಿದುಕೊಳ್ಳುತ್ತೇನೆ. ಎಲ್ಲಾ ಕಡೆಯೂ ಇದೇ ಪರಿಸ್ಥಿತಿ ಇದೆ. ಪರಿಸ್ಥಿತಿಗೆ ಬೇಕಾದಂಥ ಹಣವನ್ನು ಒದಗಿಸಿದ್ದೀರಾ? ಎಷ್ಟು ದೂರು ಒದಗಿಸಿದ್ದೀರಿ? ಏಕೆ ಒದಗಿಸಲಿಲ್ಲ. ಎನ್ನುವ ಪ್ರಶ್ನೆಯನ್ನು ನಾನು ತಮಗೆ ಹಾಕಬೇಕಾಗಿದೆ. ತಾವು ಇದನ್ನು ಮಾಡದೆ ಇರುವುದರಿಂದ ಸಿಲ್ಕು ನೇಕಾರರ ಪ್ರಶ್ನೆ ಬಹಳ ಉಲ್ಬಣವಾಗಿದೆ, ಕಠಿಣವಾಗಿದೆ,

ಇದರ ಬಗ್ಗೆ ತಮ್ಮ ಗಮನವನ್ನು ಹರಿಸಲೇಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಅದು ಏನೆಂದರೆ, ನಾನು ಮೊದಲೇ ಹೇಳಿದ ಹಾಗೆ ಬೇಕಾದಷ್ಟು ಕಾರ್ಪೊರೇಷನ್‌ಗಳನ್ನು ತಾವು ಮಾಡಿದ್ದೀರಿ. ಡಿಮ್ಯಾಂಡ್ ನಂಬರ ೫ಳರಲ್ಲಿ ನೋಡಿದರೆ, ಒಂದು ತಮಾಷೆ ಗೊತ್ತಾಗುತ್ತದೆ. For the purchase and distribution of seeds,... ಬೀಜಕ್ಕೆ ಮಾತ್ರ ಇಷ್ಟು ಕಾರ್ಪೊರೇಷನ್ನು ಇವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಮೈಸೂರು ಸ್ಟೇಟ್ ಕೋ-ಆಪರೇಟೀವ್ ಫೆಡರೇಷನ್; ಕರ್ನಾಟಕ ಸೀಡ್ಸ್ ಮಾರ್ಕೆಟಿಂಗ ಫೆಡರೇಷನ್ ಎಂದು ಒಂದು ಕೆಲಸ ಮಾಡುವುದಕ್ಕೆ ಮೂರು ಕಾರ್ಪೊರೇಷನ್ಸ್ ಇವು ಬೇಕೆ? ಇದು ನನ್ನ ಮೊದಲನೆಯ ಪ್ರಶ್ನೆ. ಇವುಗಳಲ್ಲಿ ತಮ್ಮ ರೂಲಿಂಗ ಪಾರ್ಟಿಯ ಎಂ. ಎಲ್. ಎ. ಗಳನ್ನು ಹಾಕುವುದಕ್ಕೆ ಮಾಡಿದ್ದಾರೆ ಎಂದು ನಾನು ಕೇಳಿದೆ. ಈ ಪದ್ಧತಿಯನ್ನು ತಾವು ಬಿಡಬೇಕು. It is said, The more the number of Corporations, the more the efficiency, the efficiency depends upon the men who are appointed to man these corporations and boards.

Smt. E. E. Vaz.—It is for decentralisation of work.

Sri M. S. Krishnan.—Decentralisation does not mean giving posts to MLAs of the Ruling party or to persons whom you want to favour whether fit or unfit. There is one corporation the sheep corporation or sheep board, where a retired personality who never knows anything about sheep excepting it, is made the Chairman.

ಇದೊಂದು ಆಸ್ಪೆಕ್ಟ ಬಿಡಿ. ಒಂದೇ ಕೆಲಸ ಮಾಡಲು ಮೂರು ಕಾರ್ಪೊರೇಷನುಗಳಿವೆ. ಇದು ಎಲ್ಲಿಯ ನ್ಯಾಯ? ಒಂದೇ ಕೆಲಸಕ್ಕೆ ಮೂರು ಕಾರ್ಪೊರೇಷನ್ನುಗಳು ಬೇಕೆ? ಸೀಡ್ಸ ಕಾರ್ಪೊರೇಷನ್ ಅವರ ಪಾಕೆಟ್ಟಿನಲ್ಲಿದೆ. ಮೂರೂ ಕೂಡ ಬೀಜವನ್ನು ಹಂಚುತ್ತವೆ. ಅದನ್ನು ಹಂಚಲು ಸರಿಯಾದ ವ್ಯವಸ್ಥೆಯಿಲ್ಲ. ಬೀಜ ಎಲ್ಲಿಗೆ ಹೋಗುತ್ತಿದೆ? ಇದು ಗೊತ್ತಿಲ್ಲ. ಇದರ ಬಗ್ಗೆ ಬೇಕಾದಷ್ಟು ದೂರುಗಳಿವೆ. ಇದಕ್ಕೆ ಒಂದೇ ಎಜೆನ್ಸಿಯಿರಬೇಕು, ಅದರ ಮೂಲಕ ಹಂಚಿಕೆಯಾಗಬೇಕು. ಬೇಕಾದರೆ ಈ ಕೆಲಸವನ್ನು ಶ್ರೀ ಕೆ. ಎಚ್. ಪಾಟೀಲರಿಗೆ ಕೊಡಿ, ಅವರು ಡೈನಮಿಕ್ ಪರ್ಸನ್. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಬೇಕಾದರೆ ಈ ಕೆಲಸ ವಹಿಸಿ: ಪರವಾಗಿಲ್ಲ. ಆದರೆ ಮಾಡುವ ವ್ಯವಸ್ಥೆ ಸರಿಯಾಗಿರಬೇಕು. ಸ್ಟೀಂ ರೋಲರನಂತೆ ಕೆಲಸ ಮಾಡಿದರೆ ಪ್ರಯೋಜನವಿಲ್ಲ. ಕೆಲವು ಸಂದರ್ಭಗಳಲ್ಲಿ ಹಾಗೆ ಮಾಡಬೇಕಾಗುತ್ತದೆ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಹಾಗೆ ಮಾಡಿದರೆ ರೋಡ ರೋಲರ್ ಆಗುತ್ತವೆ.

ಇನ್ನೊಂದು ವಿಷಯ, ಅದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಸಂಬಂಧಪಟ್ಟಿದೆ. ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಟಿಕ್ಸಟೈಲ ಮಿಲ್ಲು ಅಗ್ರೋ ಇಂಡಸ್ಟ್ರಿಯೇ ? ಅದು ಅಗ್ರೋ ಇಂಡಸ್ಟ್ರೀ ಎಂದು ತೀರ್ಮಾನಿಸಿ ಅದಕ್ಕೆ ಸಹಾಯ ಮಾಡಿರುವದು ಸರಿಯಲ್ಲ. ಇದು ನನ್ನ ಖಚಿತವಾದ ಅಭಿಪ್ರಾಯ. ಇದರ ಬಗ್ಗೆ ಸರಿಯಾಗಿ ವಿಮರ್ಶೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ನಾನು ಶಾಬಾಸಗಿರಿ ಕೊಡುತ್ತಿದ್ದೆ. ಗದಗಿನ ಮಿಲ್ಲಿಗೆ ಸಹಾಯ ಮಾಡಿದಂತೆ ಅದೇ ರೀತಿಯಲ್ಲಿ ಬೇರೆ ಕಾರ್ಪೊರೇಷನ್ ಕೇಳಿದಾಗ ಬೇರೆ ಸೊಸೈಟಿಯವರು ಕೇಳಿದಾಗ ಸಹಾಯ ಮಾಡಿದ್ದರೆ ಇದೇ ವೇಗದಲ್ಲಿ ಆಗ ಕೆಲಸ ಮಾಡಿದ್ದರೆ ಶಾಬಾಸಗಿರಿ ಕೊಡ ಬಹುದಾಗಿತ್ತು. ಯಾವ ಮಂತ್ರಿಗಳಿಗೋ ಬೇಕಾಗಿತ್ತು, ಅದಕ್ಕಾಗಿ ಸಹಾಯ ಮಾಡಿದ್ದಾರೆ. ಎಷ್ಟೋ ಎಂ. ಎಲ್. ಎ. ಗಳು ಕೇಳಿದರು. ಆಗ ಇಷ್ಟು ವೇಗದಲ್ಲಿ ಕೆಲಸ ಮಾಡಲಿಲ್ಲ. ಅದಕ್ಕೆ ತಯಾರಾಗಿರಲಿಲ್ಲ. ಅಧಿಕಾರವಿದೆ, ಏನು ಬೇಕಾದರೂ ಮಾಡಬಹುದು ಎಂದು ಮಾಡಿದ್ದಾರೆ. ಇದು ಅಧಿಕಾರದ ದುರುಪಯೋಗ. ನೀವೇನು ಹೇಳಿದರೂ ಇದನ್ನು ನಾನು ಒಪ್ಪುವದಿಲ್ಲ. ಶ್ರೀ ಹನುಮಂತಯ್ಯನವರು ಆಡ್ಮಿನಿಸ್ಟ್ರೇಟಿವ್ ರಿಫಾರಮ್ಸ್ ಕಮೀಟಿಯ ಛೇರ್ಮನ್ ಆಗಿದ್ದರು, ಅದಕ್ಕೆ ಮುಂಚೆ ಆ ಕಮೀಟಿಗೆ ಶ್ರೀ ಮುರಾರ್ಜಿಯವರು ಛೇರಮನ್ ಆಗಿದ್ದರು. ಆ ಕಮೀಟಿಯ ವರದಿಯಲ್ಲಿ ಆಡಳಿತದ ದೃಷ್ಟಿಯಿಂದ ಕೆಲವು ಒಳ್ಳೆಯ ಸಲಹೆಗಳಿವೆ. ಕಾನೂನು ಕಟ್ಟಳೆ ಏನೂ ನಡೆಯಬಾರದೆಂದು ಆ ಸಮಿತಿಯವರು ಆಡಳಿತದ ದೃಷ್ಟಿಯಿಂದ ಸಲಹೆ ಮಾಡಿದ್ದಾರೆ. ಆ ದೃಷ್ಟಿಯಿಂದ ಶ್ರೀ ಕೆ. ಎಚ್. ಪಾಟೀಲರ ಮಾಡಿರುವದು ಸರಿಯಲ್ಲ. ಅದು ಕಾನೂನಿಗೆ ವಿರೋಧವಾದುದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.— ಅದರ ವಿಚಾರದಲ್ಲಿ ಈಗಾಗಲೇ ಚರ್ಚೆಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಅದನ್ನು ಹೆಚ್ಚಾಗಿ ಹೇಳುವವಕ್ಕೆ ಹೋಗುವ ದಿಲ್ಲ. ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿರುವದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರು ಉದ್ವೇಗದಿಂದ ಮಾತನಾಡಿದರು. ಅದರಲ್ಲಿ ಅರ್ಥವಿದೆ. ಷೆಡ್ಯೂಲ್ಡ್ ಕ್ಯಾಸ್ಟ ಮತ್ತು ಟ್ರೈಬ್ಸ್‌ನವರಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ನಮ್ಮ ಪಕ್ಷದ ಅಭಿಪ್ರಾಯ ಕೂಡ ಹಾಗೆಯೇ ಇದೆ. ಅದಕ್ಕಾಗಿ ನಾವು ಹೋರಾಟ ಮಾಡುತ್ತಿದ್ದೇನೆ. ಹಿಂದುಳಿದವರನ್ನು ತುಳಿಯುವ ಮನೋಭಾವನೆ ಇರಬಾರದು. ಅವರನ್ನು ಉಪಯೋಗ ಮಾಡಿಕೊಂಡು ತಾವು ಮೇಲೆ ಬರಬೇಕು ಎಂಬ ಅಭಿಪ್ರಾಯ ಇರಬಾರದು. ಅವರಿಗೆ ಸಮಾಜದಲ್ಲಿ ಅನುಕೂಲವಾಗಬೇಕು ಎಂದು ಇಷ್ಟು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಟಿ ಎಂ. ಮಂಜುನಾಥ (ತಿಪಟೂರು) —ಸ್ವಾಮಿ ಅಧ್ಯಕ್ಷರೇ, ನಮ್ಮ ಹಣಕಾಸಿನ ಸಚಿವರು ನಮ್ಮ ಮುಂದಿಟ್ಟಿರುವ ಹೆಚ್ಚುವರಿ ಬೇಡಿಕೆಗಳನ್ನು ಅತ್ಯಂತ

ವ್ಯಸನದಿಂದ ವಿಷಾದದಿಂದ ವಿರೋಧಿಸುತ್ತೇನೆ. ಏಕೆಂದರೆ ಇವತ್ತು ದೇಶದ ಜನತೆ ಆಹಾರದ ಸರಬರಾಯಿ ಸರಿಯಾಗಿಲ್ಲದೆ ಸರಿಯಾದ ವಿತರಣೆಯಿಲ್ಲದೆ ಕಷ್ಟಪಡುತ್ತಿರುವಾಗ ಅದನ್ನು ನಿವಾರಣೆ ಮಾಡಲು ಆಹಾರ ಒದಗಿಸಲು ಯಾವ ರೀತಿಯ ಬೇಡಿಕೆಯನ್ನೂ ಈ ಪತ್ರಿಕೆಯಲ್ಲಿ ಇಟ್ಟಿಲ್ಲ. ಆದುದರಿಂದ ಅತ್ಯಂತ ವ್ಯಸನದಿಂದ ಇದನ್ನು ಹೇಳಬೇಕಾಗಿದೆ. ಇಂಥ ಕಷ್ಟ ಪರಿಸ್ಥಿತಿಯಲ್ಲೂ ಕೂಡ ಜನತೆಯ ಬಗ್ಗೆ ಸರಕಾರ ಎಚ್ಚರಿಕೆ ವಹಿಸಿ ತಕ್ಕ ಕಾರ್ಯಕ್ರಮ ಕೈಕೊಂಡಿಲ್ಲ. ಜನರ ಬಗ್ಗೆ ಕನಿಕರ ಸರಕಾರ ತೋರಿಸಿಲ್ಲ ಎಂದು ಬಹಳ ಶೋಕವಾಗುತ್ತಿದೆ.

ಇನ್ನು ನಮ್ಮ ಮುಂದಿರುವ ವಿಷಯಕ್ಕೆ ಬರುತ್ತೇನೆ. ಡಿಮ್ಯಾಂಡ ನಂಬರು ೧೭ ರಲ್ಲಿ ಆಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಆಫ್ ದಿ ನ್ಯಾಷನಲ್ ಫಿಟ್‌ನೆಸ್ ಕಾರ್ಪ್ಸ್ ಇದಕ್ಕೆ ಸಂಬಂಧಪಟ್ಟ ವಿಷಯವಿದೆ. ಇದಕ್ಕೆ ಕೇಂದ್ರ ಸರಕಾರದಿಂದ ಸುಮಾರು ೬ ಲಕ್ಷ ರೂಪಾಯಿ ಕೊಡುವರು, ಇದು ಸಹಾಯ ಧನ ಎಂದು ಹೇಳುತ್ತಾರೆ. ಈ ಸಂಸ್ಥೆಯ ಮುಖ್ಯವಾದ ಉದ್ದೇಶವೇನು ಎಂದು ನಾನು ಕೇಳುತ್ತೇನೆ. ಇದು ಹೊಸದು, ಈ ಹೆಸರು ಹೊಸದು. ಇದು ಯಾವ ಹಂತದಲ್ಲಿ ಎಷ್ಟು ಕೆಲಸ ಮಾಡುವದು ಎಂಬುದನ್ನು ಹೇಳಬೇಕು. ಸುಮಾರು ೧೪೧ ಜನರನ್ನು ಒಂದು ವರ್ಷದ ಮಟ್ಟಿಗೆ ಈ ಸಂಬಂಧವಾದ ಕೆಲಸಕ್ಕೆ ತೆಗೆದುಕೊಳ್ಳುವದಾಗಿ ತಿಳಿಸಿದ್ದಾರೆ. ಸರಕಾರ ಇವರನ್ನು ನೇಮಕ ಮಾಡುವದು. ಎಷ್ಟು ವರ್ಷ ಈ ಕಾರ್ಯ ನಡೆಯುವುದು? ಇವರ ಕಾರ್ಯವ್ಯಾಪ್ತಿ ಎಷ್ಟು ಎಂಬುದನ್ನು ತಿಳಿಸಬೇಕು. ಒಂದು ವರ್ಷವಾದ ಮೇಲೆ ಇವರ ಗತಿಯೇನು? ಅವರು ಎಲ್ಲಿಗೆ ಹೋಗಬೇಕು? ಎಷ್ಟು ವರ್ಷ ಅವರನ್ನು ಮುಂದುವರೆಸುವಿರಿ? ಈ ನ್ಯಾಷನಲ್ ಫಿಟ್‌ನೆಸ್ ಕಾರ್ಪ್ಸ್ ಅಲ್ಲಲ್ಲಿ ಕೆಲಸ ಮಾಡುತ್ತಿದೆ. ಈ ಸಂಸ್ಥೆಯ ಕೆಲಸವೇನು? ಇದರ ಮುಖ್ಯೋದ್ದೇಶ ತಿಳಿಸಬೇಕು ಮತ್ತು ಕೇಂದ್ರ ಸರಕಾರ ಇದಕ್ಕಾಗಿ ಎಷ್ಟು ವರ್ಷ ಹಣ ಕೊಡುವದು, ಅದು ಕೊಡುವದನ್ನು ನಿಲ್ಲಿಸಿದರೆ ಪ್ರತಿವರ್ಷ ಇಷ್ಟು ಹಣ ಕೊಡಲು ನಮ್ಮ ಸರಕಾರಕ್ಕೆ ಶಕ್ತಿ ಇದೆಯೇ ಎಂಬುದನ್ನು ತಿಳಿಸಬೇಕು. ಇದರ ವಿಚಾರವನ್ನು ಮಾನ್ಯ ಆರ್ಥಿಕ ಮಂತ್ರಿಗಳು ವಿನರವಾಗಿ ಹೇಳಬೇಕು.

ಇನ್ನೊಂದು ಡಿಮ್ಯಾಂಡ ನಂಬರು ೨೦. ಇದರಲ್ಲಿ ಸಕ್ಕರೆಗೆ ಸಂಬಂಧಪಟ್ಟ ಕೈಗಾರಿಕೆಗೆ ಉತ್ತೇಜನ ನೀಡಲು ಇದರ ಬಗ್ಗೆ ಪ್ರಗತಿ ಸಾಧಿಸಲು ಕೆಲವು ಹೊಸ ಹೊಸ ಹುದ್ದೆಗಳ ನಿರ್ಮಾಣ ಮಾಡುವ ಬಗ್ಗೆ ಬೇಡಿಕೆ ಇದೆ. ಇದರ ಬಗ್ಗೆ ಚರ್ಚೆಯಾಗಿದೆ. ಇಂದು ದೇಶಕ್ಕೆ ಮುಖ್ಯವಾಗಿ ಬೇಕಾಗಿರುವುದು ಅಕ್ಕಿ. ಆದರೆ ಈಗ ಸಕ್ಕರೆಯ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಶ್ರೀ ಸಿದ್ದವೀರಪ್ಪನವರು ಒಂದು ಕಡೆ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಆಸಕ್ತರಾಗಿದ್ದಾರೆ, ಇನ್ನೊಂದು ಕಡೆ ಶ್ರೀ ಹುಚ್ಚಮಾಸ್ತಿ ಗೌಡರು ಕಬ್ಬು ಬೆಳೆಯದಿರುವ ಕಡೆ, ಬತ್ತ ಬೆಳೆಯದಿರುವ ಕಡೆ ಸಕ್ಕರೆ ಕಾರ್ಖಾನೆ ತೆರೆಯಲು ಉತ್ಸುಕರಾಗಿದ್ದಾರೆ. ಅದಕ್ಕೆ ಷೇರುಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ; ಮಾಡಲಿ. ಆದರೆ ಕಬ್ಬೇ ಬೆಳೆಯದಿರುವ ಕಡೆ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಪ್ರಯತ್ನ

ಪಡುವುದು ಉಚಿತವೇ ಎಂಬುದನ್ನು ಯೋಚನೆಮಾಡಬೇಕು. ಇಡೀ ದೇಶದಲ್ಲಿ ತೆಂಗಿನ ಬೆಳೆ ಎಷ್ಟಿರಬೇಕು, ಅದಕ್ಕೆ ಎಷ್ಟುಗಮನ ಕೊಡಬೇಕು, ಅದರಿಂದ ಬರುವ ವರಮಾನವೆಷ್ಟು ಎಂಬುದನ್ನು ಇದುವರೆಗೆ ಗಮನಿಸಿಲ್ಲ. ಏಕೆ ಕೋಕನಟ್ ಬೋರ್ಡ ಮಾಡಿಲ್ಲ ? ಇಂದು ಉತ್ತರ ಇಂಡಿಯಾಕ್ಕೆ ನಮ್ಮ ದೇಶದ ತೆಂಗು ಮತ್ತು ಕೊಬರಿ ಹೋಗುತ್ತಿದೆ. ಅದರಿಂದ ಲಕ್ಷಾಂತರ ರೂಪಾಯಿ ಮಾರಾಟ ತೆರಿಗೆ ಬರುತ್ತಿದೆ. ತೆಂಗಿನ ಬೆಳೆಯ ಬಗ್ಗೆ ಪ್ರಗತಿ ಸಾಧಿಸಲು ಹೆಚ್ಚು ತೆಂಗು ಬೆಳೆಯಲು ಒಂದು ಬೋರ್ಡನ್ನು ಸ್ಥಾಪಿಸಬೇಕೆಂಬ ಉದ್ದೇಶ ಸರಕಾರಕ್ಕಿತ್ತು. ಸರಕಾರ ತನಗೆ ಬೇಕಾದ್ದಕ್ಕೆ ಡಿಮ್ಯಾಂಡ ತರುವಾಗ ತೆಂಗಿನಬೆಳೆಗೆ ಸಂಬಂಧಪಟ್ಟ ಬೋರ್ಡನ್ನು ಸ್ಥಾಪಿಸಲು ಏಕೆ ಮುಂದೆ ಬಂದಿಲ್ಲ ? ಈ ವಿಚಾರವನ್ನು ನಾನು ಇಂದು ಹೇಳುತ್ತಿಲ್ಲ. ಸುಮಾರು ಎರಡುಮೂರು ಅಧಿವೇಶನಗಳಲ್ಲಿ ಹೇಳಿದ್ದೇನೆ. ಕೋಕನಟ್ ಬೋರ್ಡನ್ನು ರಚಿಸಿ ತೆಂಗಿನ ಬೆಳೆಗೆ ರಕ್ಷಣೆ ನೀಡಬೇಕು, ಅದನ್ನು ವೃದ್ಧಿಮಾಡಬೇಕು ಎಂದು ತಿಳಿಸಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ — ವ್ಯವಸಾಯ ಶಾಖೆಯ ಮಂತ್ರಿಗಳು ಈ ಬೋರ್ಡನ್ನು ಮಾಡುತ್ತೇವೆಂದು ಹೇಳಿದ್ದರು.

ಶ್ರೀ ಟಿ. ಎಂ. ಮಂಜನಾಥ — ವಚನಕೊಟ್ಟು ಏನೂ ಮಾಡದೆ ಇಂದು ವಚನಬ್ರಷ್ಟರಾಗಿದ್ದಾರೆ.

4-00 P. M.

ಅವರಿಗೆ ಯಾವ ಯಾವ ಮಂತ್ರಿಗಳು ಬೇಕೋ ಅವರ ಕ್ಷೇತ್ರವನ್ನು ಮತ್ತು ಯಾವ ಯಾವ ಪಕ್ಷದ ಜನರು ಬೇಕೋ ಅವರನ್ನು ತೃಪ್ತಿ ಪಡಿಸುತ್ತ ಹೋದರೆ ರಾಜ್ಯದ ಗತಿಯೆನಾದೀತು ? ಆದರೆ ಈ ಕೋಕೋನಟ್ ಬೋರ್ಡನ್ನು ರಚಿಸತಕ್ಕ ವಿಚಾರದಲ್ಲಿ ನಮ್ಮ ಸರ್ಕಾರದವರ ನಿಲುವೇನು ಅವರ ನಿಶ್ಚಿತವಾದ ಧೋರಣೆ ಯೇನೆಂಬುದನ್ನು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ. ಅಷ್ಟೇ ಅಲ್ಲದೆ ಸರ್ಕಾರಕ್ಕೆ ಈ ತೆಂಗಿನಕಾಯಿ ಮತ್ತು ಕೊಬ್ಬರಿ ವ್ಯಾಪಾರದಿಂದ ಬರತಕ್ಕ ಮಾರಾಟ ತೆರಿಗೆ ಎಷ್ಟೆಂಬುದನ್ನು ಕೂಡ ಅವರು ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರ ಡಿಮ್ಯಾಂಡ್ ನಂಬರ ೫ಳರಲ್ಲಿ ಸರ್ಕಾರದವರು ಬಹಳ ಬುದ್ಧಿವಂತಿಕೆ ಮಾಡಿ ಹೇಳಿದ್ದಾರೆ. ಈ ಡಿಮ್ಯಾಂಡಿನಲ್ಲಿ ತಕಾವಿ ಸಾಲಕ್ಕೆಂದು ವಿಸಲಾಗಿಟ್ಟಿದ್ದ ೧೬೦ ಲಕ್ಷ ರೂಪಾಯಿ ಗಳನ್ನು ಆ ಬಾಬಿಗೆ ತಪ್ಪಿಸಿ ಆ ಹಣವನ್ನು ಬಿತ್ತನೆ ಬೀಜದ ಸರಬರಾಯಿಗೆ ಬಳಸುವುದಾಗಿ ಹೇಳಿದ್ದಾರೆ. ಇದು ದೊಡ್ಡ ಅನ್ಯಾಯ ಈ ದಿವಸ ಸರ್ಕಾರದವರು ಬಡ ರೈತರಿಗೆ ಅನೇಕರಿಗೆ ಭೂಮಿಯನ್ನು ಹಂಚಿದ್ದಾರೆ—ಹಂಚುತ್ತಿದ್ದಾರೆ. ಅವರು ತೀರಾ ಗರೀಬರು. ಅವರಿಗೆ ಉಳುಮೆಗೆ ಎತ್ತಿಲ್ಲ—ಗಾಡಿಯಿಲ್ಲ. ಅಂಥ ಅನೇಕ ಜನ ಸಣ್ಣ ಪುಟ್ಟ ರೈತರಿಗೆ ಈ ತಕಾವಿಸಾಲದ ಅಗತ್ಯ ಬಹಳವಾಗಿದೆ. ಆದುದರಿಂದ ಈ ತಕಾವಿಸಾಲದ ಹಣವನ್ನು ಬೇರೆ ಬಾಬಿಗೆ ವರ್ಗಾಯಿಸಬಾರದೆಂದು ಹೇಳುತ್ತೇನೆ.

ಇನ್ನು ಈ ಬಿತ್ತನೆ ಬೀಜವನ್ನು ಏನು ಇವರು ರೈತರಿಗೆ ಸರಬರಾಯಿ ಮಾಡುತ್ತಿದ್ದಾರೆ ಅವನ್ನು ಸರಿಯಾಗಿ ಪರೀಕ್ಷೆಮಾಡಿ ಉತ್ತಮವಾದ ತಳಿಯೇ ಅಲ್ಲವೇ ಎಂಬುದನ್ನು ಒಂದನ್ನೂ ಗಮನಿಸದೆ ರೈತರಿಗೆ ಸಿಕ್ಕಾಬಟ್ಟೆ ಹಂಚುತ್ತಿದ್ದಾರೆ. ಮೈಸೂರು ಸ್ಟೇಟ್ ಕೋ-ಆಪರೇಟೀವ್ ಫೆಡರೇಷನ್ ಏನು ಒಂದು ಬಿತ್ತನೆ ಬೀಜಗಳನ್ನು ಕೊಳ್ಳುತ್ತಿದೆ ಅದರಲ್ಲಿ ಬಹಳ ಮೋಸ ಕೃತ್ಯಗಳು ನಡೆಯುತ್ತಿವೆ. ಇವರು ತಮಗೆ ಬೇಕಾದವರಿದ್ದರೆ ಅವರಿಗೆ ಒಂದಕ್ಕೆರಡು ಧಾರಣಿಗಳನ್ನು ಕೊಟ್ಟು ಬೀಜವನ್ನು ಕೊಳ್ಳುತ್ತಿದ್ದಾರೆ. ಅದು ಒಳ್ಳೆಯದೆ ಅಲ್ಲವೇ ಎಂಬುದನ್ನು ಇವರು ಪರೀಕ್ಷೆಮಾಡುವದಿಲ್ಲ. ಇಂಥ ಅವ್ಯವಹಾರಗಳು ಈ ಸಂಸ್ಥೆಯಲ್ಲಿ ನಡೆಯುತ್ತಿವೆ. ನಾನೇ ಒಂದಾವರ್ತಿ ಇವರಲ್ಲಿ ಬಿತ್ತನೆ ಬತ್ತದ ಬೀಜ ತೆಗೆದುಕೊಂಡು ಹೋಗಿ ಬೆಳೆ ಇಟ್ಟೆ. ಆದರೆ ನಾನು ಬಿತ್ತಿದ್ದು ಒಂದೇ ಬಗೆ ಬೀಜವಾಗಿದ್ದರೂ ಅದರಲ್ಲಿ ಆರು ನಮೂನೆ ತೆನೆ ಹೊರಟಿತು. ಒಂದೊಂದು ಒಂದೊಂದು ರೀತಿ. ಆಗ ಅದನ್ನು ನೋಡಿ ನನಗೆನು ಅನಿಸಿತೆಂದರೆ ಬಹುಶಃ ಆ ಕಾಂಗ್ರೆಸ್ ಪಕ್ಷದಲ್ಲಿ ಈ ದಿವಸ ಏನು ಕುಲಕೊಂದು ಜಾತಿ ಮಿಶ್ರವಾಗಿ ಒಂದು ಕಲಸುಮೇಲೋಗರವಾಗಿದೆ ಹಾಗೇ ಇದರಲ್ಲೂ ಆಗಿದೆಯೇನೋ ಅನಿಸಿತು. ಇದರಿಂದ ರೈತರಿಗೆ ತುಂಬಾ ನಷ್ಟವಾಗುತ್ತಿದೆ. ಇವರ ಅವಿವೇಕದಿಂದ ಬಡ ರೈತರು ಹಾಳಾಗುತ್ತಿದ್ದಾರೆ. ಈ ವಿಚಾರಕ್ಕೆ ಮುಖ್ಯ ಮಂತ್ರಿಗಳು ಗಮನ ಕೊಟ್ಟು ಇದನ್ನೆಲ್ಲಾ ಪರಿಶೀಲನೆ ಮಾಡಿ ಆನಂತರ ದುಡ್ಡನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗಾಗಲೇ ನಮ್ಮ ಶ್ರೀ ಶ್ಯಾಮಣ್ಣನವರು "ಮೂಗಿಗಿಂತ ಮೂಗ್ತಿ ಭಾರ" ಅಂದಹಾಗೆ ರಿಲೀಫ್ ಕಾಮಗಾರಿಗಳಿಗೆ ನಮ್ಮ ತುಮಕೂರು ಜಿಲ್ಲೆಯಲ್ಲಿ ಕೊಟ್ಟ ಹಣವೆಲ್ಲಾ ಲೂಟಿಯಾಗಿ ಹೋಗಿದೆ. ಲಕ್ಷಗಟ್ಟಲೆ ಹಣ ಅಪವ್ಯಯವಾಗಿದೆ. ಈ ವಿಚಾರ ಮಾನ್ಯ ಹುಚ್ಚಮಾಸ್ತಿಗೌಡರಿಗೂ ಗೊತ್ತಿದೆ. ಅಲ್ಲಿ ಹಣವನ್ನು ಖರ್ಚುಮಾಡಿ ಯಾವ ಕೆಲಸಗಳನ್ನು ಮಾಡಿಸಿಲ್ಲ. ಅಲ್ಲಿನ ಅಧಿಕಾರಿಗಳು ಮೇಲಿನಿಂದ ಬಂದ ಇನ್‌ಸ್ಪೆಕ್ಷನ್ ಪ್ರಕಾರ ಆ ಹಣವನ್ನು ಬೇರೆ ಯಾವುದೋ ಕೆಲಸಕ್ಕೆ ರಾಜಪಟುಗಳಿಗೆ ಕೊಟ್ಟಿದ್ದಾರೆ. ಇದನ್ನು ಕಂಡುಹಿಡಿದು ಅವರನ್ನು ದಂಡಿಸತಕ್ಕ ಶಕ್ತಿ ಈ ಸರ್ಕಾರಕಿಲ್ಲ ಹೀಗೆ ಅಲ್ಲಿ ಕೆಲವು ರಾಜಕೀಯಪಟುಗಳು ಇಂಥ ಅವ್ಯವಹಾರ ಮಾಡಿದ್ದಾರೆ. ಇಂಥ ವಿಚಾರವನ್ನು ಕಂಡರೂ ಕಾಣದಂತೆ ಸರ್ಕಾರ ಕಣ್ಣು ಮುಚ್ಚಿಕುಳಿತಿರುವುದು ನಾಚಿಕೆಗೇಡಿನ ವ್ಯವಹಾರ. ಇಂಥ ಹೀನಾಯಕರವಾದ ಆಡಳಿತ ನಡೆಸತಕ್ಕವರ ಕೈಗೆ ನಾವು ಇಷ್ಟೊಂದು ಹಣವನ್ನು ಕೊಡುವುದಾದರು ಹೇಗೆ ?

Sri H. M CHANNABASAPPA.—It is no good making a general statement of this kind. It does not take either you or us anywhere. If you do want business to be done, I would like that you would pass on to me what exactly are the lapses that have taken place, according to your

information. Government would definitely look into the matter. We are not here to allow people to squander money. We are as much interested as you are, if not more, in public funds.

ಶ್ರೀ ಟಿ. ಎಂ. ಮಂಜುನಾಥ — ನಾನು ಮಾನ್ಯ ಮಂತ್ರಿಗಳು ಹೇಳುವುದನ್ನು ಒಪ್ಪುತ್ತೇನೆ. ಆದರೆ ಇದೇ ಮಾನ್ಯ ಮಂತ್ರಿಗಳಿಗೂ ಕೆಲವು ವಿಚಾರಗಳನ್ನು ಬರೆದು ನಾನೇ ಕೊಟ್ಟಿದ್ದೆ. ಇವರೂ ಕೂಡ ಅವುಗಳ ಬಗ್ಗೆ ಏನೂ ಕಾರ್ಯಕ್ರಮ ಕೈಗೊಳ್ಳಲಿಕ್ಕಾಗಲಿಲ್ಲ.

Mr. DEPUTY SPEAKER.—The hon. Member will please tell the Hon. Minister on what date he has given a complaint. If he has got a copy, he can give it to the Minister.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ: ನಾನೇನು ಇವರಿಗೆ ಬರೆದು ಕೊಟ್ಟಿದ್ದೆ ಅದರ ಬಗ್ಗೆ ಇಲ್ಲೇ ಚರ್ಚೆಕೂಡ ಆಗಿದೆ. ಅವರಲ್ಲಿ ದಕ್ಷತೆ ಇದ್ದರೂ ಅವರ ಪಕ್ಷದಲ್ಲಿರತಕ್ಕವರು ಇವರನ್ನು ಮುಂದಕ್ಕೆ ಬಿಡುತ್ತಿಲ್ಲ. ನಾನು ಸಭೆಯಲ್ಲಿ ಎಂದಿಗೂ ಸುಳ್ಳನಾಡತಕ್ಕವನಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದುವೇಳೆ ಹಾಗೆ ತಾವು ನನಗೆ ಬರವಣಿಗೆಯಲ್ಲಿ ಕೊಟ್ಟಿದ್ದು ನಾನು ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳದಿದ್ದಾಗ, ಏಕೆ ಕಾರ್ಯಕ್ರಮ ಕೈಗೊಳ್ಳಲಿಲ್ಲ ಎಂದು ಕೇಳತಕ್ಕ ಹಕ್ಕು ಮಾನ್ಯ ಸದಸ್ಯರಿಗಿದ್ದಾಗ, ಅದನ್ನು ಮಾಡದೆ, ಸುಮ್ಮನೆ ಸರ್ಕಾರಕ್ಕೆ ದಕ್ಷತೆಯಿಲ್ಲ, ಅಂದರೆ ಅದೇನು ಅಂಗಡಿಯಲ್ಲಿ ಮಾರತಕ್ಕ ವಸ್ತುವೆ —ಆ ದಕ್ಷತೆ ಎಂಬುದು ? ಮುಖ್ಯವಾಗಿ ಮಾನ್ಯ ಸದಸ್ಯರ ಗುರಿ ಈ ಆಡಳಿತ ಶುದ್ಧವಾಗಿರಬೇಕು ಎಂಬುದು. ವಿರೋಧ ಪಕ್ಷದಲ್ಲಿ ಕೆಲಸ ಮಾಡತಕ್ಕ ಸದಸ್ಯರು ಹೇಗಿರಬೇಕು ? ಅವರು ಇಂಥ ಸಂದರ್ಭದಲ್ಲಿ ಮಾತನಾಡುವಾಗ 'ನಾನು ಇಂಥ ಮಂತ್ರಿಗಳಿಗೆ ಇಂಥ ತಾರೀಖಿನ ದಿನ ಇಂಥ ಒಂದು ವಿಷಯ ತಿಳಿಸಿದ್ದೆ' ಅದನ್ನು ಅವರು ಕೈಬಿಟ್ಟಿದ್ದಾರೆ ಎಂದು ಹೇಳಿದರೆ ಅದು ಸರಿಯಾದ ಕೇಳತಕ್ಕ ವಿಧಾನ.

ಶ್ರೀ ಟಿ. ಎಂ. ಮಂಜುನಾಥ್.—ತಾವು ಹಿರಿಯ ಸಚಿವರು. ತಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ನಿಮ್ಮಲ್ಲಿ ಎಷ್ಟೇ ದಕ್ಷತೆ ಇದ್ದರೂ ನಿಮ್ಮ ಪಕ್ಷದವರು ಆ ನಿಮ್ಮ ಪೆನ್ನನ್ನು ಕಿತ್ತುಕೊಂಡಿದ್ದಾರೆ. ಆ ವಿಚಾರ ನನಗೆ ಗೊತ್ತಾಗಿದೆ. ನಾನು ಇನ್ನು ಇದಕ್ಕಿಂತ ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಅಂತೂ ನಿಮ್ಮ ಪಕ್ಷದಲ್ಲೇ ನಿಮ್ಮ ಹಿತಶತ್ರುಗಳು ಅನೇಕರಿದ್ದಾರೆ.

Mr. DEPUTY SPEAKER.—You are imagining too many,

things, beyond the powers of reasoning the imgination has no force in a set up like ours.

ಶ್ರೀ ಟಿ. ಎಸ್. ಮಂಜುನಾಥ್.— ವಿರೋಧಪಕ್ಷದವರ ಕಷ್ಟವೇನೆಂಬುದು ಅಧ್ಯಕ್ಷರಿಗೂ ತಿಳಿಯದು. ನಾವೇನಾದರೂ ಆ ಸ್ಥಳೀಯ ಅಧಿಕಾರಿಯ ಮೇಲೆ ಒಂದು ದೂರನ್ನು ಕೊಟ್ಟಾಗ ಸರ್ಕಾರದವರು ಅವನ್ನು ಕೈಸಂದಿಗೆ ಬಿಟ್ಟು ಕೊಂಡಾಗ ನಾವು ನಾಳೆ ಆ ಅಧಿಕಾರಿಯ ಹತ್ತಿರ ಇನ್ನಾವ ಕೆಲಸಗಳಿಗೂ ಹೋಗುವುದಕ್ಕಾಗುವದಿಲ್ಲ. ಅವರು ನಾವು ಹೇಳಿದ್ದನ್ನು ಕೇಳುವುದೂ ಇಲ್ಲ. ಈ ಒಂದು ತೊಂದರೆಯಿಂದ ಹೆದರಿ ನಾವು ಇಲ್ಲಿ ಮಾತನಾಡುವುದಕ್ಕೆ ಸಂಕೋಚಪಡುತ್ತಿದ್ದೇವೆ. ಆದರೆ ಸರ್ಕಾರದವರು ನಮ್ಮ ಕೋಕೋನಟ್ ಬೋರ್ಡಿನ ಬಗ್ಗೆ ಏನು ತೀರ್ಮಾನಕ್ಕೆ ಬಂದಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳಿಕೊಂಡು ನಾನು ಈ ಎಲ್ಲ ಡಿಮ್ಯಾಂಡುಗಳನ್ನೂ ವಿರೋಧಿಸಿ ನನಗೆ ಮಾತನಾಡುವುದಕ್ಕೆ ಇಷ್ಟು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೊಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್ಥಿಕ ಸಚಿವರು ಈ ದಿನ ಈ ಸಭೆಯಲ್ಲಿ ಮಂಡಿಸಿರತಕ್ಕ ಹೆಚ್ಚುವರಿ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ವ್ಯವಸಾಯ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಸೆಕಡಾ ೯೦ರಷ್ಟು ಇರತಕ್ಕ ರೈತರ ಈ ಒಂದು ದೇಶದಲ್ಲಿ ರೈತರ ಸಮಸ್ಯೆಗಳಲ್ಲಿ ಅವರ ಆರ್ಥಿಕ ಸಮಸ್ಯೆಯನ್ನು ಅಭಿವೃದ್ಧಿಗೊಳಿಸುವ ಹಾಗೆ ಮಾಡುತ್ತೇವೆ, ಮತ್ತು ಇಡೀ ದೇಶದ ಜನತೆಯನ್ನು ಸುಖವಾಗಿಡುತ್ತೇವೆ, ಅವರಿಗೆ ಎಲ್ಲ ವಿಧದಲ್ಲಿಯೂ ಕಲ್ಯಾಣಮಾಡುತ್ತೇವೆಂದು ಇಡೀ ದೇಶದ ಜನತೆಯ ಗಮನವನ್ನು ಹರಿಸಿ ಯಾರು ಮಾಡದಿರುವಷ್ಟು ಸೌಲಭ್ಯಗಳನ್ನು ಜನತೆಗೆ ಕಲ್ಪಿಸಿಕೊಡುತ್ತೇವೆ, ಇಲ್ಲಿಯೇ ಸ್ವರ್ಗವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿಬಂದ ಮಂತ್ರಿಗಳು ಇವತ್ತು ಅಧಿಕಾರದಲ್ಲಿದ್ದಾರೆ. ಇವರು ಅಧಿಕಾರಕ್ಕೆ ಬಂದು ಈಗಾಗಲೇ ಒಂದು ವರ್ಷವಾಯಿತು. ಅಲ್ಲಿಂದಾಚೆಗೆ ಇವರು ಬಡಜನರಿಗೆ ಕೊಟ್ಟಿರುವ ವಚನವೇನು, ರೈತರ ಪರಿಸ್ಥಿತಿ ಏನಾಗಿದೆಯೆಂಬುದರ ಬಗ್ಗೆ ದಯವಿಟ್ಟು ಅವರು ಅವರ ಒಂದು ಅಂತಃಕರಣವನ್ನು ಹಿಡಿದು ನೋಡಿ ಈ ಸಭೆಯಲ್ಲಿ ಉತ್ತರ ಕೊಡಬೇಕೆಂದು ನಾನು ಮಾನ್ಯ ಅರ್ಥಸಚಿವರಿಗೆ ಹೇಳುತ್ತೇನೆ.

ಮೊಟ್ಟ ಮೊದಲನೆಯದಾಗಿ ರೈತನಾದವನು ಬೇರೆಯವರಂತೆ ತಾನು ಬದುಕಿ ಬಾಳಬೇಕಾದರೆ, ತಕ್ಕ ಮಟ್ಟಿಗೆ ಅವನೂ ಇತರರಂತೆ ಬಟ್ಟೆ ಬರೆಗಳನ್ನು ಹಾಕಿಕೊಂಡು ಜೀವನಮಾಡಬೇಕಾದರೆ ಅವನೂ ಸಹ ತನ್ನ ಆಸ್ತಿಪಾಸ್ತಿಯಲ್ಲಿ ಅಭಿವೃದ್ಧಿಯಾಗಬೇಕು. ಅವನು ಹಾಕತಕ್ಕ ಬೆಳೆಗೆ ಸರಿಯಾದ ಬೆಲೆ ಕೊಡಬೇಕು. ಏಕೆಂದರೆ ಅವನನ್ನೇ ನಾವು ಅನ್ನ ಕೊಡಿ, ಆಹಾರ ಕೊಡಿ, ಅಕ್ಕಿ, ಗೋಧಿ, ರಾಗಿ ಕೊಡಿ ಎಂದು ಕೇಳುತ್ತೇವೆ. ಇಂತಹ ಒಂದು ಹಾಹಾಕಾರ ಈಗ ಎಲ್ಲೆಲ್ಲಿಯೂ

ಎದ್ದಿದೆ. ಅದನ್ನು ಮತ್ತೆ ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ನಾನು ಈಗ ಮೊಟ್ಟ ಮೊದಲನೆಯ ದಾಗಿ ರೈತರಿಗೆ ಹಂಚುವ ಬಿತ್ತನೆ ಬೀಜದ ಬಗ್ಗೆ ನಾನು ಹೇಳುತ್ತೇನೆ. ಸರ್ಕಾರ ದವರು ಈಗಾಗಲೇ ಸೀಡ್ ಕಾರ್ಪೊರೇಷನ್, ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ನ್ಯಾಷನಲ್ ಸೀಡ್ ಕಾರ್ಪೊರೇಷನ್ ಎಂಬುದಾಗಿ ನಾನಾ ವಿಧವಾದ ಅನೇಕ ಕಾರ್ಪೊರೇಷನ್‌ಗಳನ್ನು ಸೃಷ್ಟಿಮಾಡಿದ್ದಾರೆ. ರೈತರ ಹೆಸರನ್ನು ಹೇಳಿ ಕೊಂಡು ಅವರು ಬೆವರು ಸುರಿಸಿ ಕೊಡತಕ್ಕ ದುಡ್ಡಿನಲ್ಲಿ ಎಲ್ಲರನ್ನೂ ಉದ್ಧಾರ ಮಾಡುತ್ತೇವೆಂದು ಬಾಯಿನಲ್ಲಿ ಹೇಳಿಕೊಂಡೇ ಒಂದು ದೊಡ್ಡ ಮಹತ್ಕಾಂಕ್ಷೆಯಿಂದ ಅನೇಕ ಉದ್ದಿಮೆಗಳನ್ನು ನಿರ್ಮಾಣಮಾಡಿ ಸಾಕಷ್ಟು ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಇದರಿಂದ ಎಷ್ಟರಮಟ್ಟಿಗೆ ಈ ಒಂದು ವಿಚಾರದಲ್ಲಿ ರೈತರಿಗೆ ಫಲಪ್ರದವಾಗಿದೆಯೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಮ್ಮನ್ನು ನಾನು ಬಹಳ ಕಳಕಳಿಯಿಂದ ಮನವಿಮಾಡಿ ಕೇಳಿಕೊಳ್ಳುತ್ತೇನೆ. ಇಂತಹ ಕಾರ್ಪೊರೇಷನ್‌ಗಳನ್ನು ಮಾಡಿ ಎಷ್ಟು ಜನ ರೈತರಿಗೆ ಆ ಸಂಸ್ಥೆಗಳ ಮೂಲಕ ಹೈಬ್ರಿಡ್ ಸೀಡ್, ಜೋವರ್ ಸೀಡ್ಸ್, ಮೆಯಿಜ್ ಸೀಡ್ಸ್, ಬತ್ತದ ಸೀಡ್ಸ್‌ಗಳನ್ನು ಕೊಟ್ಟು ಅನುಕೂಲವಾಗಿದೆಯೆಂಬುದನ್ನು ಸರ್ಕಾರದವರು ಹೇಳಬೇಕು. ಅವರ ಹೆಸರನ್ನು ಹೇಳಿಕೊಂಡು ರೈತರ ದುಡ್ಡನ್ನು ಹಾಳು ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಕೇವಲ ಸೀಡ್ಸ್ ಕಾರ್ಪೊರೇಷನ್‌ಗಳಿಗೆ ಹಾಕಿದ್ದಾರೆ. ಆದರೆ ಬೀಜವನ್ನು ಇಡೀ ದೇಶದ ರೈತರಿಗೆ ಸರಿಯಾಗಿ ಹಂಚಿಕೆಮಾಡುತ್ತಾ ಇಲ್ಲ. ಕಳೆದ ಒಂದೂವರೆ ವರ್ಷಗಳಿಂದ ನಾನು ನೋಡಿದ ಹಾಗೆ ಬಡ ಜನ ರೈತರು ಕಣ್ಣೀರು ಹಾಕುತ್ತಿದ್ದಾರೆ. ಕೆಲವುಕಡೆಗಳಲ್ಲಿ ಕೆಟ್ಟ ಬೀಜಗಳನ್ನು ಕೊಟ್ಟು ಅವರ ಬೆಳೆಯನ್ನು ಹಾಳುಮಾಡುತ್ತಿದ್ದಾರೆ. ಇದರಿಂದ ನಾವು ಅಲ್ಲಿ ಹೋಗಿ ನೋಡಿದಾಗ ಅಲ್ಲಿಗೆ ಅಧಿಕಾರಿಗಳು ಬಂದು ನೋಡಿದಾಗ ಅವರ ಪರಿಸ್ಥಿತಿ ಏನಾಗಿದೆಯೆಂಬುದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣಕರ್ತರು ಯಾರೆಂಬುದನ್ನು ಹೇಳಬೇಕು. ಆದ್ದರಿಂದ ನಾನು ಇವರನ್ನು ಅಂಗಲಾಚಿ ಕೈಮುಗಿದು ಬೇಡುತ್ತೇನೆ. ಆ ಜನರಿಗೆ ಇವರು ಕೊಟ್ಟಿರುವ ಪರಿಹಾರವಾದರೂ ಏನು, ಬಹುಶಃ ನೀವು ಅಲ್ಲಿಗೆ ಹೋಗಿದ್ದರೆ, ಆ ವರ್ಗದ ಜನರು ಅಲ್ಲಿ ಇಷ್ಟು ತೊಂದರೆಯಾಗುತ್ತಿರುವುದರಿಂದ, ನಿಮ್ಮನ್ನು ಇಷ್ಟುಹೊತ್ತಿಗೆ ಸುಟ್ಟು ಹಾಕುತ್ತಿದ್ದರು.

ಉಪಾಧ್ಯಕ್ಷರು.— ನಿಮ್ಮನ್ನು ಎಂದು ಹೇಳಿದರೆ, ಅದು ನನಗೆ ಅನ್ವಯಿಸುತ್ತದೆ. ಆ ರೀತಿ ಹೇಳಬೇಡಿ. ನಿಮ್ಮನ್ನು ಎಂದು ಹೇಳಿದರೆ ಅದರ ಪರಿಣಾಮ ಬೇರೆಯಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ಯಾರು ಅನ್ಯಾಯ ಮಾಡುತ್ತಿದ್ದಾರೋ ಅವರನ್ನು ಸುಟ್ಟು ಹಾಕುತ್ತಿದ್ದರೆಂದು ನಾನು ಹೇಳಿದ್ದು. ನಿಮಗೆ ಅಂತಹ ಅವಕಾಶವನ್ನು ಒದಗಿಸಿಕೊಟ್ಟಿಲ್ಲ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ಮಾತನಾಡುವಾಗ ಇವತ್ತು ಹೊಸದಾಗಿ 'ನಿಮ್ಮನ್ನು ಸುಟ್ಟು ಹಾಕುತ್ತಿದ್ದರು' ಎಂಬ ಪದಗಳನ್ನು ಉಪಯೋಗಿಸಿದರು. ಅದು ಸರಿಯಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ಈ ದೇಶದಲ್ಲಿ ನಡೆಯುತ್ತಾ ಇರುವುದು ಏನೆಂಬುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ರೈತವರ್ಗದವರಿಗೆ ತುಂಬಾ ಅನ್ಯಾಯಗಳನ್ನು ಮಾಡುತ್ತಿದ್ದಾರೆ. ಅವರಿಗೆ ಬೇಕಾದ ಕೆಲಸ ಕಾರ್ಯಗಳನ್ನು ಕೂಡಲೇ ಮಾಡಿಕೊಡಬೇಕೆಂದರೆ ಅದನ್ನು ಮಾಡುತ್ತಾ ಇಲ್ಲ. ಏಕೆಂದರೆ ಅವರು ತಿಳಿವಳಿಕೆ ಇಲ್ಲದ ಜನರು, ವಿದ್ಯಾವಂತರಲ್ಲದ ಜನರು ಎಂಬುದಾಗಿ ತಿಳಿದುಕೊಂಡು ಅವರಿಗೆ ನಾವು ಎಷ್ಟು ಕಿರುಕುಳ ಕೊಟ್ಟರು ನಮ್ಮ ಮೇಲೆ ಬೀಳುವುದಿಲ್ಲವೆಂದು ಇವರೇನಾದರೂ ತಿಳಿದಿದ್ದರೆ ಅದು ಬಹಳ ತಪ್ಪು. ಅವರಿಗೆ ಮೊದಲಿನಿಂದಲೂ ಕಷ್ಟದ ಪರಂಪರೆಗಳನ್ನು ಇವರು ಸೃಷ್ಟಿಮಾಡಿಕೊಡುತ್ತಿದ್ದಾರೆ. ರೈತರಪರವಾಗಿ ನಾನಾ ಕಾರ್ಪೊರೇಷನಗಳಿಗೆ, ಇವರು ಕೋಟ್ಯಾಂತರ ರೂಪಾಯಿಗಳಷ್ಟು ಬಂಡವಾಳಹಾಕಿ ರೈತರಿಗೇ ಅನ್ಯಾಯಗಳನ್ನು ಮಾಡುತ್ತಿದ್ದರೆ ಇವರನ್ನು ನಾನು ಇನ್ನಾವ ಪದಗಳಲ್ಲಿ ಖಂಡಿಸಬೇಕೋ ನನಗಂತೂ ಅರ್ಥವಾಗುತ್ತಾ ಇಲ್ಲ. ನಮ್ಮಲ್ಲಿ ಕೆಲವು ಹೋಬಳಿ ಏರಿಯಾದಲ್ಲಿ ಸುಮಾರು ಸಾವಿರಾರು ಎಕರೆಯಲ್ಲಿ ಹೈಬ್ರಿಡ ಜೋಳವನ್ನು ಬೆಳೆದು, ಒಂದು ಕೆ. ಜಿ. ಜೋಳಕ್ಕೆ ೨ ರೂಪಾಯಿನಂತೆ ಖರ್ಚು ಮಾಡಿದ್ದರೂ ಒಂದು ಎಕರೆಯಲ್ಲಿ ೨೦–೨೫ ಕ್ವಿಂಟಾಲ ಬೆಳೆ ಬರುವದಕ್ಕೆ ಬದಲಾಗಿ ಕೇವಲ ೨ ಕ್ವಿಂಟಾಲ ಬೆಳೆ ಬಂದಿದೆ. ಇದೇ ರೀತಿಯಲ್ಲಿ ಅನೇಕ ಬಡ ಜನರಿಗೆ ಇವರು ನಂಬಿಸಿ ಕೋಟ್ಯಾಂತರ ರೂಪಾಯಿಗಳನ್ನು ಈ ದೇಶದಲ್ಲಿ ಹಾಳು ಮಾಡುತ್ತಿದ್ದಾರೆ. ಇದರಿಂದ ಆರ್ಥಿಕವಾಗಿ ರೈತರ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಕೋಟ್ಯಾಂತರ ಪಲ್ಲ ದಿನಸಿ ಈಗಾಗಲೇ ಹಾಳಾಗಿ ಹೋಯಿತು. ಕೆಲವರು ಪುಣ್ಯವಂತರು ಹೆಚ್ಚು ಫಸಲನ್ನು ಪಡೆದರು. ಇನ್ನು ಕೆಲವರಿಗೆ ಕೇವಲ ಒಂದೂವರೆ ಕ್ವಿಂಟಾಲ್ ಬೆಳೆ ಬಂತು. ಇನ್ನು ಕೆಲವರು ಉಪವಾಸವಿದ್ದು ಗೊಬ್ಬರ ಹಾಕಿದ್ದಕ್ಕೆ ಅಂತಹವರು ಅದಕ್ಕೆ ಖರ್ಚು ಮಾಡಿದಂಥ ಕೂಲಿಯಾದರೂ ಗಿಟ್ಟಿಸಿದರು. ಈ ದೇಶದ ಅನೇಕ ಭಾಗಗಳಲ್ಲಿ ಬೀಜದ ಬೆಲೆಯು ಸಹ ನಮಗೆ ದೊರೆತಿಲ್ಲ. ವ್ಯವಸಾಯ ಮಾಡಿದ ಕೂಲಿ ಹೋಯಿತು, ಹೀಗೆ ರೈತರಿಗೆ ಪ್ರತಿಯೊಂದು ವರಮಾನವೂ ಹೋಯಿತು. ಇನ್ನು ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಲು ಹೋಗುವದಿಲ್ಲ. ಏಕೆಂದರೆ ಈ ಸಭೆಯಲ್ಲಿಯೇ ಸಾಕಷ್ಟು ಸಾರಿ ನಾವು ಹೇಳಿದ್ದೇವೆ. ಹೊರಗಡೆ ನಿಮ್ಮ ಪಕ್ಷದವರೂ ಸಹ ಹೇಳಿದ್ದಾರೆ, ನಮ್ಮ ಪಕ್ಷದವರೂ ಸಹ ಹೇಳಿದ್ದಾರೆ. ಅನೇಕ ಕಡೆಗಳಲ್ಲಿ ಇವರಿಗೆ ಹೋವ ಕಡೆಗಳಲ್ಲೆಲ್ಲಾ ರೈತರು ಕಣ್ಣೀರಿಟ್ಟು ತಮ್ಮ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ಇಂತಹ ಒಂದು ಅಕ್ರಮವನ್ನು ಸರಿಪಡಿಸುವುದಕ್ಕೆ ಇವರಿಗೆ ಸಾಮರ್ಥ್ಯವಿಲ್ಲದೇ ಹೋದರೆ - ಇನ್ನು ಯಾವ ಮಾತಿನಿಂದ ರೈತರು ಇವರನ್ನು ಖಂಡಿಸಬೇಕೋ ಗೊತ್ತಿಲ್ಲ. ಇದರ ಬಗ್ಗೆ ಇವರೇನಾದರೂ ನಿಷ್ಪಕ್ಷಪಾತವಾಗಿ

ವಿಚಾರಣೆಯನ್ನು ಮಾಡಿದ್ದಾರೆಯೇ ? ಯಾರ ಮೇಲಾದರೂ ತಪ್ಪು ಬಂದ ತಕ್ಷಣ ಸೂಕ್ತ ಕ್ರಮವನ್ನು ತೆಗೆದು ಕೊಂಡಿದ್ದಾರೆಯೇ ಅಂದರೆ ಅದು ಕೂಡ ಇಲ್ಲ. ಎಲ್ಲಿ ತಪ್ಪಾಗಿದೆ, ಎಲ್ಲಿ ಯಾರ್ಯಾರಿಗೆ ಅನಾನುಕೂಲ ಗಳಾಗಿವೆಯೆಂಬುದನ್ನು ಸರ್ಕಾರ ದವರು ತಿಳಿದುಕೊಂಡು ಅವನ್ನು ಕೂಡಲೆ ಸರಿಪಡಿಸುವುದಕ್ಕೆ ಏರ್ಪಾಡು ಮಾಡದಿದ್ದ ಮೇಲೆ, ರೈತರು ಸರ್ಕಾರಕ್ಕೆ ಏಕೆ ದುಡ್ಡು ಕೊಡಬೇಕೆಂದು ಕೇಳುವ ಪರಿಸ್ಥಿತಿ ಬರುತ್ತದೆ. ನಾನು ಬೇರೆಬೇರೆ ಸಂಸ್ಥೆಗಳಿಗೆ ಸರ್ಕಾರ ದುಡ್ಡು ಹಾಕಿ ಕಾರ್ಪೊರೇಷನ್‌ಗಳನ್ನು ಮಾಡಿ ಅವುಗಳ ಮೂಲಕ ಬೀಜ ಹಂಚುವ ಬಗ್ಗೆ ನಾನು ಈಗ ಮಾತನಾಡುತ್ತಿದ್ದೇನೆ. ಕೇವಲ ನನ್ನ ಕ್ಷೇತ್ರದ ವಿಷಯವನ್ನೇ ನಾನು ಹೇಳುವುದಿಲ್ಲ. ಈ ದೇಶದಲ್ಲಿ ಬಹುಭಾಗದ ಕಡೆಗಳಲ್ಲಿ ಏನೇನು ಆಗತ್ತಿದೆ ಯೆಂಬುದನ್ನು ನಾನು ಮೊದಲು ಪ್ರಸ್ತಾಪ ಮಾಡುತ್ತಿನೆ. ಇದರ ಬಗ್ಗೆ ನಾನು ಹಿಂದೆ ಹೋದಸಾರಿ ಬಡ್ಜೆಟ್ ಸೆಷ್ಷನ್ನಿನಲ್ಲಿ ನಾನು ಒಂದು ಸಲಹೆಮಾಡಿದ್ದೇನೆ. ಈಗ ನಮ್ಮ ರಾಜ್ಯದಲ್ಲಿ ೧೯ ಜಿಲ್ಲೆಗಳವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ನಾನಾ ತರಹ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಅಲ್ಲಿ ಬೇರೆ ಬೇರೆ ಹವಾಗುಣವಿದೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್‌ಅಗಿ ಮಾಡಿ, ಅದಕ್ಕೆ ಕೇವಲ ಒಂದೆರಡು ಲಕ್ಷ ರೂಪಾಯಿಗಳು ಖರ್ಚಾಗುತ್ತದೆಂದು ನಾನು ಹಿಂದೆಯೂ ಹೇಳಿದ್ದೇನೆ. ಜಿಲ್ಲಾ ಸೆಂಟರುಗಳಲ್ಲಿ ಸೀಡ್ ಪ್ರೊಸೆಸಿಂಗ್ ಮಾಡಿದನಂತರ ಅದನ್ನು ಯಾವುದಾದರೂ ಒಂದು ಏಜೆನ್ಸಿಗೆ ಕೊಟ್ಟು ಅದರ ಮೂಲಕ ರೈತರಿಗೆ ಬೀಜವನ್ನು ಸರಬರಾಜು ಮಾಡಿದರೆ ಆಗ ರೈತರಿಗೆ ಅನಕೂಲ ವಾಗುತ್ತದೆ. ಇದರಿಂದ ಯಾರಲ್ಲಿ ತಪ್ಪು ಇರುತ್ತದೆಂಬುದನ್ನು ಕಂಡುಹಿಡಿಯ ಬಹುದು. ಅದನ್ನು ಸರಿಮಾಡಲೂ ಆಗುತ್ತದೆ. ಅಂತಹ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಇವರು ಒಪ್ಪುವುದಿಲ್ಲ. ಕೇವಲ ಅವರ ಹಿತೈಷಿಗಳಿಗೆ ಎನ್‌ಕರೇಜ್ ಮಾಡಬೇಕೆಂದು ಹೋಗುತ್ತಿದ್ದಾರೆ. ಅವರ ಬಾಲ ಬಡುಕರು ಆಗಿರುವವರೆಸ್ಟೇ ಇನ್ನೂ ದೊಡ್ಡಮನುಷ್ಯರನ್ನಾಗಿ ಮಾಡಬೇಕೆಂದು ಇದ್ದಾರೋ ಏನೋ ಗೊತ್ತಿಲ್ಲ. ಇವತ್ತು ಲಕ್ಷಾಂತರ ಪಲ್ಲ ದಿನಸಿ ನಾನು ಹೇಳಿದ ರೀತಿಯಲ್ಲಿ ಮಾಡಿದ್ದರೆ ಜಾಸ್ತಿಯಾಗುತ್ತಿತ್ತು. ಆದ್ದರಿಂದ ಈಗಲಾದರೂ ಸರ್ಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿ ಆಯಾ ಜಿಲ್ಲೆಗೆ ಬೇಕಾದಂಥ ಎಲ್ಲಾ ಸೀಡ್ಸ್ ಬಗ್ಗೆ ಮಾಹಿತಿ ಪಡೆದು, ಅಲ್ಲಿ ಅದನ್ನು ಚೆನ್ನಾಗಿ ಬೆಳೆಸಲು ಒಂದು ಪ್ರೊಸೆಸಿಂಗ್ ಮಾಡಿ ಒಂದೇ ಕಡೆ ಬೀಜವನ್ನು ಹಂಚಿದರೆ ಬಹಳ ಒಳ್ಳೆಯದು. ಯಾರೂ ಸಹ ಕೆಟ್ಟ ಬೀಜವನ್ನು ತಯಾರು ಮಾಡುವುದಿಲ್ಲ. ಆದರೆ ಎಲ್ಲೋ ಅದನ್ನು ಬೆಳೆಯುವುದು, ಅದನ್ನು ಯಾರೋ ಸರ್ಟಿಫೈ ಮಾಡುವುದು, ಅದನ್ನು ಯಾರೋ ಕೊಂಡು ಕೊಳ್ಳುವುದು, ಯಾರೋ ಹಂಚುವುದು—ಈ ರೀತಿ ನಿಜವಾಗಿ ಎಂದಿಗೂ ಆಗಬಾರದು. ಇದರಿಂದ ರೈತರಿಗೆ ವಿಶೇಷವಾಗಿ ನಷ್ಟವಾಗುವುದಾದರೆ, ಇದಕ್ಕೆ ಯಾರು ಜವಾಬ್ದಾರರು? ಇದರಿಂದೇನು ಹೇಳುತ್ತಾರೆಂದರೆ, ಬೆಳೆಯುವುದರಲ್ಲಿ ತಪ್ಪು ಇದೆಯೋ ಏನೋ ಗೊತ್ತಿಲ್ಲ, ಸೀಡ್ ಸರ್ಟಿಫೈ ಮಾಡಿದ್ದರಲ್ಲಿ ತಪ್ಪು ಇದೆಯೋ ಏನೋ

ಗೊತ್ತಿಲ್ಲ, ಟಾನ್ಸ್‌ಪೋರ್ಟ್ ಮಾಡುವಾಗ ಅದು ಮಳೆಯಲ್ಲಿ ನೆನೆದುಹೋಯಿತೋ ಏನೋ ಗೊತ್ತಿಲ್ಲ, ಅಥವಾ ಅದನ್ನು ಸ್ಟೋರ್ ಮಾಡುವಾಗ ತೇವದ ನೆಲದಲ್ಲಿ ಅದು ಇತ್ತೋ ಏನೋ ಗೊತ್ತಿಲ್ಲವೆಂದು ಕೆಲವು ಜನರು ಹೇಳಿ ಬಡಪಾಯಿ ರೈತನ ಮೇಲೆ ಬೆಳೆ ಸರಿಯಾಗಿ ಬಾರದಿದ್ದರೆ ಜವಾಬ್ದಾರಿಯನ್ನು ಇಡುತ್ತಾರೆ. ಆದ್ದರಿಂದ ಇವರಿಗೆ ರೈತರ ಮೇಲೆ ನಿಜವಾಗಿ ಅಂತಃಕರಣವಿದ್ದರೆ, ಅವರ ಪರಿಸ್ಥಿತಿಯನ್ನು ಚೆನ್ನಾಗಿ ಗಮನಿಸಿ ಅವರಿಗೆ ಹೆಚ್ಚಿನ ಉತ್ತೇಜನವನ್ನು ಬೆಳೆಯುವವರಲ್ಲಿ ಕೊಡಬೇಕು. ಆದರೆ ಹೊರಗಡೆಗೆ ಹೋಗಿ ಇವರು ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಬೇರೆ ಬೇರೆ ದೇಶಗಳಿಂದ ಆಹಾರ ದಿನಸಿಗಳನ್ನು ತೆಗೆದುಕೊಂಡು ಬರುವ ಪ್ರಮೇಯ ಏನು? ಇವರಿಗೆ ಆತ್ಮಗೌರವದಿಂದ ಬಾಳ ಬೇಕೆಂಬುದಿದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಆದ್ದರಿಂದ ರೈತರಿಗೆ ಉತ್ತಮವಾದಂಥ ಬೀಜವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಕೊಡುವ ಹಾಗೆ ತಕ್ಕ ಏರ್ಪಾಡನ್ನು ಮಾಡಬೇಕು. ಯಾರಾದರೂ ತಪ್ಪು ಮಾಡಿದರೆ ಅವರ ಬಗ್ಗೆ ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಕೊನೆಯದಾಗಿ ನಾನು ಆರ್ಥಿಕ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಪುನಃ ಇದೇ ಪರಿಸ್ಥಿತಿ ಮುಂದುವರಿದರೆ ನಿಜವಾಗಿ ಬಹುಶಃ ಈ ದೇಶದ ರೈತರು ಒಗ್ಗಟ್ಟಾಗಿ ಇವರ ಮೇಲೆ ಚಳುವಳಿ ಹೂಡುತ್ತಾರೆ, ಮತ್ತು ಅದರಿಂದ ಆಗತಕ್ಕ ಅಪಘಾತಕ್ಕೆ ಸರ್ಕಾರವೇ ಹೊಣಗಾರಿಕೆ ಯಾಗುತ್ತಾರೆಂದು ನಾನು ಈ ಸಂದರ್ಭದಲ್ಲಿ ತಿಳಿಸ ಬಯಸುತ್ತೇನೆ.

ಇನ್ನೊಂದು ಗೊಬ್ಬರದ ವಿಚಾರ. ಗೊಬ್ಬರದ ವಿಚಾರದಲ್ಲಿ ಈ ಸರ್ಕಾರ ಮಾಡಿರತಕ್ಕಂತಹ ಅವಿವೇಕಿತನ ಅದಕ್ಷತೆ ಮತ್ತು ಅನ್ಯವಹಾರಕ್ಕೆ ಒಂದು ನಿದರ್ಶನ ಕೊಟ್ಟರೆ ಸಾಕು. ಮೊದಲು ಹತ್ತು ವರ್ಷಗಳ ಹಿಂದೆ ಇದ್ದಂತಹ ಬೇಡಿಕೆಗೂ ಇವತ್ತಿನ ಬೇಡಿಕೆಗೂ ಹೋಲಿಸಿದರೆ, ಇಂದಿನ ಬೇಡಿಕೆ ಬಹಳ ಹೆಚ್ಚಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ರೈತರು ಹೆಚ್ಚು ಬೆಲೆ ಕೊಟ್ಟರೆ ಎಷ್ಟು ಗೊಬ್ಬರ ಬೇಕಾದರೂ ಸಿಗುತ್ತದೆ; ನ್ಯಾಯ ಬೆಲೆಯಲ್ಲಿ ಸಿಗುತ್ತಾ ಇಲ್ಲ. ಗೊಬ್ಬರ ಬೇಕೆಂದು ಸಾವಿರ ರೂಪಾಯಿ ಕೊಟ್ಟರೆ ಬೇಕಾದಷ್ಟು ಗೊಬ್ಬರ ಕೊಡುತ್ತಾರೆ. ಮಾನ್ಯ ಹಣಕಾಸಿನ ಸಚಿವರು ಬೇರೆ ಉಡುಪು ಧರಿಸಿ ಹೋಗಿ ಕೇಳಿದರೂ ಹೆಚ್ಚು ಹಣ ಕೊಟ್ಟರೆ ಸಿಗುತ್ತದೆ. ಆದ್ದರಿಂದ ನೀವು ಗೊಬ್ಬರಕ್ಕೆ ಸ್ಟೆರ್ನಿಟಿ ಇದೆಯೆಂದು ಹೇಳುವ ವಾದವನ್ನು ನಾನು ಒಪ್ಪುತ್ತಾ ಇ . ಇರತಕ್ಕಂತಹ ಗೊಬ್ಬರವನ್ನು ಸರಿಯಾಗಿ ವಿತರಣೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಎರಡು ವರ್ಷಗಳ ಹಿಂದೆ ಇದ್ದಂತಹ ಹಂಚಿಕೆ ಪದ್ಧತಿ ಏನಿತ್ತು, ಅದನ್ನು ಮುಂದುವರಿಸಿದ್ದರೆ ರೈತರಿಗೆ ಇಷ್ಟು ತೊಂದರೆ ಯಾಗುತ್ತಾ ಇರಲಿಲ್ಲ. ನೀವು ಅದಕ್ಕೆ ಈಗ ಒಂದು ಹೊಸ ಕಾರ್ಪೊರೇಷನ್ ಸೃಷ್ಟಿ ಮಾಡಿ ಅಗ್ರೋ ಇಂಡಸ್ಟ್ರೀಸ ಕಾರ್ಪೊರೇಷನಿಗೂ ಸಹ ಇದರ ಹಂಚಿಕೆಯನ್ನು ವಹಿಸಿದ್ದೀರಿ ಹೀಗಾಗಿ ಯಾರ್ಯಾರು ಎಷ್ಟಕ್ಕೆ ಮಾರುತ್ತಾರೆಂದು ಗೊತ್ತಾಗುವುದಿಲ್ಲ. ಫೆಡರೇಷನ್ನಿಂದ ತೆಗೆದು ಇನ್ನೊಬ್ಬ ಅಗ್ರೋ ಇಂಡಸ್ಟ್ರೀಸ ಕಾರ್ಪೊರೇಷನಿಗೆ

ಕೊಡಲು ನಿಮ್ಮ ಸ್ವಾರ್ಥ ಬುದ್ಧಿಯೇ ಕಾರಣವೆಂದು ಹೇಳಬೇಕಾಗುತ್ತದೆ ಹೀಗೆ ಇದರಲ್ಲಿ ಒಂದು ಅವ್ಯವಸ್ಥೆಯನ್ನು ಮಾಡಿ ಗೊಬ್ಬರ ರೈತರಿಗೆ ಸರಿಯಾಗಿ ಸಿಗದ ಹಾಗೆ ಮಾಡಿದ್ದೀರಿ. ಮೊದಲು ಫೆಡರೇಶನ್‌ನವರು ತಾಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡುತ್ತಿದ್ದರು. ತಾಲೂಕು ಸೊಸೈಟಿಯವರು ಎಲ್ಲಿ ಸಹಕಾರ ಸಂಘಗಳಲ್ಲಿ ದುಡ್ಡು ಕೊಡುತ್ತಾರೋ ಅವರಿಗೆ ಕೊಟ್ಟು ಅವರು ರೈತರಿಗೆ ಹಂಚುತ್ತಿದ್ದರು. ಇದು ಸರಿಯಾಗಿ ನಡೆಯುತ್ತಿತ್ತು. ಇದನ್ನು ತಪ್ಪಿಸಿ ಆಗ್ರೋ ಇಂಡಸ್ಟ್ರೀಸಿಗೂ ಕೊಟ್ಟಿದ್ದೀರಿ. ಇವರು ಡೈರೆಕ್ಟ್ ಆಗಿ ಎಲ್ಲೆಲ್ಲಿ ಪರ್ಚೇಸ ಮಾಡುತ್ತಾರೆ ಅಲ್ಲಲ್ಲೇ ಅದು ಮಾರಾಟವಾಗಿ ಹೊರಟು ಹೋಗುತ್ತದೆ. ಹೀಗಾಗಿ ರೈತರಿಗೆ ಸರಿಯಾಗಿ ತಲುಪದೆ, ರೈತರು ಅಗತ್ಯ ಬಿದ್ದರೆ ಬ್ಲ್ಯಾಕ್ ಮಾರ್ಕೆಟಿನಲ್ಲಿ ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಒಂದು ವರ್ಷದಿಂದಲೂ ಹೇಳುತ್ತಾ ಬಂದರೂ ಇವರು ಸುಮ್ಮನೆ ಕೂತಿರುತ್ತಾರೆ. ಹಳ್ಳಿಗೆ ಗೊಬ್ಬರ ಹೋದರೆ ಅಲ್ಲಿಂದ ಬ್ಲಾಕ್‌ಮಾರ್ಕೆಟ್ ಆಗುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಹಿಂದೆ ಇದ್ದಂತಹ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ನಿಮಗೆ ಏನು ಹೊಟ್ಟೆನೋವು? ಇಂಥ ಒಂದು ವಿಚಾರವನ್ನು ಎಷ್ಟು ವಿಧವಾಗಿ ಹೇಳಿದರೂ ಯಾರ್ಯಾರಿಗೆ ಪರ್ಮಿಟ್ ಕೊಟ್ಟು ರೈತರು ಒಂದಕ್ಕೆ ನಾಲ್ಕರಷ್ಟು ಕೊಡುವಂತೆ ಮಾಡುವದು ನ್ಯಾಯವೇ? ಆದ್ದರಿಂದ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ಟಳ ಫ್ಯಾಮಿನ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಹೋದ ವರ್ಷವೂ ಸಹ ಇದರ ಬಗ್ಗೆ ಇಲ್ಲಿ ಬೇಕಾದಷ್ಟು ಗಲಾಟೆಯಾಯಿತು. ಕೇಂದ್ರದಿಂದ ಎಷ್ಟು ಬೇಕಾದರೂ ಕೊಡುತ್ತಾರೆ ಎಂದು ಹೇಳಿದರು. ಇಂದಿರಾ ಗಾಂಧಿಯವರು ಇಲ್ಲಿಗೆ ಬಂದಾಗ ಕೃಷ್ಣಾ ಪ್ರಾಜೆಕ್ಟ ಇಲ್ಲೇ ಮಂಜೂರು ಮಾಡುತ್ತಾರೆ ಎಂದು ಹೇಳಿದರು. ಅವತ್ತು ಹಾಗೆ ಹೇಳಿದ ಆಯಮ್ಮ ಇವರನ್ನು ಆ ಮೇಲೆ ಕೇರೇ ಮಾಡಿಲ್ಲ. ಇವರು ಹಳೆಯ ಮೈಸೂರಿಗೆ ಒದಗಿಸಿದ ಕೊಟ್ಯಾಂತರ ರೂಪಾಯಿ ಬಜೆಟನ್ನು ಅಲ್ಲಿ ತೆಗೆದುಕೊಂಡು ಹೋಗಿ ಖರ್ಚು ಮಾಡಿಸಿದರು. ನಾವು ಎಷ್ಟು ಹೇಳಿದರೂ ಇವರು ಗುಂಡು ಕಲ್ಲಿನ ಹಾಗೆ ಇಲ್ಲೇ ಕುಳಿತಿದ್ದಾರೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದವರು ಟಳ ಫ್ಯಾಮಿನಲ್ಲಿ ಎಷ್ಟು ಖರ್ಚು ಮಾಡಿದರು, ಅಷ್ಟನ್ನು ಸಹ ಕೇಂದ್ರದಿಂದ ತೆಗೆದುಕೊಂಡು ಬಂದರು. ಅದೇ ರೀತಿ ಮಹಾರಾಷ್ಟ್ರದವರು ಸಹ ಎಷ್ಟು ಖರ್ಚು ಮಾಡಿದರು, ಅಷ್ಟೇ ದುಡ್ಡನ್ನು ತೆಗೆದುಕೊಂಡು ಬಂದರು. ಆದರೆ ಇವರು ಇಲ್ಲಿ ಬಹಳ ಧೈರ್ಯವಾಗಿ, ನಾವು ಅಲ್ಲಿ ಹೋಗಿ ತೆಗೆದುಕೊಂಡು ಬರುತ್ತೇವೆಂದು ಹೇಳಿ ಹೋಗುತ್ತಾರೆ. ಆದರೆ ಅಲ್ಲಿ ಹೋಗಿ ತೆಪ್ಪಗೆ ಮಾತನಾಡಿ ವಾಪಸ್ಸು ಬರ್ತಾರೆ. ಆದ್ದರಿಂದ ಇವರು ಅಧಿಕಾರದಲ್ಲಿರಲು ಅರ್ಹರಲ್ಲ ಮತ್ತು ಇವರು ದಕ್ಷರೇ ಎಂದು ಕೇಳುತ್ತೇನೆ. ಇವರನ್ನು ಈ ರೀತಿ ಎಷ್ಟು ದಿವಸ ಬಿಡುವುದು? ಹಳೆ ಮೈಸೂರು ಜಿಲ್ಲೆಗೆ ಮಾಡಬಾರದ ಅನ್ಯಾಯ ಮಾಡಿದ್ದಾರೆ. ಮಾನ್ಯ ಚನ್ನಬಸಪ್ಪ

ನವರು ಯಾವಾಗ ಕೇಳಿದರೂ ಅಧಿಕಾರಿಗಳು ಎಸ್ಟಿಮೇಟ್ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಕಳೆದ ಒಂದೂವರೆ ವರ್ಷಗಳಿಂದ ಇದನ್ನು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಮಂತ್ರಿಯಾಗಿ ಒಂದೂವರೆ ವರ್ಷವಾಗಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಇವರು ಕೇಳಿದರೆ ಅವುಗಳನ್ನು ಕನ್ ಸಾಲಿಡೇಟಾಗಿ ಮಾಡಿ ಆರ್ಡರ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ. ಕೊನೆಗೆ ಇವರಿಗೆ ಅವುಗಳನ್ನು ಮಾಡಿಸಬೇಕೆಂಬ ಆಶೆ ಇದ್ದರೂ ದುಡ್ಡು ಇರುವುದಿಲ್ಲ. ಒಂದು ಪಕ್ಷ ಆರ್ಡರ ಮಾಡಿದರೂ ಫಿನಾನ್ಸ ಡಿಪಾರ್ಟಮೆಂಟಿಂದ ಅಡ್ಮಿನಿಸ್ಟ್ರೇಟಿವ ಸ್ಯಾಂಕ್ಷನ್, ಟೆಕ್ನಿಕಲ್ ಸ್ಯಾಂಕ್ಷನ ಇತ್ಯಾದಿ ಏನೇನೋ ಬೇಕೆಂದು ಹೇಳುತ್ತಿದ್ದಾರೆ. ಈ ರೀತಿ ಮಾಡುವುದು ನಿಮಗೆ ಭೂಷಣವಲ್ಲ ಮತ್ತು ನ್ಯಾಯವೂ ಇಲ್ಲ. ಕೊನೆಯ ಪಕ್ಷ ನೀವು ಡೆಪಲಪಮೆಂಟ ಆಕ್ಟಿವಿಟೀಸಿಗೂ ಏಕೆ ಅಡ್ಡಿ ಬರುತ್ತೀರಿ? ೬ ಕೋಟಿಯ ಪ್ರೊಜೆಕ್ಟನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ ಏಕೆ ಎಂದು ಕೇಳುತ್ತೇನೆ. ಇವತ್ತು ಫಿನಾನ್ಸ ಡಿಪಾರ್ಟಮೆಂಟಿನಲ್ಲಿ ಕ್ಷರಿ ಹಾಕುವ ಫಿನಾನ್ಸ ಸೆಕ್ರೆಟರಿಯು ನಿಮಗಿಂತ ಮೇಲೆಯೇ ಎಂದು ಕೇಳುತ್ತೇನೆ? ಅವರ ಮೇಲೆ ನಿಮ್ಮ ಕಂಟ್ರೋಲ್ ಇಲ್ಲವೆ? ಅಂತೂ ಏನೇನೋ ನಾಟಕ ಮಾಡಿ ದೇಶದಲ್ಲಿ ಆಗತಕ್ಕಂತಹ ಕೆಲಸಕಾರ್ಯಗಳಿಗೆ ಬಹಳ ಅನ್ಯಾಯ ಮಾಡಿದ್ದೀರಿ. ಜನತೆ ಇದನ್ನು ಮರೆತು ನಿಮ್ಮನ್ನು ಕ್ಷಮಿಸಿದರೂ ದೇವರು ಕ್ಷಮಿಸಲಾರರು. ನಿಮ್ಮ ಈ ಅವ್ಯವಹಾರದ ಆರ್ಡರ್ಸ, ಮೋಸ ಇತ್ಯಾದಿ ಗಳು ಬಹಳ ದಿವಸ ನಡೆಯಲಾರವು ಎಂದು ಎಚ್ಚರಿಕೆಯನ್ನು ಕೊಡುತ್ತೇನೆ.

ನಾನು ನನ್ನ ಹಿತದೃಷ್ಟಿಯಿಂದ ಮಾತನಾಡುವದಿಲ್ಲ, ದೇಶದ ಹಿತದೃಷ್ಟಿ ಯಿಂದ ಮಾತನಾಡುತ್ತಿದ್ದೇನೆ. ನಾನೂ ಒಬ್ಬ ರೈತ. ದೇಶ ಉಳಿದರೆ ನಾನೂ ಉಳಿಯುತ್ತೇನೆ. ಜನ ಬಾಳಿ ಬದುಕಬೇಕು ಎಂದು ಪೂರ್ಣವಾದ ನಂಬಿಕೆಯನ್ನು ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ತಾರತಮ್ಯ ಮಾಡುವುದನ್ನು ಬಿಡಿ. ಮಂತ್ರಿಮಂಡಲದವರು ದೆಹಲಿಗೆ ಹೋಗಿ ಗ್ಯಾಂಟ ತಂದು ಸರಿಯಾದ ವ್ಯವಸ್ಥೆ ಯನ್ನು ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆ ರೀತಿ ಮಾಡುವುದು ತಪ್ಪಿದರೆ ಜನ ನಿಮ್ಮನ್ನು ಸುಮ್ಮನೆ ಬಿಡುವದಿಲ್ಲ. ಅವರು ಯಾವ ಪ್ರಾಯಶ್ಚಿತ್ತವನ್ನು ಮಾಡುತ್ತಾರೆಯೋ ಅದಕ್ಕೆ ಸರ್ಕಾರದವರೇ ಹೊಣೆಯಾಗ ಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ)— ಸನ್ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದ ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ಏನು ಒಂದು ಹೆಚ್ಚುವರಿ ಬೇಡಿಕೆಗಳನ್ನು ಮಂಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಎರಡು ಮಾತನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ೧೯ ವರ್ಷ ಆಯಿತು. ಈ ಅವಧಿಯಲ್ಲಿ ಈ ಸರ್ಕಾರ ಎಷ್ಟು ಗರೀಬಿ

ಹಣವೋ ಮಾಡಿದ್ದಿರಿ ಎನ್ನುವ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ನಾನು ಮಾನ್ಯ ಅರ್ಥ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುತ್ತೇನೆ. ನಮ್ಮ ರಾಜ್ಯದ ಸರಾಸರಿ ವರಮಾನ ತಲೆಗೆ ಎಷ್ಟು? ಒಬ್ಬೊಬ್ಬರಿಗೆ ಎಷ್ಟು ವರಮಾನ ಇದೆ ಎನ್ನುವುದನ್ನು ಮಾನ್ಯ ಅರ್ಥಮಂತ್ರಿಗಳು ತಿಳಿಸಬೇಕು. ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದ ಸಾಮಾನ್ಯ ಮನುಷ್ಯನ ದಿನದ ಆದಾಯ ನನ್ನ ಅಂದಾಜು ಅಂಕಿ ಅಂಶಗಳ ಪ್ರಕಾರ ಬಹುಷ: ೬-೮ ವರ್ಷಗಳ ಹಿಂದೆ ೩೦ ಪೈಸೆ ಇತ್ತು. ಈಗ ೩೫ ಇರಬಹುದು. ಅದಕ್ಕಿಂತ ಹೆಚ್ಚು ಆಗಿಲ್ಲ ಆದರೆ ನಿಜವಾಗಿ ರಾಷ್ಟ್ರದ ಪ್ರಗತಿ ಪಥದಲ್ಲಿ ಜನರ ಉದ್ಧಾರ ಸಾಗಿದೆಯೇ? ಸರ್ಕಾರದವರು ಜನರ ಸಂಪಾದನೆಯ ಶಕ್ತಿಯನ್ನು ಹೆಚ್ಚಿಸಿದ್ದಾರೆಯೇ?

ಶ್ರೀ ಎಂ. ವೈ. ಘೋರ್ಪಡೆ.— ಸರಾಸರಿ ಪರಕ್ಯಾಪಿಟಾ ಇನ್‌ಕಂ ೫೧೫ ರೂಪಾಯಿ ಇದೆ.

ಶ್ರೀ ಕೋಣಂದೂರು ಲಿಂಗಪ್ಪ — ತಲೆಗೆ ವಾರ್ಷಿಕ ವರಮಾನ ೫೧೫ ರೂಪಾಯಿ, ದಿನಕ್ಕೆ ೧೯ ರೂಪಾಯಿ ಎಂದು ಹೇಳಿದ್ದಾರೆ ಎಂದು ಕಾಣುತ್ತದೆ. ಹಿಂದೆ ನೆಹರೂ ಅವರು ಪ್ರಧಾನಿಯಾಗಿದ್ದಾಗ ಲೋಕಸಭೆಯಲ್ಲಿ ಈ ಸಾಮಾನ್ಯ ಮನುಷ್ಯನ ಆದಾಯದ ಪ್ರಶ್ನೆಯನ್ನ ಎತ್ತಿದಾಗ ನೆಹರೂ ಅವರು ಕೊಟ್ಟಂತಹ ಅಂಕಿ ಅಂಶಗಳನ್ನು ನೋಡಿ ಡಾ ಲೋಹಿಯಾ ಅವರು ಅದು ತಪ್ಪು, ಅದು ನಿಜವಾದ ಲೆಕ್ಕವಲ್ಲ, ಅದು ಹೊರ ರಾಷ್ಟ್ರಗಳಿಗೆ ಹೇಳುವುದಕ್ಕೆ ಮಾತ್ರ ಇರಬಹುದು ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ಹಳ್ಳಿಯಲ್ಲಿರುವ ಒಬ್ಬ ಸಾಮಾನ್ಯ ಮನುಷ್ಯನಿಗೆ ಒಂದು ದಿವಸಕ್ಕೆ ೧೯ ರೂಪಾಯಿ ವರಮಾನ ಇದೆಯೇ? ಸೊಂಡೂರಿನಲ್ಲಿ, ಸಿದ್ದಾಪುರದಲ್ಲಿ ಇರುವ ರೈತರಿಗೆ ಒಂದು ದಿವಸಕ್ಕೆ ಒಬ್ಬ ರೈತನಿಗೆ ೧೯ ರೂಪಾಯಿ ವರಮಾನ ಬರುತ್ತದೆ ಎನ್ನುವುದನ್ನು ಸತ್ಯಕ್ಕೆ ದೂರವಾದ ಮಾತು.

ಶ್ರೀ ಎಂ. ವೈ. ಘೋರ್ಪಡೆ.— ಮಾನ್ಯ ಸದಸ್ಯರು ಸೊಂಡೂರಿನ ವಿಷಯ ಹೇಳಬೇಡಿ. ಅದು ನಿಮಗೆ ಗೊತ್ತಿಲ್ಲ ಒಬ್ಬನು ಒಂದು ದಿವಸಕ್ಕೆ ೨ ರೂಪಾಯಿ, ೩ ರೂಪಾಯಿ, ೪ ರೂಪಾಯಿ ಸುಲಭವಾಗಿ ದುಡಿಯುತ್ತಾರೆ. ಆದ್ದರಿಂದ ಇದು ಸೊಂಡೂರಿಗೆ ಅನ್ವಯಿಸುವುದಿಲ್ಲ. ಅಲ್ಲಿ ಸಾಕಷ್ಟು ಕೆಲಸ ಸಿಕ್ಕುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಈಗ ಅಲ್ಲಿ ಗಣಿಯ ಹೊರಗಡೆ ಇದ್ದ ಹರಿಜನರ ತಿಮ್ಮಪ್ಪ ಎನ್ನುವವನು ತೀರಿ ಹೋದ. ಅವನಿಗೆ ಒಂದು ದಿವಸಕ್ಕೆ ಎಷ್ಟು ವರಮಾನ ಇತ್ತು. ಅವರ ಕುಟುಂಬದವರ ವರಮಾನ ಎಷ್ಟಿದೆ? ನಮ್ಮ ರಾಜ್ಯದಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ವರಮಾನ ಒಂದು ದಿವಸಕ್ಕೆ ೩೫ ಪೈಸೆಗಿಂತ ಹೆಚ್ಚು ಇಲ್ಲ. ನಮ್ಮ ಜನಗಳು ಕಷ್ಟದಲ್ಲಿ ಬದುಕುತ್ತಿದ್ದರೂ ಅವರಿಗೆ ಸಿಟ್ಟಿಲ್ಲ. ಇದು ವಿಷಾದದ ವಿಷಯ. ಈ ಒಂದು ಪರಿಸ್ಥಿತಿಗೆ ತಂದಿರತಕ್ಕ ಅಧಿಕಾರದ ಗದ್ದುಗೆಯಲ್ಲಿ

ಕುಳಿತುಕೊಂಡಿರತಕ್ಕ ಪಕ್ಷದ ಬಗ್ಗೆ ನಮ್ಮ ಜನ ಸಿಟ್ಟಿಗೇಳುತ್ತಿಲ್ಲ. ನಮ್ಮ ಹಿಂದಿನ ಸಂಪ್ರದಾಯದಂತೆ ನಡೆದುಕೊಂಡು ಒಂದು ತರಹ ಬದುಕಿದ್ದಾರೆ. ಅವರು ಬದುಕಿದ್ದರೂ ಬದುಕಿಲ್ಲದೇ ಇರುವಂತಹ ಜನಗಳಾಗಿ ಕುಳಿತುಕೊಂಡಿದ್ದಾರೆ. ನಮ್ಮ ಜನಗಳು ಸಿಟ್ಟು ಮಾಡುವುದನ್ನು ಕಲಿಯಬೇಕು. ಸರ್ಕಾರದ ಅಂಕಿ ಅಂಶಗಳ ಸತ್ಯಾಸತ್ಯತೆಯನ್ನು ಜನ ಹೊರಗೆ ಹಾಕುತ್ತಾರೆ ಅಂಥಾ ಕಾಲ ಬರುತ್ತದೆ. ಅದು ಈಗಾಗಲೇ ಪ್ರಾರಂಭವಾಗಿದೆ ಎಂದು ನಾನು ಸರಕಾರಕ್ಕೆ ಎಚ್ಚರಿಕೆಯನ್ನು ಕೊಡುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಯಾವುದೇ ವಿಷಯದಲ್ಲಾಗಲೀ ಕೇವಲ ಸುಳ್ಳು ಹೇಳಿಕೆಯನ್ನು ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು, ಅಂಕಿ ಅಂಶಗಳನ್ನು ಕೊಟ್ಟು ಜನರಿಗೆ ವಂಚನೆ ಮಾಡತಕ್ಕ ಪರಿಪಾಠವನ್ನು ಇಮವರೆಗೂ ಸರ್ಕಾರದವರು ನಡೆಸಿಕೊಂಡು ಬಂದಿದ್ದಾರೆ ಇನ್ನು ಮುಂದೆ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಿವೇದಿಸಿಕೊಳ್ಳುತ್ತೇನೆ.

ಇನ್ನು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಒಂದು ಬೇಡಿಕೆಯನ್ನು ಮಂಡನೆ ಮಾಡಿದ್ದಾರೆ. ಇದರಲ್ಲಿ ನಾನು ಎಲ್ಲಾ ವಿಷಯಗಳನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಎಲ್ಲಾ ವಿಷಯಗಳನ್ನೂ ನನ್ನ ಸ್ನೇಹಿತರು ಹೇಳಿದ್ದಾರೆ. ಇದರಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಸ್ವಾಯುತ್ತತೆ ಎಷ್ಟು ಮುಖ್ಯವೋ ಹಾಗೆಯೇ ಇತರ ಸಾಂಸ್ಕೃತಿಕ ಸಮಿತಿಗಳನ್ನೇ ರಚನೆ ಮಾಡುತ್ತಾರೆಯೋ ಅವುಗಳ ಸ್ವಾಯತ್ತತೆಯೂ ಅಷ್ಟೇ ಮುಖ್ಯ. ನನಗೆ ನಿನ್ನೆ ದಿವಸ ಒಂದು ಪತ್ರ ಬಂದಿದೆ ಅದರ ಮುಖಾಂತರ ಮೈಸೂರು ರಾಜ್ಯದ ಸಾಹಿತ್ಯ ಅಕೆಡಮಿಯನ್ನು ರಚನೆ ಮಾಡಿದ್ದಾರೆಂದು ಗೊತ್ತಾಯಿತು. ಆ ಅಕೆಡಮಿಯಲ್ಲಿ ಒಳ್ಳೆಯ ಸದಸ್ಯರನ್ನು ಸೇರಿಸಿದ್ದಾರೆಂದು ಗೊತ್ತಾಯಿತು. ಅದರ ಬಗ್ಗೆ ಅದಕ್ಕೆ ಸಂಬಂಧಪಟ್ಟವರನ್ನು ನಾನು ಅಭಿನಂದಿಸುತ್ತೇನೆ ಹಿಂದೆ ಈ ಸಾಹಿತ್ಯ ಅಕೆಡಮಿಯಲ್ಲಿ ಯಾರೋ ಕೆಲವರನ್ನು ಸೇರಿಸುವುದು ಕೆಲವರನ್ನು ಬಿಡುವುದು ಮಾತ್ರ ಇತ್ತು. ಈಗ ಸಾಹಿತ್ಯ ಕ್ಷೇತ್ರದಲ್ಲಿರತಕ್ಕವರನ್ನು ಒಳ್ಳೆಯವರನ್ನು ಸೇರಿಸಿದ್ದಾರೆ.

ಉಪಾಧ್ಯಕ್ಷರು — ಅಕೆಡಾಮಿಯ ವಿಷಯ ಇದರಲ್ಲಿ ಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ — ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಬೇಡಿಕೆ ಇದರಲ್ಲಿ ಇರುವುದರಿಂದ ಆ ವಿಷಯವನ್ನು ನಾನು ಹೇಳುತ್ತಿದ್ದೇನೆ. ತಾವು ಅದನ್ನು ಪ್ರಸ್ತಾಪ ಮಾಡುವುದು ಬೇಡ ಎಂದರೆ ಮುಂದೆ ಯಾವಾಗಲಾದರೂ ಇನ್ನೊಂದು ಅವಕಾಶವನ್ನು ತೆಗೆದುಕೊಂಡು ಆ ಬಗ್ಗೆ ಹೇಳುತ್ತೇನೆ.

ಇನ್ನೊಂದು ವಿಷಯ ಸರ್ಕಾರದವರು ಏನೇನು ಸಮಿತಿಗಳನ್ನು ರಚನೆ ಮಾಡುತ್ತಾರೆ. ಆ ಸಮಿತಿಗಳಿಗೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ ಅಧ್ಯಕ್ಷರಾಗಿಬಿಡುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಸಾಹಿತ್ಯ ಅಕೆಡಮಿಗೆ ವಿದ್ಯಾಭ್ಯಾಸ ಇಲಾಖೆಯ ಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ. ಈಗ ಫುಡ್ ಕಾರ್ಪೊರೇಷನ್,

ಫಾರೆಸ್ಟ್ ಕಾರ್ಪೋರೇಷನ್ ಹೀಗೆ ಸರ್ಕಾರದವರು ಯಾವುದೇ ಮಂಡಲಿ ಮತ್ತು ಸಮಿತಿಗಳನ್ನು ರಚನೆ ಮಾಡಿದರೂ ಕೂಡ ಅದಕ್ಕೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ ಅಧ್ಯಕ್ಷರಾಗಿ ಕುಳಿತುಕೊಳ್ಳಬೇಕು ಎಂದರೆ ಎಲ್ಲವನ್ನೂ ತಮ್ಮ ಹತೋಟಿಯಲ್ಲೇ ಇಟ್ಟುಕೊಳ್ಳಬೇಕು ಯಾವುದಕ್ಕೂ ಸ್ವಾಯುತ್ತತೆಯನ್ನೂ ಸ್ವಾತಂತ್ರವನ್ನು ಕೊಡಬಾರದು, ಎಲ್ಲವನ್ನು ಸರ್ಕಾರದ ಕಪಿ ಮುಷ್ಠಿಯಲ್ಲೇ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಯಾವ ಸಮಿತಿಯನ್ನು ರಚನೆ ಮಾಡಿದರೂ ಈ ಒಂದು ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ.

ಈಗ ಮುಖ್ಯವಾಗಿ ಸರ್ಕಾರದವರು ರಿಲೀಫ್ ಫಂಡಿನಲ್ಲಿ ಕ್ಷಾಮ ಪರಿಹಾರ ಕ್ಕೆ ಬಹಳವನ್ನು ವೆಚ್ಚ ಮಾಡಿದ್ದೇವೆ ಕೋಟಿಗಟ್ಟಲೇ ಹಣವನ್ನು ವೆಚ್ಚ ಮಾಡಿದ್ದೇವೆ ಎಂದು ಶ್ರೀಮಾನ್ ಚನ್ನಬಸಪ್ಪನವರು ಶ್ರೀಮಾನ್ ಕೆ. ಎಚ್. ಹನುಮೇಗೌಡರು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಿ ಹೇಳಿದರು. ಈಗ ಮಾನ್ಯ ಮಂತ್ರಿಗಳು ಸ್ಪೆಸಿಫಿಕ್ ಆಗಿ ಹೇಳಬೇಕು, ಈಗ ಸರ್ಕಾರದವರು ಅಪ್ಪರ್ ಕೃಷ್ಣಾ ಯೋಜನೆಗೆ ಏನು ಹಣವನ್ನು ಖರ್ಚು ಮಾಡಿದ್ದಾರೆ ಅದರಲ್ಲಿ ೩೪ ಲಕ್ಷ ರೂಪಾಯಿಗಳು ನಷ್ಟವಾಗಿರುವುದು ಶ್ರೀಮಾನ್ ಚನ್ನಬಸಪ್ಪನವರ ಗಮನಕ್ಕೆ ಬಂದಿರಬಹುದು. ಕ್ಲಾಸಿಫಿಕೇಷನ್ ಆಫ್ ಸಾಯಿಲ್ ಈ ಒಂದು ಐಟಂನಲ್ಲಿ ೩೪ ಲಕ್ಷ ರೂಪಾಯಿಗಳ ಭ್ರಷ್ಟಾಚಾರವಾಗಿರುವುದಕ್ಕೆ ಸಾಕಷ್ಟು ರುಜುವಾತು ಇದೆ. ಇದರ ಬಗ್ಗೆ ಮಾನ್ಯಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ಏನು ಕ್ರಮ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ತನಿಖೆ ನಡೆಸುವುದಕ್ಕೆ ವಿಜಲೆನ್ಸ್ ಕಮಿಷನ್ನಿಗೆ ಏನಾದರೂ ರೆಫರ್ ಮಾಡಿದ್ದಾರೆಯೇ ಹೇಗೆ?

Sri H. M. CHANNABASAPPA (Minister for Public Works and Electricity)— Sir, this may not be a relevant question. Perhaps the hon. member is referring to a case that some time back in Upper Krishna Prjoect certain classifications have not been made properly and consequent on that there has been lot of loss to Government. The Vigilance Commission has been requested to immediately look into the matter and report from the Vigilance Commission is also over due. I think we will get the report shortly.

ಶ್ರೀ ಕೋಣಂದೂರು ಲಿಂಗಪ್ಪ.—ಪೇಜ ೧೮ರಲ್ಲಿ ಅಪ್ಪರ ಕೃಷ್ಣಾ ಚಾನಲ ವಿಷಯವನ್ನು ಹೇಳಲಾಗಿದೆ. ಇಲ್ಲಿಯ ಕೆಲಸದ ಬಗ್ಗೆ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಏನಾದರು ತನಿಖೆ ನಡೆಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಬಗ್ಗೆ ಈಗತಾನೆ ಹೇಳಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಆದರೆ ನನಗೆ ಬಂದಿರುವ

ವರ್ತಮಾನದ ಪ್ರಕಾರ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಮಾಡುವದಕ್ಕೆ ಅಭಯ ಹಸ್ತ ನೀಡುವದಕ್ಕೆ ಸರ್ಕಾರದವರು ಹೊರಟಿದ್ದಾರೆಂದು ಕೇಳಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ನನಗೆ ಅರ್ಥವಾಗುವುದಿಲ್ಲ. ತಪ್ಪು ಮಾಡಿದವರನ್ನು ಏತಕ್ಕೆ ರಕ್ಷಣೆ ಮಾಡಬೇಕು; I can assure the hon. Member that Government is not interested in shielding any corrupt official.

ಶ್ರೀ ಕಾಗೋಡು ತಿಮ್ಮಪ್ಪ —ಹಾಗಿದ್ದರೆ ಸಂಬಂಧಪಟ್ಟ ಕಂಟ್ರಾಕ್ಟರ ಅವರ ಡೆಪಾಜಿಟ ಹಣವನ್ನು ಏತಕ್ಕೆ ಫರಪೀಟ ಮಾಡಿಕೊಳ್ಳಲಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಏನಾದರು ಲೋಪ ನಡೆದಿದ್ದರೆ ನಾವು ಮತ್ತು ನೀವು ಕೂತು ಸರಿಪಡಿಸೋಣ. ಮತ್ತು ತಪ್ಪು ಮಾಡಿದವರನ್ನು ಬಲಿ ಹಾಕೋಣ.

ಶ್ರೀ ಕಾಗೋಡು ತಿಮ್ಮಪ್ಪ —ನಾನು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಕಾಗದ ಬರೆದು ೩ ತಿಂಗಳಾಯಿತು. ಆದರೆ ಇದುವರೆಗೆ ಯಾವ ಕ್ರಮವನ್ನೂ ತೆಗೆದು ಕೊಂಡಿಲ್ಲ.

ಶ್ರೀ ಎಚ್ ಎಂ. ಚೆನ್ನಬಸಪ್ಪ.—ಕಾಗದ ಬರೆದ ಕೂಡಲೆ ಕ್ರಮ ತೆಗೆದು ಕೊಳ್ಳುವುದಕ್ಕಾಗುವದಿಲ್ಲ. ಮುಖ್ಯವಾಗಿ ಇದರಲ್ಲಿ ನಮಗೆ ಯಾವ ಇಂಟರೆಸ್ಟ ಇಲ್ಲ. ಸಾರ್ವಜನಿಕರ ಹಣ ಯಾವ ರೀತಿ ಸದುಪಯೋಗವಾಗಬೇಕೆಂಬ ಬಗ್ಗೆ ನಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ. ಇದರಲ್ಲಿ ಕೊಂಚ ಡಿಲೆ ಆಗಿದೆ. ಆದರೆ, The constructive way of approach is very necessary both on this side as well as on the other side. Both of us should aim at improving the morale of the administration, efficiency of the administraction, to purify the administration and also book the corrupt contractors.

ಶ್ರೀ ಕಾಗೋಡು ತಿಮ್ಮಪ್ಪ.—'ಸಿ' ಕ್ಲಾಸ ಕಂಟ್ರಾಕ್ಟರ ಯಾರಾದರೂ ತಪ್ಪು ಮಾಡಿದರೆ ಕೂಡಲೆ ಡೆಪಾಜಿಟ ಹಣವನ್ನು ಫರಪೀಟ ಮಾಡಿಕೊಳ್ಳುತ್ತೀರಿ. ಆದರೆ ಇಲ್ಲಿ 'ಎ' ಕ್ಲಾಸ ಕಂಟ್ರಾಕ್ಟರ ತಪ್ಪು ಮಾಡಿರುವುದಕಾದರೆ, ಇದುವರೆಗೆ ಆತನ ಡೆಪಾಜಿಟ ಹಣವನ್ನು ಫರಫೀಟ ಮಾಡಿಕೊಳ್ಳುವ ಬಗ್ಗೆ ಏತಕ್ಕೆ ಕ್ರಮ ಕೈಕೊಂಡಿಲ್ಲ? ಈ ರೀತಿ ಡಿಸಕ್ರಿಮಿನೇಟ ಏತಕ್ಕೆ ಮಾಡುತ್ತೀರಿ?

ಶ್ರೀ ಕೋಣಂದೂರು ಲಿಂಗಪ್ಪ —ಇದೇ ರೀತಿ ಬಿಜಾಪೂರದಲ್ಲಿಯೂ ಸಹ ಭ್ರಷ್ಟಾಚಾರ ನಡೆದಿದೆ.

Sri H. M. CHANNABASAPPA.— That has also gone to the Vigilance Commission and Report is pending.

ಶ್ರೀ ವಾಟಾಳ ನಾಗರಾಜ.—ಹಾಸನದಲ್ಲಿಯೂ ನಡೆದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸಹ ತನಿಖೆಯಾಗುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ—ಪ್ರತಿಯೊಂದರ ಬಗ್ಗೆಯೂ ಸಹ ತನಿಖೆಯಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಆದರೆ ಎಷ್ಟು ದಿವಸಗಳಲ್ಲಿ ತನಿಖೆ ಪೂರ್ತಿಯಾಗುತ್ತದೆಂಬುದನ್ನು ಖಚಿತವಾಗಿ ಹೇಳಬೇಕು. ಕೇವಲ ಹಾರಿಕೆ ಉತ್ತರವನ್ನು ಕೊಡುವುದು ಬೇಡ. ಇಷ್ಟು ದಿವಸಗಳಲ್ಲಿ ತನಿಖೆ ಮಾಡುತ್ತೇವೆ ಎಂಬುದನ್ನು ಖಚಿತವಾಗಿ ಹೇಳಬೇಕು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇನ್ನು ಮೈಸೂರು ಫಾರೆಸ್ಟ ಕಾರ್ಪೊರೇಷನ್ನಿಗೆ ಸಂಬಂಧಪಟ್ಟಂತೆ ಇದರಲ್ಲಿ ಹೇಳಿದ್ದಾರೆ. ನೀಲಗಿರಿ ಮರಗಳನ್ನು ಬೆಳೆಸುವದಕ್ಕಾಗಿ ೧೪ ಸಾವಿರ ಎಕರೆ ಭೂಮಿಯನ್ನು ಅರಣ್ಯ ಇಲಾಖೆಯಿಂದ ಮೈಸೂರು ಫಾರೆಸ್ಟ ಕಾರ್ಪೊರೇಷನ್ ಅವರು ಪಡೆದುಕೊಳ್ಳುತ್ತಿದ್ದಾರೆ. ಮಲೆನಾಡಿನಲ್ಲಿ ಈ ನೀಲಗಿರಿ ಮರಗಳನ್ನು ಬೆಳೆಸುವದರಿಂದ ನೀರಿನ ಹಾದಿ ಹೊರಟು ಹೋಗುತ್ತದೆ; ನೀರೆಲ್ಲಾ ಒಣಗಿ ಹೋಗುತ್ತದೆ, ಮುಂದೆ ಮಲೆನಾಡಿನಲ್ಲಿಯೂ ನೀರಿಗೆ ತೊಂದರೆ ಬರುತ್ತದೆ ಎಂಬ ಮಾತನ್ನು ಆ ಭಾಗದಿಂದ ಬಂದಿರುವ ನಾವುಗಳು ಸಾರಿ ಸಾರಿ ಹೇಳುತ್ತಿದ್ದೇವೆ. ಆದರೂ ಕೂಡ ಮತ್ತೆ ಮತ್ತೆ ಈ ನೀಲಗಿರಿ ಮರಗಳನ್ನು ಬೆಳೆಸುವದಕ್ಕೆ ಹೊರಟಿದ್ದಾರೆ. ಇದರಿಂದ ಮಲೆನಾಡಿನಲ್ಲಿಯೂ ಸಹ ಬರಗಾಲದ ಪರಿಸ್ಥಿತಿ ಬರುವುದಕ್ಕೆ ಅವಕಾಶವಾಗುತ್ತದೆ. ಬೇಕಾದರೆ ಸೊಂಡೂರಿನ ಸುತ್ತಮುತ್ತ ಬೆಳೆಸಿ. ಆದರೆ ನಮ್ಮ ಭಾಗದಲ್ಲಿ ಇದನ್ನು ಏತಕ್ಕೆ ಬೆಳೆಸಬೇಕು. ಬಿಲ್ಲಾರವರ ರೆಯಾನ ಸಿಲ್ಕ ಫ್ಯಾಕ್ಟರಿಗೆ ಕೊಡುವುದಕ್ಕಾಗಿ ಈ ಗಿಡಗಳನ್ನು ಬೆಳೆಸುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದರ ಬಗ್ಗೆ ನಾನು ಒಂದು ಮಾತು ಹೇಳಬೇಕಾಗಿದೆ. ಈ ಗಿಡಗಳನ್ನು ಬೆಳೆಸಬೇಕಾದರೆ ೮–೧೦ ವರ್ಷಗಳು ಬೇಕಾಗುತ್ತದೆ. ಈ ಅವಧಿಯಲ್ಲಿ ಒಂದು ಎಕರೆಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಒಂದು ಎಕರೆಯಲ್ಲಿ ೫ ಟನ್ನಿನಷ್ಟು ಬೆಳೆಯಬಹುದು. ನಂತರ ಇದನ್ನು ಆ ಕಾರ್ಖಾನೆಯವರಿಗೆ ಟನ್ನಿಗೆ ೫೫ ರೂಪಾಯಿನಂತೆ ಮಾರಾಟ ಮಾಡುತ್ತಾರೆ ಅಂದರೆ ಎಕರೆಗೆ ನೂರರಿಂದ ನೂರಿಪ್ಪತ್ತೈದು ರೂಪಾಯಿಗಳ ವರೆಗೆ ಉತ್ಪತ್ತಿ ಬಂದಂತಾಯಿತು. ಈ ರೀತಿ ದೇಶದ ಬಡ ಜನತೆಯ ದುಡ್ಡನ್ನು ಎಕರೆಗೆ ಸಾವಿರಾರು ರೂಪಾಯಿಗಳಂತೆ ಖರ್ಚು ಮಾಡಿ, ೧೦೦–೧೫೫ ರೂಪಾಯಿಗಳಿಗೆ ಅದನ್ನು ಮಾರಾಟ ಮಾಡಿದರೆ, ಇದಕ್ಕಿಂತ ದೇಶದ್ರೋಹ ಏನಿದೆ ಎಂದು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ರೀತಿ ನೀಲಗಿರಿ ಮರಗಳನ್ನು ಬೆಳೆಸುವುದರ ಮೂಲಕ ನನ್ನ ರಾಜ್ಯದ ಮತ್ತೊಂದು ಭಾಗದಲ್ಲಿ ಕ್ಷಾಮವನ್ನು ಈ ಸರ್ಕಾರದವರು ಆಹ್ವಾನ ಮಾಡುತ್ತಿದ್ದಾರೆ. ಇದನ್ನು ಬೆಳೆಸುವುದರಿಂದ ಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ; ಇದರಿಂದ ಆ ಕಾರ್ಖಾನೆಯವರಿಗೆ ಮಾತ್ರ ಪ್ರಯೋ

ಜನವಾಗುತ್ತದೆ. ಒಟ್ಟಿನಲ್ಲಿ ಇವರು ಬಂಡವಾಳಶಾಹಿಗಳಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಬಂಡವಾಳಶಾಹಿಗಳಿಗೆ ಇವರು ಪ್ರೋತ್ಸಾಹ ಕೊಡುತ್ತಿದ್ದಾರೆಂಬುದಕ್ಕೆ ಇದೊಂದೇ ಸಾಕ್ಷಿ ಸಾಕು. ಈ ಗಿಡಗಳನ್ನು ಬೆಳೆಸುವ ಬದಲು ಗೇರು ಮರಗಳನ್ನು ಬೆಳೆಸಿ ಅಥವಾ ಅಲ್ಲಿ ಬೆಳೆಯತಕ್ಕಂಥ ಇತರೇ ಮರಗಳನ್ನು ಬೆಳೆಸಿ; ಈ ರೀತಿ ಮರ ಗಳನ್ನು ಬೆಳೆಸಿ ಕಾಡನ್ನು ಹೆಚ್ಚು ಮಾಡುವುದಾದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಕೇವಲ ನೀಲಗಿರಿ ಮರಗಳನ್ನು ಬೆಳೆಸುವದಕ್ಕೆ ಕಾರಣವೇನು? ಬಿಲ್ಡಾ ಅವರನ್ನು ಅಂದರೆ ಬಂಡವಾಳಶಾಹಿಗಳನ್ನು ರಕ್ಷಣೆ ಮಾಡುವದಕ್ಕೆ ನಿಮಗೆ ಎಷ್ಟು ಆಸಕ್ತಿ ಇದೆ ಎಂಬುದು ಇದರಿಂದಲೇ ನುವಗೆ ಗೊತ್ತಾಗುತ್ತಿದೆ.

ಇನ್ನು ನಮ್ಮ ಹಳ್ಳಿಗಳಲ್ಲಿರುವ ಜನರ ಬಗ್ಗೆ ಸರ್ಕಾರದವರಿಗೆ ಯಾವ ಕಾಳಜಿಯೂ ಇದ್ದಂತಿಲ್ಲ. ಇವರು ಆಹಾರಕ್ಕಾಗಿ ಪಡುತ್ತಿರುವ ಕಷ್ಟವನ್ನು ಹೇಳು ವಂತಿಲ್ಲ. ತಮಗೆ ಒಂದು ಆಶ್ಚರ್ಯದ ವಿಷಯವನ್ನು ಹೇಳುತ್ತೇನೆ: ಏನೆಂದರೆ ಕಣಜ ವಾದ ಶಿವಮೊಗ್ಗ, ತೀರ್ಥಹಳ್ಳಿ, ಸಾಗರ, ಹೊಸನಗರ ಪ್ರದೇಶಗಳಲ್ಲಿಯೇ ಇಂದು ಕೆ. ಜಿ. ಅಕ್ಕಿಗೆ ಎರಡು ರೂಪಾಯಿ ಅರವತ್ತು ಪೈಸೆಯಿಂದ ಎರಡು ರೂಪಾಯಿ ಎಪ್ಪತ್ತು ಪೈಸೆಯಾಗಿದೆ. ಅಂದರೆ ಹಳ್ಳಿಗಳಲ್ಲಿ ವಾಸ ಮಾಡುವ ಜನರ ಸ್ಥಿತಿ ಎಲ್ಲಿಗೆ ಹೋಗಿ ಮುಟ್ಟಿದೆ ಎಂಬುದನ್ನು ಇದರಿಂದಲೇ ಗಮನಿಸಬಹುದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನನ್ನೂ ಹೇಳಿಲ್ಲ. ಈ ಭಾಗದಿಂದ ಕೇರಳಾಕ್ಕೆ ಅಕ್ಕಿ ಹೋಗುತ್ತಿದೆ ಎಂದು ಹೇಳುತ್ತಾರೆ. ಆದರೆ ಆ ವಿಷಯ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಪರಿಸ್ಥಿತಿ ಉಲ್ಬಣಗೊಂಡಿದೆ. ಇಂದು ಸರ್ಕಾರದವರು ದೊಡ್ಡ ದೊಡ್ಡ ನಗರಗಳಲ್ಲಿ ಎಲ್ಲ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಶೇಕಡ ಎಂಭತ್ತರಷ್ಟು ಜನರಿರುವ ಹಳ್ಳಿಗಳಲ್ಲಿ ಯಾವ ಸೌಕರ್ಯಗಳನ್ನು ಕಲ್ಪಿಸಿ ಕೊಡುತ್ತಿಲ್ಲ. ಯಾವ ಭಾಗದಿಂದ ಶೇಕಡಾ ಎಂಭತ್ತರಷ್ಟು ಉತ್ಪತ್ತಿ ಸರ್ಕಾರಕ್ಕೆ ಬರುತ್ತಿದೆಯೋ ಆ ಭಾಗವನ್ನು ಕಡೆಗಣಿಸಿರುವದು ಸರಿಯಲ್ಲ. ನಾನು ಹೇಳುವುದೆಂದರೆ, ಹತ್ತು ಪರ್ಸೆಂಟಿನಷ್ಟು ಹಣವನ್ನು ಹಳ್ಳಿಗಳಿಗೆ ಖರ್ಚು ಮಾಡಿ ೯೦ ಪರ್ಸೆಂಟಿನಷ್ಟು ಹಣವನ್ನು ಪೇಟೆಗಳಿಗೆ ಖರ್ಚು ಮಾಡುವುದನ್ನು ನಿಲ್ಲಿಸ ಬೇಕು ಎಂದು. ಪೇಟೆಗಳಿಗೆ ಖರ್ಚು ಮಾಡುವುದು ಬೇಡ ಎಂದು ನಾನು ಹೇಳು ವುದಿಲ್ಲ; ಆದರೆ ಹಳ್ಳಿಗಳನ್ನು ಕಡೆಗಣಿಸದೆ, ಹಳ್ಳಿಯ ಜನರಿಗೆ ಪ್ರಯೋಜನವಾಗು ವಂತಹ ರೀತಿಯಲ್ಲಿ ಎಲ್ಲ ಸವಲತ್ತುಗಳನ್ನು ಕಲ್ಪಿಸಿ ಕೊಡಬೇಕು. ನೀರಾವರಿ ಸೌಕರ್ಯ, ಮನೆಗಳು, ಶಾಲಾ ಕಾಲೇಜುಗಳು, ಇತ್ಯಾದಿ, ಇತ್ಯಾದಿ ಪ್ರತಿಯೊಂದು ಸೌಕರ್ಯಗಳನ್ನು ಹಳ್ಳಿಯ ಜನರಿಗೆ ಒದಗಿಸಿ ಕೊಡುವುದರ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಈಗ ಹಳ್ಳಿಗಳನ್ನು ತಾವು ಸಂಪೂರ್ಣವಾಗಿ ಕಡೆಗಣಿಸಿದ್ದೀರಿ. ಈ ವಿಚಾರದಲ್ಲಿ ತಮ್ಮ ಒಂದು ದೃಷ್ಟಿಯನ್ನು ಬದಲಾವಣೆ ಮಾಡಬೇಕು. ಇವೊತ್ತಿನ ದಿವಸ ಈ ಸೌಕರ್ಯಗಳನ್ನು ಪಡೆದುಕೊಳ್ಳುವ ಬಗ್ಗೆ ಹಳ್ಳಿಯ ಜನರನ್ನು ಸಂಘಟನೆ ಮಾಡುವುದು ಸಹ ಕಷ್ಟವಿದೆ. ಪೇಟೆಯಲ್ಲಿಯಾದರೆ ಎರಡು ಮೂರು ಗಂಟೆಗಳಲ್ಲಿ

ಸಾವಿರಾರು ಜನರನ್ನು ಒಂದು ಕಡೆ ಸೇರಿಸಬಹುದು. ಆದರೆ ಹಳ್ಳಿಗಳಲ್ಲಿ ೩ ದಿನಸ ಪ್ರಯತ್ನ ಮಾಡಿದರೂ ಸಹ ನೂರು ಜನರನ್ನು ಸೇರಿಸುವುದು ಕಷ್ಟವಿದೆ.

ಏಕೆಂದರೆ ಪೇಟೆಯವರ ಹಾಗೆ ಹಳ್ಳಿಗಳಲ್ಲಿರುವ ಜನಕ್ಕೆ ಸಂಘಟನೆ ಮಾಡಲು ಅವರಿಗೆ ಶಕ್ತಿ ಇಲ್ಲ. ಪೇಟೆ ಜನಗಳಂತೆ ಹಳ್ಳಿಗಳಲ್ಲಿರುವ ಜನರಿಗೆ ಶಕ್ತಿ ಇಲ್ಲ. ಇನ್ನು ಹಳ್ಳಿಗಾಡಿನ ಜನಕ್ಕೆ ಮುಖ್ಯವಾಗಿ ಬೇಕಾಗಿರುವ ಪ್ರೈಮರಿ ಶಾಲೆಗಳೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಸುಮಾರು ಆರು ಕಡೆಗಳಲ್ಲಿ ಏಕೋಪಾಧ್ಯಾಯರ ಶಾಲೆಗಳೇ ಇಲ್ಲ. ಕಾರಣ ಇಲ್ಲಿಗೆ ಉಪಾಧ್ಯಾಯರುಗಳನ್ನು ನೇಮಿಸಲಾಗಲಿಲ್ಲ ಇದರ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆದಾಗ ಶಾಲೆಗಳನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಭಾಗದಲ್ಲಿ ಸುಮಾರು ೬೬ ಜನರು ಉಪಾಧ್ಯಾಯರುಗಳು ಬೇಕಾಗಿದ್ದಾರೆ. ಇದರ ಬಗ್ಗೆ ಕೇಳಿದರೆ ಡಿ. ಪಿ. ಐ ಆಫೀಸಿಗೆ ಕೈ ತೋರಿಸುತ್ತಾರೆ. ಡಿ.ಪಿ.ಐ. ರವರು ಡಿ.ಡಿ.ಪಿ.ಐ. ರವರಿಗೆ ಕೈ ತೋರಿಸುತ್ತಾರೆ. ಆನಂತರ ಎಜುಕೇಷನ್ ಸೆಕ್ರೆಟರಿಯರ ಕಡೆಗೆ ಕೈ ತೋರಿಸುತ್ತಾರೆ. ಹೀಗೆ ಪ್ರತಿಯೊಂದರಲ್ಲೂ ಕ್ವೈರಿ ಎಂದು ಕ್ವೈರಿ ಹಾಕುವುದರಲ್ಲೇ ಇದ್ದಾರೆ. ಹೀಗಾದರೆ ಹಳ್ಳಿಗಾಡಿನ ಜನಕ್ಕೆ ಪ್ರೈಮರಿ ವಿದ್ಯಾಭ್ಯಾಸ ಒದಗಿಸಿದಂತಾಯಿತೇ? ಪ್ರತಿಯೊಂದಕ್ಕೂ ಇಲಾಖೆಯಲ್ಲಿ ಕೊಕ್ಕೆ ಹಾಕುವುದರಲ್ಲೇ ಇದೆ, ಹೀಗಾಗಿ ಇಂದು ಹಳ್ಳಿಗಾಡಿನಲ್ಲಿ ಅನೇಕ ಕಡೆಗಳಲ್ಲಿ ಪ್ರೈಮರಿ ಶಾಲೆಗಳೇ ಆಗಲಿಲ್ಲ ಅದಕ್ಕೆ ತಕ್ಕ ಉಪಾಧ್ಯಾಯರುಗಳನ್ನೂ ನೇಮಕ ಮಾಡಲಾಗಲಿಲ್ಲ, ಇದಕ್ಕಾಗಿ ನಾನು ಸರಕಾರದಲ್ಲಿ ಹೇಳುವುದು ಹಳ್ಳಿಗಾಡಿನ ಜನಕ್ಕೆ ಮುಖ್ಯವಾಗಿ ಬೇಕಾಗಿರುವ ಪ್ರೈಮರಿ ಶಾಲೆಗಳು, ಸಣ್ಣ ಸಣ್ಣ ಕೆರೆಗಳು, ಸಣ್ಣ ಸಣ್ಣ ರಸ್ತೆಗಳು ಇವುಗಳನ್ನು ಬೇಗ ಮಾಡಿಸಿ ಕೊಡಬೇಕು ಎಂದು ಕೇಳುತ್ತಲೇ ಇದ್ದೇವೆ ನಮ್ಮ ಮಾನ್ಯ ಶ್ರೀ ಚನ್ನಬಸಪ್ಪನವರಲ್ಲಿ ನಾವು ಇದರ ಬಗ್ಗೆ ತಿಳಿಸಿದರೆ ಅವರು ನನ್ನಲ್ಲಿ ಎಲ್ಲದಕ್ಕೂ ಮಾಸ್ಟರ ಪ್ಲಾನು ಇದೆ, ಎಲ್ಲ ಕಡೆಗಳಲ್ಲೂ ರಸ್ತೆಗಳನ್ನು ಮಾಡಿಸಿಯೇ ಕೊಡುತ್ತೇನೆ. ಇದಕ್ಕೆ ಪ್ಲಾನುಗಳು ತಯಾರಾಗಿವೆ ಎಂದು ನಾವು ಹೋದಾಗ ಅವರ ಪೆಟ್ಟಿಗೆಯಿಂದ ಎಲ್ಲ ಏನರಗಳನ್ನೂ ನಮ್ಮ ಮುಂದೆ ಇಡುತ್ತಾರೆ. ಪ್ಲಾನುಗಳೇನೋ ಇವೆ ಇದನ್ನೆಲ್ಲ ಯಾವಾಗ ಮಾಡುವುದು? ಅವರೇ ಒಂದು ಸಾರಿ ಹೇಳಿದಂತೆ ಇನ್ನು ಮೂರು ವರ್ಷಗಳಲ್ಲಿ ಎಲ್ಲ ಹಳ್ಳಿಗಳಿಗೂ ರಸ್ತೆಗಳನ್ನು ಮಾಡಿಕೊಡುತ್ತೇನೆ, ಎಲ್ಲ ಕಡೆ ಸೇತುವೆಗಳನ್ನು ಮಾಡುತ್ತೇನೆಂದು ಹೇಳಿದರು. ಆದರೆ ಇವೊತ್ತಿನವರೆಗೂ ಏನೂ ಆಗಲಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ್ಗೆ ಎರಡು ಮೂರು ತಿಂಗಳಿಂದೀಚೆಗೆ ಅಭಾವದ ಪರಿಸ್ಥಿತಿಯಿಂದಾಗಿ ಕೆಲಸಗಳು ಕೆಲವು ಕಡೆ ಸಾಸ್ತವಾಗಿ ಏನು ಆಗ ಬೇಕೋ ಅದನ್ನು ಮಾಡಲಾಗಲಿಲ್ಲ, ಸಾಕಾದಷ್ಟು ಕೆಲಸಗಳು ಈಗಾಗಲೇ ಆಗಿವೆ. ಇನ್ನೂ ಹೆಚ್ಚಿಗೆ ಮಾಡಬೇಕು ಎಂದು ತಾವು ಕೇಳಿದರೆ ಅದನ್ನು ಮಾಡಲು ಅಡ್ಡಿ ಇಲ್ಲ. ಆದರೆ ಮೂರು ತಿಂಗಳಿಗೆ ಮುಂಚೆ ಏನೂ ಕೆಲಸಗಳೇ ನಡೆದಿಲ್ಲವೇ? ಅದನ್ನು

ಧೈರ್ಯವಾಗಿ ಇಲ್ಲಿ ಹೇಳಿ, ಹೀಗೆ ಕೆಲಸಗಳನ್ನು ಮಾಡಿದ್ದರೂ ಮಾಡಿಲ್ಲ ಎಂದು ಹೇಳಿದರೆ ಅದು ಅಪರಾಧವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ —ಹಾಗೆ ಕೆಲಸಗಳಾಗಿದೆ ಎಂದು ತಾವು ಹೇಳಿದರೆ ನಾನು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ತಾವು ಇಲ್ಲಿ ಏನು ಭರವಸೆ ಕೊಟ್ಟಿದ್ದೀರಿ ಯಾವ ತರಹದ ಆಶ್ವಾಸನೆ ಕೊಟ್ಟಿದ್ದೀರಿ ಅದರ ಬಗ್ಗೆ ನಾವು ಅಭಿನಂದಿಸುತ್ತೇವೆ, ಆದರೆ ಅದರಂತೆ ಕೆಲಸಗಳು ಇನ್ನೂ ಪೂರ್ತಿಯಾಗಲಿಲ್ಲ, ಇದೇ ರೀತಿ ಸಣ್ಣ ರಸ್ತೆಗಳು ಹಾಗೂ ಸಣ್ಣ ಕೆರೆಗಳ ಕೆಲಸಗಳೂ ಆಗಿಲ್ಲ. ರಸ್ತೆ ಕೆಲಸಗಳು ನಮ್ಮ ಮಲೆನಾಡಿನಲ್ಲಿ ಹೇಗಾಗಿವೆ ಎಂದರೆ ಮಳೆಗಾಲದಲ್ಲಿ ರಸ್ತೆಗಳಿಗೆ ಹಾಕಿರುವ ಮಣ್ಣುಗಳೆಲ್ಲ ಪೂರ್ತಿಯಾಗಿ ನೀರಿನಿಂದ ಕೊಚ್ಚಿ ಹೋಗಿರುತ್ತವೆ. ಮತ್ತೆ ದುರಸ್ತಿ ಮಾಡುವಾಗ ಪುನಃ ಮಣ್ಣು ಜಲ್ಲಿ ಹಾಕಿದರೆ ಅದು ಕೂಡ ಮಳೆಯ ನೀರಿನಿಂದ ಹಾಳಾಗಿ ಹೋಗುತ್ತದೆ ಇದನ್ನು ನಾವು ದಿನನಿತ್ಯ ಅಲ್ಲಿ ನಾವು ನೋಡುತ್ತಿದ್ದೇವೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ —ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಕೆಲಸಗಳನ್ನು ಮಾಡುವಾಗ ಮೊದಲು ಡ್ರೈನ್ಸ್ ತೆಗೆದು ಮಣ್ಣು ಹಾಕಬೇಕು. ಅದು ಕನ್‌ಸಾಲಿಡೇಟ್ ಆದಮೇಲೆ ಜಲ್ಲಿ ಹಾಕಬೇಕು ಮಳೆಯ ಕಾರಣದಿಂದ ಅದು ಕೊಚ್ಚಿ ಹೋಗಿ ಜಲ್ಲಿಗಳು ಕಾಣುತ್ತವೆ. ಜಲ್ಲಿ ಹಾಕಿ ಅದಕ್ಕೆ ತಕ್ಕಷ್ಟು ಕಾಲಾವಕಾಶ ಕೊಟ್ಟು ಕನ್‌ಸಾಲಿಡೇಟ್ ಆದಮೇಲೆ ಅದರ ಮೇಲೆ ಮಣ್ಣು ಹಾಕಬೇಕು.

ಶ್ರೀ ಕೋಣಂದೂರುಲಿಂಗಪ್ಪ —ಒಟ್ಟಿನಲ್ಲಿ ನಮ್ಮ ಹಳ್ಳಿಗಾಡಿನ ರಸ್ತೆಗಳಾಗಬೇಕು ಮತ್ತು ಸಣ್ಣ ಸಣ್ಣ ಕೆರೆಗಳ ಕೆಲಸಗಳು ಬೇಗನೆ ಆಗಬೇಕು, ಹಳ್ಳಿಯ ಜನರು ಉದ್ದಾರವಾಗಬೇಕಾದರೆ ಇಂದು ಹಳ್ಳಿಗಾಡಿನ ಜನರಿಂದ ಒರುವ ಉತ್ಪತ್ತಿಯಲ್ಲಿ ಶೇಕಡಾ ಎಂಬತ್ತರಷ್ಟು ಭಾಗವನ್ನು ಹಳ್ಳಿಗಾಡಿಗಾಗಿ ಮೀಸಲಿಟ್ಟು ಸಹಾಯ ಮಾಡಬೇಕು. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಂ. ವೈ. ಘೋರ್ಪಡೆ (ಹಣಕಾಸು ಇಲಾಖಾ ಮಂತ್ರಿಗಳವರು).— ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಡಿಮ್ಯಾಂಡುಗಳ ಮೇಲೆ ಚರ್ಚೆ ಮಾಡುವಾಗ ಇಷ್ಟೊಂದು ವಿಷಯಗಳನ್ನು ತಂದು ಇವೊತ್ತು ಈ ರೀತಿಯಾಗಿ ಚರ್ಚೆಯಾಗುತ್ತದೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಆದರೂ ಕೂಡ ಈ ಸಭೆಯ ಸದಸ್ಯರು ಬಹಳ ಹೆಚ್ಚಿನ ಆಸಕ್ತಿ ವಹಿಸಿ ಮನಸ್ಸು ಕೊಟ್ಟು ಈ ಚರ್ಚೆಯಲ್ಲಿ ಭಾಗವಹಿರುವುದಕ್ಕಾಗಿ ನಾನು ಅವರಿಗೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರು ಹೇಳಿರತಕ್ಕ ವಿಷಯಗಳ ಬಗ್ಗೆ ಆದಷ್ಟು ಮಟ್ಟಿಗೆ ನಾನು ಇಲ್ಲಿ ಉತ್ತರ ಹೇಳಲು ಪ್ರಯತ್ನ ಮಾಡುತ್ತೇನೆ. ಅದಕ್ಕೆ ಮುಂಚೆ ಒಂದು ಮಾತು. ಸ್ಪಷ್ಟವಾಗಿ ಹೇಳಬೇಕಾಗಿದೆ ನಮ್ಮ ಹಣಕಾಸಿನ ಪರಿಸ್ಥಿತಿ ಬಗ್ಗೆ ಯಾವ ಒಂದು ಧಾಟಿಯಲ್ಲಿ ನಮ್ಮ ರಾಜ್ಯದಲ್ಲಿ ಪ್ರಚಾರ ನಡೆದಿದೆ ಅದಕ್ಕೆ ಹಲವಾರು ಕಾರಣಗಳಿವೆ. ವಿಶೇಷವಾಗಿ ಇದರಲ್ಲಿ ರಾಜಕೀಯವಾದ ಕಾರಣಗಳಿವೆ. ಇದು ನಮ್ಮ ರಾಜ್ಯದ ದೃಷ್ಟಿ

ಯಿಂದ ಹಿತಕರವಾದುದಲ್ಲ, ಇಂದು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟು ಹೋಗಿದೆ, ನೌಕರರುಗಳಿಗೆ ಸಂಬಳ ಕೊಡುವ ಶಕ್ತಿ ಅಥವಾ ತ್ರಾಣ ಈ ಸರಕಾರ ಕ್ಕಿಲ್ಲ, ಕೆಲಸಗಳನ್ನು ಸರಿಯಾಗಿ ನಡೆಸಲು ಆಗುತ್ತಿಲ್ಲ, ಹಳೆಯ ಮೈಸೂರಿಗೆ ಅನ್ಯಾಯವಾಗಿ ಎಂದು ಈ ರೀತಿಯಾದ ಒಂದು ರಾಜಕೀಯ ಪ್ರಚಾರ ಬಹಳವಾಗಿ ನಡೆದಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ರಾಜಕೀಯ ಕಾರಣ ಎಂದು ಮಾನ್ಯ ಅರ್ಥ ಸಚಿವರು ಇಲ್ಲಿ ಹೇಳಿದರು. ರಾಜಕೀಯ ಕಾರಣಗಳಿಗೋಸ್ಕರ ಪ್ರಚಾರ ನಡೆದಿದೆ ಎಂದು ಹೇಳುವುದಕ್ಕಿಂತ ತಾವು ಇಲ್ಲಿ ಸತ್ಯಾಂಶವನ್ನು ನಮಗೆ ಹೇಳಿದರೆ ಸಾಕು. ಅನೇಕ ಕಡೆ ಲೋಕೋಪಯೋಗಿ ಕೆಲಸ ಕಾರ್ಯಗಳಿಗಾಗಿ ಅವಕಾಶ ಇದ್ದರೂ ಹಣದ ಅಭಾವದಿಂದ ಕೆಲಸಗಳು ನಿಂತಿರುವುದು ತಮಗೆ ಗೊತ್ತಿಲ್ಲವೇ? ತಾವು ಕಳುಹಿ ಸಿರುವ ಆದೇಶಗಳು ಯಾವ ರೀತಿ ಇವೆ ಎನ್ನುವುದನ್ನು ಬೇಕಾದರೆ ನಮ್ಮ ಜೊತೆಗೆ ಬನ್ನಿ. ನಿಮ್ಮ ಮುಖದ ಮುಂದೆಯೇ ಅವನ್ನು ತೋರಿಸುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಹಳೆಯ ಮೈಸೂರಿನಲ್ಲಿ ಯಾವ ರೀತಿಯ ರಾಜಕೀಯವೂ ಇಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇಲ್ಲಿ ಕೆಲವರು ಹೇಳುವಾಗ ನಾವು ಇಲ್ಲಿ ಗುಂಡು ಕಲ್ಲಿನಂತೆ ಗಟ್ಟಿಯಾಗಿ ಕುಳಿತಿದ್ದೇವೆಂದು ಹೇಳಿದರು, ಹಣಕಾಸಿನ ವಿಚಾರ ವಾಗಿ ಸರಕಾರದ ವತಿಯಿಂದ ಜವಾಬುದಾರಿಯಿಂದ ಉತ್ತರ ಕೊಡುವಾಗ ಪರಿಸ್ಥಿತಿಯ ಅರಿವು ಇಟ್ಟುಕೊಂಡು ಸರಿಯಾಗಿ ಹೇಳಬೇಕಾಗುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಪರಿಸ್ಥಿತಿಯ ಅರಿವು ತಮಗೆ ಚೆನ್ನಾಗಿ ಗೊತ್ತಿರು ವುದರಿಂದ ನಾವು ಇಲ್ಲಿ ಬೇಳುವುದನ್ನು ತಾವು ನೇರವಾಗಿ ಒಪ್ಪಿಕೊಂಡು ಇದರಲ್ಲಿ ಹೇಳಿರುವುದು ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದರೆ ಖಂಡಿತವಾಗಿಯೂ ನಾವು ಬಹಳ ಸಂತೋಷ ಪಡುತ್ತಿದ್ದೆವು.

ಶ್ರೀ ಎಂ. ವೈ. ಘೋರ್ಪಡೆ.—ತಾವು ನಾನು ಹೇಳುವುದನ್ನು ಸ್ವಲ್ಪ ಪಾವಕಾಶ ವಾಗಿ ಕೇಳಿ, ನಾನು ಹೇಳುವಾಗ ಎಲ್ಲವನ್ನೂ ಸರಿಯಾಗಿ ಹೇಳುತ್ತೇನೆ ಮತ್ತು ಅಂಕೆ ಸಂಖ್ಯೆಗಳನ್ನೂ ಸಹ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ವೇಸ ಅಂಡ ಮೀನ್ಸ್ ಎಂದು ಏನು ಹೇಳುತ್ತೇವೆ, ಅದರಲ್ಲಿ ಯಾವುದೂ ಡಿಫಸಿಟ್ ಆಗಿಲ್ಲ ಎಂದು ಹೇಳುವು ದಿಲ್ಲ. ಇವೊತ್ತು ನಮ್ಮ ರಾಜ್ಯ ಒಂದರಲ್ಲೇ ಇಲ್ಲ ಇಡೀ ದೇಶಕ್ಕೆ ಇದು ಅನ್ವಯಿಸ ತಕ್ಕಂತಹ ಪರಿಸ್ಥಿತಿ ಇಂದು ಎಲ್ಲ ದೇಶಗಳಲ್ಲೂ ಇದೆ ಈ ಪರಿಸ್ಥಿತಿಯಲ್ಲಿ ಅಧಿಕಾರ ವನ್ನು ಇಟ್ಟುಕೊಂಡು ಖರ್ಚು ಮಾಡುವಾಗ ಸ್ವಲ್ಪ ಹತೋಟಿ ಇಟ್ಟುಕೊಳ್ಳಬೇಕಾಗು ತ್ತದೆ, ಕೆಲವು ಸಲ ಖರ್ಚು ಮಾಡುವುದಕ್ಕೂ ಮುಂದೆ ಹೋಗಬೇಕಾಗುತ್ತದೆ. ಇದನ್ನು ಒಪ್ಪುತ್ತೇನೆ. ಹಾಗೆಂದರೆ ತಕ್ಷಣ ಇಂದು ನಮ್ಮ ರಾಜ್ಯಸರಕಾರಕ್ಕೆ ಅವರ

ನೌಕರರುಗಳಿಗೆ ಸಂಬಳ ಸಾರಿಗೆ ಕೊಡುವುದಕ್ಕೆ ಹಣವಿಲ್ಲ ಎನ್ನುವಂತೆ ಒಂದು ರೀತಿಯಾಪ ಭಯ ಉಂಟುಮಾಡುವ ವಾತಾವರಣವನ್ನು ವಾತಾವರಣವನ್ನು ಮಾಡುವುದು ಸರಿಯಲ್ಲ. ಇಂತಹ ಒಂದು ಭಯದ ವಾತಾವರಣವನ್ನು ನಮ್ಮ ರಾಜ್ಯ ಆಡಳಿತದ ಹಿತದೃಷ್ಟಿಯಿಂದ ಹೇಳುವುದು ಸರಿಯಲ್ಲ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಹಳೇ ಕಾಲಕ್ಕೆ ಬೇರೆ ರಾಜ್ಯ ಸರ್ಕಾರವಿದ್ದಾಗ ಇಂಥ ಪರಿಸ್ಥಿತಿ ಬಂದಿರಲಿಲ್ಲ ವೆಂದು ಹೇಳಿದರು. ಅದಕ್ಕೆ ಒಂದು ಕಾರಣವಿದೆ, ಮೊದಲು ಓವರ್‌ಡ್ರಾಫ್ಟ್ ಮೇಲೆ ಯಾವ ತರಹ ಮಿತಿಯೂ ಇರಲಿಲ್ಲ. ಹಣ ಬೇಕಾದಾಗಲೆಲ್ಲ ಓವರ್ ಡ್ರಾಫ್ಟ್ ಮೂಲಕ ಸ್ವೇಚ್ಛೆಯಿಂದ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳುವುದಕ್ಕೆ ಮೈಸೂರು ರಾಜ್ಯಕ್ಕೆ ಮಾತ್ರವಲ್ಲ ನಮ್ಮ ದೇಶದ ಬೇರೆ ಬೇರೆ ರಾಜ್ಯಗಳಲ್ಲಿಯೂ ಅವ ಕಾಶವಿತ್ತು. ಅದರಿಂದ ಫೈನಾನ್ಷಿಯಲ್ ಇನ್‌ಡಿಸಿಪ್ಲಿನ ದೇಶದಲ್ಲಿ ನಡೆದು ಅದರಿಂದ ದೇಶಕ್ಕೆ ಅಪಾಯ ಆಗಲಿಕ್ಕೆ ಸಾಧ್ಯವುಂಟು. ಈ ಹೊಸ ಸರ್ಕಾರ ಅಧಿ ಕಾರವನ್ನು ವಹಿಸಿಕೊಂಡ ಕಾಲಕ್ಕೆ ನಮ್ಮಲ್ಲಿ ೭೨ ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಇತ್ತು ಎನ್ನುವುದು ತಮಗೆಲ್ಲ ಗೊತ್ತಿದೆ ಹಿಂದೆ ಮನಸ್ಸಿಗೆ ಬಂದ ಹಾಗೆ ಓವರ್‌ಡ್ರಾಫ್ಟ್ ಮಾಡಿದ್ದರು. ಕೋಟಿಗಟ್ಟಲೆ ಎಷ್ಟು ಬೇಕೋ ಅಷ್ಟು ಓವರ್ ಡ್ರಾಫ್ಟ್ ಮಾಡುವುದಕ್ಕೆ ಅವಕಾಶವಿದ್ದಾಗ ಸ್ವಾಭಾವಿಕವಾಗಿ ವೇಸ್ ಅಂಡ್ ಮೀನ್ಸ್ ತೊಂದರೆ ಬರುವುದಿಲ್ಲ, ಫೈನಾನ್ಷಿಯಲ್ ಮ್ಯಾನೇಜಮೆಂಟ್ ಮಾಡಬೇಕಾಗಿದ್ದಿಲ್ಲ. ಕೇಂದ್ರ ಸರಕಾರದವರು ಈಗ ಆ ಓವರ್‌ಡ್ರಾಫ್ಟ್ ಪದ್ಧತಿಯನ್ನು ತೆಗೆದು ಹಾಕಿದ್ದ ರಿಂದ ಹಿಂದೆ ಇದ್ದ ಓವರ್‌ಡ್ರಾಫ್ಟ್‌ಗಾಗಿ ೭೨ ಕೋಟಿ ರೂಪಾಯಿ ಸಾಲವಾಗಿ ಕೊಟ್ಟು ಇನ್ನು ಮುಂದೆ ಮೈಸೂರಿನಲ್ಲಿ ಅಷ್ಟೇ ಅಲ್ಲ, ಯಾವುದೇ ರಾಜ್ಯದಲ್ಲಿ ಸಿಗದಿ ಮಾಡಿದ್ದಕ್ಕಿಂತ ಹೆಚ್ಚು ಓವರ್‌ಡ್ರಾಫ್ಟ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವು ದಿಲ್ಲವೆಂದು ಹೇಳಿದರು. ಅದರ ಪ್ರಕಾರವಾಗಿ ನಡೆದುಕೊಳ್ಳುತ್ತಿದ್ದೇವೆ. ಹಣಕಾಸಿನ ಶಿಸ್ತು ನಮ್ಮ ದೇಶದಲ್ಲಿ ಎಲ್ಲ ರಾಜ್ಯಗಳಲ್ಲಿಯೂ ಜಾರಿಗೆ ಬಂದುದರಿಂದ ನಾವು ಕೂಡ ಮನಸ್ಸು ಕೊಟ್ಟು ಪ್ರಾಮಾಣಿಕತೆಯಿಂದ ಸಹಕಾರ ಮಾಡಬೇಕಾಗುತ್ತದೆ. ಬರೀ ಬಾಯಿ ಮಾತಿನಿಂದ ಮಾತ್ರವಲ್ಲ, ಕಾರ್ಯತಃ ಕೂಡ ಮಾಡುತ್ತಿದ್ದೇವೆ. ಮೈಸೂರು ರಾಜ್ಯಕ್ಕೆ ೭೫ ಲಕ್ಷ ರೂಪಾಯಿ ಮಾತ್ರ ಓವರ್‌ಡ್ರಾಫ್ಟ್ ಮಾಡುವುದಕ್ಕೆ ಸಾಧ್ಯ. ಆದಕ್ಕೆ ಸ್ವಲ್ಪ ಜಾಸ್ತಿ ಯಾವರೂ ಕೂಡ ರಿಸರ್ವ ಬ್ಯಾಂಕಿನವರು ಕೇಂದ್ರ ಸರ ಕಾರಕ್ಕೆ ತಿಳಿಸಿ ಅವರು ನಮಗೆ ಎಚ್ಚರಿಕೆಯನ್ನು ಕೊಟ್ಟು ಓವರ್‌ಡ್ರಾಫ್ಟ್‌ನ್ನು ಕಡಿಮೆ ಮಾಡಬೇಕೆಂದು ಹೇಳುತ್ತಾರೆ. ಈ ಒಂದು ಪರಿಸ್ಥಿತಿ ಇರುವುದರಿಂದ ವೇಸ್ ಆಂಡ್ ಮೀನ್ಸ್ ವಿಚಾರದಲ್ಲಿ ಸ್ವಲ್ಪ ಕ್ರಿಟಿಕಲ್ ಆಗಿ ಬಹಳ ದಕ್ಷತೆಯಿಂದ ಮ್ಯಾನೇಜ್ ಮಾಡಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ಟೆಂಪೊರರಿಯಾಗಿ ತೊಂದರೆಯುಂಟಾಗುತ್ತದೆ. ಇಷ್ಟೊಂದು ಭಯಪಟ್ಟು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ, ಸಂಬಳ ಕೊಡುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಏನು

ಹೇಳಿದರು ಅದು ಅತಿಶಯೋಕ್ತಿಯಾಗಿದೆ. ಅಂಥ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬಂದಿಲ್ಲ, ಮುಂದೆಯೂ ಕೂಡ ಬರುವದಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಸಪ್ಲಿಮೆಂಟರಿ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ ನಾವು ಸಪ್ಲಿಮೆಂಟರಿ ಬೇಡಿಕೆಗಳನ್ನು ಚರ್ಚೆ ಮಾಡುತ್ತಿದ್ದೇವೆ. ಈ ಬೇಡಿಕೆಗಳನ್ನು ಬಹಳ ಸಂತೋಷದಿಂದ ಮಾನ್ಯ ಸದಸ್ಯರೆಲ್ಲರೂ ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಸಪ್ಲಮೆಂಟರಿ ಬೇಡಿಕೆಯಲ್ಲಿ ೧೧ ಕೋಟಿ ರೂಪಾಯಿ ವೆಚ್ಚ ಮಾಡುವ ಕಾರ್ಯಕ್ರಮ ಇದ್ದರೂ ಅದರಲ್ಲಿ ೯ ಕೋಟಿ ರೂಪಾಯಿಗಿಂತ ಹೆಚ್ಚು ಕೇಂದ್ರ ಸರಕಾರದಿಂದ ಒದು ತ್ತದೆ. ಆದಕಾರಣ ನಾವು ನಮ್ಮ ಅದಾಯದಿಂದ ಹೊಸದಾಗಿ ವೆಚ್ಚ ಮಾಡಬೇಕಾದ್ದು ೧೧೭ ಲಕ್ಷ ರೂಪಾಯಿ ಮಾತ್ರ. ಇದನ್ನು ಕೂಡ ನಾವು ಸುಲಭವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಉಳಿತಾಯ ಮಾಡಿ ಅದನ್ನು ಸರಿಯಾಗಿಸಲಿಕ್ಕೆ ಸಾಧ್ಯವಿದೆ. ಆದ ಕಾರಣ ೧೧ ಕೋಟಿ ರೂಪಾಯಿ ಬೇಡಿಕೆಯನ್ನು ಇಟ್ಟಿದ್ದರೂ ಒಂದೊಂದು ಬೇಡಿಕೆಗೂ ಸಾಂಕೇತಿಕವಾಗಿ ೧೦೦ ರೂಪಾಯಿ ಮಾತ್ರ ಕೇಳಿದ್ದೇವೆ. ಹೊಸದಾಗಿ ಹಣ ನಮಗೆ ಬೇಕಾಗಿಲ್ಲ ಆದರೂ ಕೂಡ ಹೊಸ ಕಾರ್ಯಕ್ರಮ ಅಥವಾ ಹೊಸ ಅಂಶಗಳ ಖರ್ಚು ಸೇರಿರುವುದರಿಂದ ಕಾನೂನು ಪ್ರಕಾರ ಸಪ್ಲಿಮೆಂಟರಿ ಬೇಡಿಕೆಗಳನ್ನು ನಾವು ತರ ಬೇಕು. ತಮಗೆಲ್ಲ ಗೊತ್ತಿರುವಂತೆ ಯಾವ ಖರ್ಚು ಅಥವಾ ಬಾಬು ಬಜೆಟಿನಲ್ಲಿ ನಾವು ತೋರಿಸುವುದಿಲ್ಲ, ಅಂಥದ್ದರ ಮೇಲೆ ಖರ್ಚು ಮಾಡುವ ಪ್ರಸಂಗ ಬಂದಾಗ, ನಮ್ಮ ಕಡೆ ಹಣವಿದ್ದರೂ ಕೂಡ ನಾವು ಸಪ್ಲಿಮೆಂಟರಿ ಡಿಮಾಂಡ್ಸ ಮೂಲಕ ಸಭೆಯ ಮುಂದೆ ಬರಬೇಕು. ಆದಕಾರಣ ಸಪ್ಲಿಮೆಂಟರಿ ಡಿಮಾಂಡನ್ನು ಈ ಉದ್ದೇಶದಿಂದ ಸಭೆಯ ಮುಂದೆ ಇಟ್ಟಿದ್ದೇವೆ.

ಬಜೆಟ್ ಮಾಡುವ ಕಾಲಕ್ಕೆ ಈ ಖರ್ಚಿನ ಬಾಬುಗಳೆಲ್ಲ ಸರ್ಕಾರಕ್ಕೆ ಗೊತ್ತಿ ರಲಿಲ್ಲವೇ ಎನ್ನುವ ಪ್ರಶ್ನೆ ಬರುತ್ತದೆ. ಅದು ಬಹಳ ಮುಖ್ಯವಾದ ಪ್ರಶ್ನೆ. ಸಪ್ಲಿ ಮೆಂಟರಿ ಡಿಮಾಂಡ್ ಮೇಲೆ ಚರ್ಚೆ ಮಾಡುವಾಗ ಅಂಥ ಪ್ರಶ್ನೆಯನ್ನು ಪ್ರತಿ ಯೊಬ್ಬರೂ ಕೇಳುತ್ತಾರೆ. ಅದಕ್ಕೆ ಸರ್ಕಾರದ ವತಿಯಿಂದ ಉತ್ತರ ಕೊಡಲೇಬೇಕು. ಈ ಜೊತ್ತು ನಮ್ಮ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯದಲ್ಲಿ ಅಥವಾ ಕೇಂದ್ರದಲ್ಲಿ ಸಹ ಪ್ರತಿಯೊಂದು ಖರ್ಚನ್ನೂ ಬಜೆಟ್ ಮಾಡುವ ಕಾಲಕ್ಕೆ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಎಷ್ಟೋ ಬಾಬುಗಳು ಬಜೆಟ್ ಆದ ನಂತರ ಬರುತ್ತದೆ. ಉದಾಹರಣೆಗೆ ಡ್ರಾಟ್ ಬರುತ್ತದೆ. ಅದಕ್ಕೆ ಯಾವ ಯಾವ ರೀತಿ ಖರ್ಚು ಮಾಡ ಬೇಕಾಗುತ್ತದೆ ಎನ್ನುವ ಬಗ್ಗೆ ಬಜೆಟ್ ಮಾಡುವ ಕಾಲಕ್ಕೆ ಎಲ್ಲ ಸ್ಪಷ್ಟವಾಗಿ ಲೆಕ್ಕ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಸಭೆಯ ಅವಗಾಹನೆಗೆ ಒಂದೆರಡು ಉದಾಹರಣೆಗಳನ್ನು ತರುತ್ತೇನೆ.

ಈ ಹೊತ್ತು ಬರಗಾಲ ಸಂಬಂಧದಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಅಥವಾ ಬೇರೆ ಬರಗಾಲ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ.

ಈ ಭಾಗದಲ್ಲಿರುವ ನೇಕಾರರು ಪರಿಹಾರ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಸಹಾಯ ಮಾಡಲು ನೂಲಿನ ಕೇಂದ್ರಗಳನ್ನು ಮತ್ತು ಕೈಮಗ್ಗದ ಕೇಂದ್ರಗಳನ್ನು ತೆರೆಯಬೇಕಾಗುತ್ತದೆ. ಮೊದಲೇ ಏಕೆ ಇದರ ಬಗ್ಗೆ ಯೋಚನೆ ಮಾಡಿಲ್ಲ ಎನ್ನುವುದು ಅಷ್ಟೊಂದು ಸಮಂಜಸವಾದುದಲ್ಲ. ಇಂಥ ಪರಿಸ್ಥಿತಿ ಬಂದಾಗ ನಾವು ಅದಕ್ಕೆ ಬೇಕಾದ ಕೆಲಸಗಳನ್ನು ಮಾಡಲೇಬೇಕಾಗುತ್ತದೆ. ನಾವು ೧೭ ನೂಲಿನ ಕೇಂದ್ರಗಳನ್ನು ತೆರೆದಿದ್ದೀವೆ ಇನ್ನೂ ೭ ಕೇಂದ್ರಗಳನ್ನು ತೆಗೆಯಬೇಕಾಗಿದೆ. ಇವಕ್ಕೆ ಖರ್ಚಾಗುವ ಹಣವನ್ನು ಸಪ್ಲಿಮೆಂಟರಿ ಡಿಮಾಂಡಗಳಲ್ಲಿ ತೋರಿಸಬೇಕಾಗುತ್ತದೆ. ಹಾಗೆಯೇ ಬೀಜಗಳನ್ನು ಕೊಂಡು ಹಂಚುವ ಕಾರ್ಯ ಬರಗಾಲ ಪ್ರದೇಶದಲ್ಲಿ ನಾಲ್ಕು ಕೋಟಿ ರೂಪಾಯಿ ಬೀಜವನ್ನು ವಿತರಣೆ ಮಾಡಲಾಗಿದೆ. ಖಾರಿಫ್ ಬೆಳೆಗೆ ಬೀಜವನ್ನು ಕೊಂಡುಕೊಳ್ಳುವ ಶಕ್ತಿ ಇಲ್ಲದೆ ಇರುವವರಿಗೆ ಬರಗಾಲ ಪ್ರದೇಶದಲ್ಲಿ ವ್ಯವಸಾಯಕ್ಕೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಸಾಲವಾಗಿ ಬೀಜವನ್ನು ಕೊಟ್ಟಿದ್ದೇವೆ. ರಬಿ ಬೆಳೆಗೆ ಮೂರು ಕೋಟಿ ರೂಪಾಯಿ ಬೀಜ ಹಂಚಿಕೆಯಾಗುತ್ತದೆ ಆದಕಾರಣ ಇದನ್ನೆಲ್ಲ ಬಜೆಟ್ ಮಾಡುವ ಕಾಲಕ್ಕೆ ಯೋಜನೆ ಮಾಡಬೇಕಾಗಿತ್ತು ಎಂದರೆ ಆದರಲ್ಲಿ ಎಷ್ಟರಮಟ್ಟಿಗೆ ನ್ಯಾಯವಿದೆ ಎನ್ನುವುದನ್ನು ನೋಡಬೇಕಾಗುತ್ತದೆ.

ಬರಗಾಲ ಪರಿಹಾರದ ಕೆಲಸ, ಜಯಂತಿ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಸುವ ಕೆಲಸ ಇವುಗಳನ್ನೆಲ್ಲ ಮಾಡಿದ್ದೇವೆ. ಸಂಡೂರು ತಾಲ್ಲೂಕಿನಲ್ಲಿ ಸುಶೀಲಾ ಎಂಬ ಗ್ರಾಮವನ್ನು ಜಯಂತಿ ಗ್ರಾಮವನ್ನಾಗಿ ತೆಗೆದುಕೊಂಡಿದ್ದೇವೆ ಅಲ್ಲಿ ಲಂಬಾಣಿ ಜನರಿದ್ದಾರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಗ್ರಾಮವನ್ನು ಈ ರೀತಿಯಾಗಿ ತೆಗೆದುಕೊಂಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಹಣದ ಸಹಾಯ ಬರುತ್ತಿರುವುದರಿಂದ ನಾವು ಅದನ್ನು ಬಜೆಟ್ಟಿನಲ್ಲಿ ಸೇರಿಸಿಲ್ಲವಾದ ಕಾರಣ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕೆ ಸಾಧ್ಯ. ಆದ ಕಾರಣ ಪ್ರತಿಯೊಂದು ವಿಷಯ ಇದರಲ್ಲಿ ಅಡಕವಾಗಿರತಕ್ಕ ವಿಷಯವನ್ನೂ ನಿಷ್ಪಕ್ಷಪಾತವಾಗಿ ನೋಡುವುದಾದರೆ ಎಲ್ಲವನ್ನೂ ಬಜೆಟ್ ಮಾಡುವ ಕಾಲಕ್ಕೆ ಗಮನದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತ ಇರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಚರ್ಚೆಯಲ್ಲಿ ಭಾಗವಹಿಸಿರತಕ್ಕ ಸದಸ್ಯರು ಕೆಲವು ಮುಖ್ಯವಾದ ವಿಚಾರಗಳನ್ನು ಎತ್ತಿದ್ದಾರೆ. ಆವರು ಎತ್ತಿರತಕ್ಕ ಪ್ರಶ್ನೆಗಳಿಗೆ ಉತ್ತರ ಕೊಟ್ಟರೆ ತಾನು ಎಲ್ಲ ವಿಚಾರಗಳನ್ನೂ ಹೇಳಿದಂತೆ ಆಗುತ್ತದೆ. ಆದಕಾರಣ ಎಲ್ಲರಿಗೂ ಅದರಿಂದ ಸಮಾಧಾನವಾಗುತ್ತದೆ ಎಲ್ಲರೂ ಹೇಳಿರತಕ್ಕ ವಿಚಾರಗಳಿಗೆ ಉತ್ತರ ಹೇಳುವ ಪ್ರಯತ್ನವಾದರೂ ಸರ್ಕಾರದ ವತಿಯಿಂದ ಮಾಡಿದರು ಎನ್ನುವ ವಿಚಾರವೂ ಬರುತ್ತದೆ. ಆ ದೃಷ್ಟಿಯಿಂದ ನಾನು ಮಾನ್ಯ ಸದಸ್ಯರು ಎತ್ತಿರುವ ವಿಷಯಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಬಂಗಾರಪ್ಪನವರು ಏಕೆ ಈ ಖರ್ಚನ್ನು ಮೊದಲೇ ಯೋಚನೆ ಮಾಡ

ವುದಕ್ಕಾಗಲಿಲ್ಲವೆಂದು ಕೇಳಿದರು. ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ- ೧೭ ಕೇಂದ್ರಗಳೇನಿವೆ ಅವುಗಳನ್ನು ಖಾದಿ ಮತ್ತು ವಿಲೇಜ ಇಂಡಸ್ಟ್ರೀಜ ಬೋರ್ಡ ಮುಖಾಂತರ ಮಾಡುತ್ತಾ ಇದ್ದಾರೆ, ಆ ಬೋರ್ಡ ಸರಿಯಾಗಿ ಕೆಲಸ ಮಾಡುತ್ತಿಲ್ಲ ವಾದಕಾರಣ ಹಣ ಸರಿಯಾಗಿ ವೆಚ್ಚವಾಗುತ್ತಿಲ್ಲವೆಂದು ಹೇಳಿದರು ಆ ವಾದದಲ್ಲಿ ಅಷ್ಟು ಅರ್ಥವಿಲ್ಲ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ ಬೋರ್ಡ ಬಗ್ಗೆ ಟೀಕೆ ಬೇರೆ ವಿಷಯ. ಬರಗಾಲ ಪರಸ್ಥಿತಿಯಲ್ಲಿ ೧೭ ಕೇಂದ್ರಗಳನ್ನು ತೆಗೆಯಬೇಕಾದರೆ ಅದಕ್ಕೆ ಹಣ ಖಾದಿ ಕಮಿಷನ'ನಿಂದ ಬರುತ್ತದೆ.

ಈ ಕಾರ್ಯವನ್ನು ಅವರ ಮುಖಾಂತರವೇ ಮಾಡಬೇಕಾಗಿತ್ತು. ಈ ರೀತಿ ನಾವು ಚರ್ಚೆ ಮಾಡುವುದು ಅಷ್ಟೊಂದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಡ್ರೌಟ್ ಅಸಿಸ್ಟನ್ಸ್ ಬಗ್ಗೆ ಒಂದು ದೊಡ್ಡ ಆಪಾದನೆ ಏನು ಎಂದರೆ ಹಳೇ ಮೈಸೂರಿನಲ್ಲಿ ಮಾಡಬೇಕಾಗಿದ್ದ ಖರ್ಚನ್ನು ಇಲ್ಲಿ ಮಾಡಿದ್ದೀರಿ ಎನ್ನುವ ವಾದ ಸರಿಯಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇಷ್ಟೇ ಅಲ್ಲ ಇದಕ್ಕೆ ಸಂಬಂಧಪಟ್ಟ ಅಂಕಿಸಂಖ್ಯೆಗಳನ್ನು ಕೂಡ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ನಾನು ಬಡ್ಜೆಟ್ ಸಭೆಯ ಮುಂದೆ ಇದ್ದ ಕಾಲಕ್ಕೆ ಹೇಳಿದೆ, ಬರಗಾಲ ಪೀಡಿತ ಪ್ರದೇಶಕ್ಕೆ ಹಣವನ್ನು ಬಡ್ಜೆಟ್ಟಿನಿಂದ ತೆಗೆದುಕೊಳ್ಳಬೇಕಾಗಿಲ್ಲ, ಇದಕ್ಕೆ ನೇರವಾಗಿ ಸಾಕಷ್ಟು ಪ್ರಮಾಣದಲ್ಲಿ ಕೇಂದ್ರದಿಂದ ನಮಗೆ ಖಂಡಿತವಾಗಿ ಹಣದ ಸಹಾಯ ಸಿಗುತ್ತದೆ ಎಂದು. ಆದರಲ್ಲಿ ಯಾರಿಗೂ ಭಯ ಇರಬೇಕಾಗಿಲ್ಲ ಎಂದು ಹೇಳುತ್ತೇನೆ. ಇವತ್ತಿನ ದಿನಸ ಹೆಚ್ಚು ಕಡಿಮೆ ಇದೇ ರೀತಿ ಆಗಿದೆ ಎಂದು ನಾನು ಸಂತೋಷದಿಂದ ಈ ಸಭೆಗೆ ಹೇಳಬಯಸುತ್ತೇನೆ.

ನಾವು ಜೂನ್ ಅಖೈರವರೆಗೆ ೪೪ ಕೋಟಿ ರೂಪಾಯಿ ಬರಗಾಲಕ್ಕೋಸ್ಕರ ರಾಜ್ಯದಲ್ಲಿ ಖರ್ಚು ಮಾಡಿದ್ದೇವೆ. ಅದರಲ್ಲಿ ತಮಗೆ ಈಗಾಗಲೇ ಗೊತ್ತಿರುವಂತೆ ೨೬ ಕೋಟಿ ೫೦ ಲಕ್ಷ ರೂಪಾಯಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದೇ ವರ್ಷ ತೀರಿಸುವ ಉದ್ದೇಶದಿಂದ ೨೨ ಕೋಟಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಏನು ಕೊಟ್ಟರು ಅದನ್ನು ಬಿಟ್ಟು ೨೬ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಇಲ್ಲಿಯವರೆಗೆ ಕೇಂದ್ರ ಸರ್ಕಾರದವರು ಕೊಟ್ಟರು. ಮೊನ್ನೆ ನಾನು ಡೆಲ್ಲಿಗೆ ಹೋದಾಗ ೧೯ನೇ ತಾರೀಖು ಹಣಕಾಸಿನ ಮಂತ್ರಿಗಳ ಜೊತೆಗೂ ಮತ್ತು ಪ್ಲಾನಿಂಗ್ ಮಿನಿಸ್ಟರ್ ಧಾರ್ ಅವರ ಜೊತೆಗೂ ಒಂಟು ಗಂಟೆಗಳ ಕಾಲ ಚರ್ಚೆ ಮಾಡಿದ್ದೇನೆ. ಇನ್ನು ೧೪ ಕೋಟಿ ರೂಪಾಯಿ ಫೈನಾನ್ಷಿಯಲ್ ಅಸಿಸ್ಟೆನ್ಸ್ ಕೊಡಲಿಕ್ಕೆ ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ ಎಂದರೆ ೨೬ ಕೋಟಿ ಪ್ಲಸ್ ೧೪ ಕೋಟಿ ಎಂದರೆ ಒಟ್ಟು ೪೦ ಕೋಟಿ ರೂಪಾಯಿ ಆಯಿತು. ಇದು ಸಂತೋಷದ ವಿಷಯ. ನಾವು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಧನ್ಯವಾದಗಳನ್ನು ಕೊಡಬೇಕೆಂದು ಹೇಳಲು ಸಂತೋಷಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಕೆಲವು ವರ್ತಕರು, ಅಲ್ಲಿಂದ ಒಂದು ಲಕ್ಷ ಬಂತು, ಇಲ್ಲಿಂದ ಒಂದು ಲಕ್ಷ ಬಂತು ಎಂದು ಹೇಳಿದ ಹಾಗಾಯಿತು.

ಶ್ರೀ ಎಂ. ವೈ. ಘೋರ್ಪಡೆ.—ಇತ್ತೀಚೆಗೆ ೩ ಸಲ ಡೆಲ್ಲಿಗೆ ಹೋಗಿದ್ದೆ. ಮೊದಲನೆಯ ಸಲ ಹೋದಾಗ ೧೦ ಕೋಟಿ ರೂಪಾಯಿ ನಮಗೆ ವೇಸ್ ಅಂಡ್ ಮೀನ್ಸ್ ಅವಶ್ಯಕವಾಗಿ ಬೇಕಾಗಿತ್ತು, ಅದನ್ನು ಅವರು ಕೊಟ್ಟರು. ಇನ್ನೊಂದು ಸಲ ಡೆಲ್ಲಿಗೆ ಹೋದಾಗ ೩೦ ಕೋಟಿ ರೂಪಾಯಿ ಮರುಪಾವತಿ ನಾವು ಮಾಡಬೇಕಾಗಿತ್ತು ಅದನ್ನು ಕ್ರಮೇಣ ೬ ತಿಂಗಳಲ್ಲಿ ವಾಪಸ್ಸು ತೆಗೆದುಕೊಳ್ಳುವ ಕಾರ್ಯಕ್ರಮಕ್ಕೆ ಒಪ್ಪಿಕೊಂಡರು. ಈ ಸಲ ೨೬ ಕೋಟಿ ಅಲ್ಲದೆ ೧೪ ಕೋಟಿ ರೂಪಾಯಿ ಫಿನಾನ್ಸಿಯಲ್ ಅಸಿಸ್ಟೆನ್ಸ್ ಕೊಡಲಿಕ್ಕೆ ಒಪ್ಪಿದ್ದಾರೆ. ಅದು ಇದೇ ವರ್ಷ ತೀರಿಸುವ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಅಲ್ಲ. ಅದನ್ನು ಯಾವ ರೀತಿ ಕೊಡಬೇಕು ಯಾವ ರೀತಿ ಮರುಪಾವತಿ ಮಾಡಬೇಕೆಂಬ ಬಗ್ಗೆ ವಿವರ ಇನ್ನು ಫೈನಲೈಜ್ ಆಗುವುದು ಇದೆ. ಇಷ್ಟು ಮಾತ್ರ ಹೇಳಬಹುದು. ಅದನ್ನು ಒಂದು ಅಥವಾ ೨–೩ ವರ್ಷಗಳಲ್ಲಿ ತೀರಿಸಬೇಕಾಗುತ್ತದೆ ಅದನ್ನು ತೀರಿಸುವುದು ಈ ವರ್ಷ ಅಲ್ಲ. ಈ ವರ್ಷ ಬಿಕ್ಕಟ್ಟು ಇದೆ. ೧೪ ಕೋಟಿ ರೂಪಾಯಿ ಕೊಡುವುದಕ್ಕೆ ಏನು ಒಪ್ಪಿದ್ದಾರೆ ಅದರಲ್ಲಿ ಕೆಲವು ಭಾಗ ಮುಂದಿನ ವರ್ಷ ಕೊಡಬೇಕಾಗುತ್ತದೆ. ಇನ್ನು ಕೆಲವು ಭಾಗ ೩ ವರ್ಷಗಳಲ್ಲಿ ಕೊಡಬೇಕಾಗುತ್ತದೆ. ಈ ೧೪ ಕೋಟಿ ಮತ್ತು ಮೊದಲೇ ಕೊಟ್ಟಿರತಕ್ಕ ೨೬ ಕೋಟಿ ಡ್ರಾಟ್ ಅಸಿಸ್ಟೆನ್ಸ್ ಒಟ್ಟು ೪೦ ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದು ೪೪ ಕೋಟಿ ರೂಪಾಯಿ.

ಶ್ರೀ ಕಾಗೋಡು ತಿಮ್ಮಪ್ಪ.—೧೪ ಕೋಟಿ ರೂಪಾಯಿ ವಾಪಸ್ಸು ಕೊಡುವುದೇ ?

ಶ್ರೀ ಎಂ. ವೈ. ಘೋರ್ಪಡೆ.—೫೦ ಪರ್‌ಸೆಂಟ್ ಗ್ರಾಂಟ್, ೫೦ ಪರ್‌ಸೆಂಟ್ ಲೋನ್ ಆಗಿ ಕೊಡಬೇಕೆಂದು ಕೇಳುತ್ತಿದ್ದೇವೆ. ೨೬ ಕೋಟಿಯಲ್ಲಿ, ೧೦ ಕೋಟಿ ರೂಪಾಯಿ ಒಂದು ಸಲ ಕೊಟ್ಟರು, ೧೬.೫೦ ಕೋಟಿ ರೂಪಾಯಿ ಒಂದು ಸಲ ಕೊಟ್ಟರು. ಅದರಲ್ಲಿ ೨ ಕೋಟಿ ರೂಪಾಯಿ ಮಾತ್ರ ಗ್ರಾಂಟ್ ಇತ್ತು ಉಳಿದ ಎಲ್ಲಾ ಸಾಲವಾಗಿ ಕೊಟ್ಟಿದ್ದಾರೆ. ಇದು ಸಾಕಾಗುವುದಿಲ್ಲ. ಡ್ರಾಟ್‌ಗೋಸ್ಕರ ಕೊಟ್ಟಿರುವ ಹಣದಲ್ಲಿ ಅರ್ಧ ಆದರೂ ಗ್ರಾಂಟ್ ಕೊಡಬೇಕು ಎನ್ನುವ ವಾದ ಅವರ ಮುಂದೆ ಇಟ್ಟಿದ್ದೇವೆ. ಅದು ನಮ್ಮ ರಾಜ್ಯದ ಹಿತದ ವಿರುದ್ಧವಾಗಿರುವ ವಾದವಲ್ಲ. ಇಷ್ಟು ಕೊಟ್ಟರೆ ಈಗಿನ ಪರಿಸ್ಥಿತಿಯಲ್ಲಿ ನಾವು ಸ್ವಲ್ಪ ಗಳಿಸಿದಂತಾಯಿತು. ೨೬ ಪ್ಲಸ್ ೧೪ ಕೋಟಿ ಅಲ್ಲದೆ ಇನ್ನೂ ೩೦ ಕೋಟಿ ರೂಪಾಯಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೊಟ್ಟಿದ್ದಾರೆ. ಅದರಲ್ಲಿ ೧೧ ಕೋಟಿ ರೂಪಾಯಿ ವಾಪಸ ಕೊಟ್ಟಿದ್ದೇವೆ. ಉಳಿದದ್ದು ನಮ್ಮ ಕಡೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕಡೆ ಕೊಡುವುದು ಈ ಕಡೆ ತೆಗೆದುಕೊಳ್ಳುವುದು !

Shri M. Y. GHORPADE.—It is not a ways and means advance returnable during this year. It is a financial assistance the details of which are being finalised, but this will have to be returned over the next three years, partly next year and partly during the remaining period.

ಶ್ರೀ ಕೆ. ಎಚ್. ಹನುಮೇಗೌಡ.—ಮಕಾರಾಷ್ಟ್ರಕ್ಕೆ ಯಾವ ರೀತಿ ಕೊಟ್ಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಬೇರೆ ಕಡೆಗೂ ಇಲ್ಲಿಗೂ ವ್ಯತ್ಯಾಸ ಮಾಡುವುದಕ್ಕೂ ಬರುವುದಿಲ್ಲ. ಮೈಸೂರಿನಲ್ಲಿ ೯ ಲಕ್ಷ ಜನರಿಗೆ ಕೆಲಸ ಕೊಡಬೇಕಾಯಿತು. ಅಲ್ಲಿಗೆ ಹೆಚ್ಚಿನ ಪ್ರಮಾಣವಲ್ಲಿ ಬರಗಾಲವಿರುವುದರಿಂದ ಜಾಸ್ತಿ ಹಣ ಕೊಟ್ಟರ ಬಹುದು. ಅದು ಬೇರೆ ವಿಷಯ ಇದು ಜೂನವರೆಗೆ ಇರತಕ್ಕ ಲೆಕ್ಕ. ಅದಾದ ನಂತರ ಜುಲೈ, ಅಗಸ್ಟ, ಸಪ್ಟೆಂಬರ ತಿಂಗಳುಗಳಲ್ಲಿ ಬರಗಾಲ ಪ್ರದೇಶಗಳಲ್ಲಿ ಖರ್ಚು ಮಾಡುತ್ತಿದ್ದೇವೆ. ಅದು ಬೇರೆ ಲೆಕ್ಕವಾಗುತ್ತದೆ. ಅದನ್ನು ಬೇರೆ ಕೇಳಬೇಕಾಗುತ್ತದೆ ಅವರ ಅಭಿಪ್ರಾಯದ ಪ್ರಕಾರ ಎಷ್ಟು ಕೊಡಬೇಕೋ ಅಷ್ಟು ಕೊಡುತ್ತಾರೆ

I want to make the position very clear, that we have spent Rs. 44 crores on drought up to the end of June. Against this, the Government of India has given Rs. 26.5 crores so far. They have now agreed as a result of discussions at Delhi on the 19th with Mr. D. P. Dhar, the Union Planning Minister and the Union Finance Minister to give another Rs. 14 crores financial assistance to Mysore, the details of which are being finalised but this is not a ways and means advance returnable this year. We may have to return this Rs. 14 crores over the next three year period which suits us because our difficulty is really for this year. The attitude of Government of India in agreeing to give Rs. 14 crores in this manner is helpful and we are thankful to the Government of India.

ಬ್ಲ್ಯಾಂಕ ಜೆಕ್ ವಿಷಯ ಹೇಳಿದರು. ನಾನು ಬ್ಲ್ಯಾಂಕ ಚೆಕ್ ಪದ ಉಪಯೋಗಿಸಲಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಮುಖ್ಯ ಮಂತ್ರಿಗಳು ಇದೇ ಸದನದಲ್ಲಿ ಆ ಪದವನ್ನು ಉಪಯೋಗಿಸಿದರು.

ಶ್ರೀ ಎಂ. ವೈ. ಘೋರ್ಪಡೆ.—ಆದರೂ ಕೂಡ ನಾವು ೪೪ ಕೋಟಿ ರೂಪಾಯಿ ಜೂನ ಎಂಡ್ ವರೆಗೆ ಖರ್ಚು ಮಾಡಿ ಅದರಲ್ಲಿ ಕೇಂದ್ರ ಸರ್ಕಾರದವರು ೪೦

ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದರೆ ಅದಕ್ಕೆ ಬ್ಲ್ಯಾಂಕ್ ಚೆಕ್ ಪದ ಉಪಯೋಗಿಸಿದರೂ ಅಷ್ಟು ತಪ್ಪು ಅಲ್ಲ ಎಂದು ತಾವೂ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ೧೪ ಕೋಟಿ ರೂಪಾಯಿ ಸಾಲದ ಮುಖಾಂತರ ಕೊಟ್ಟಿದ್ದಾರೆ. ಮೊದಲು ಕೊಟ್ಟಿರುವುದು ೩೬ ಕೋಟಿ ರೂಪಾಯಿ ಅದರಲ್ಲಿ ಸಾಲ ಎಷ್ಟು? ಗ್ರ್ಯಾಂಟ ಎಷ್ಟು?

Sri M. Y. GHORPADE.—I have already said that some portion may have to be adjusted in next year and some portion in the next two years. Those details are being worked out. The point is that this is assistance and not a ways and means assistance repayable this year. That is why we have told the Government of India that 50% grant and 50% loan should be the pattern that they should adopt and we are at it.

Shri KAGODU TAIMAPPA.—How are you going to return this 30 crores of Rupees?

Shri M. Y. GHORPADE.—We had the anxiety that salaries would be stopped. But now there is no such danger.

ಶ್ರೀ ಕಾಗೋಡು ತಿಮ್ಮಪ್ಪ.—೩೦ ಕೋಟಿ ರೂಪಾಯಿ ಸಾಲವನ್ನು ಯಾವ ಸೋರ್ಸನಿಂದ ವಾಪಸ್ಸು ಕೊಡುತ್ತೀರಿ?

ಶ್ರೀ ಎಂ. ವೈ ಘೋರ್ಪಡೆ— ಇದೇ ಸಂದರ್ಭದಲ್ಲಿ ಇನ್ನೊಂದು ಮುಖ್ಯವಾದ ವಿಷಯ ಸರ್ಕಾರದ ವತಿಯಿಂದ ಪ್ರಸ್ತಾಪ ಮಾಡಬೇಕಾಗುತ್ತದೆ. ಅದು ಏನೆಂದರೆ, ಡಿಯರ್ನೆಸ್ ಅಲೋಯನ್ಸ್ ಪ್ರಶ್ನೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಇದರ ಬಗ್ಗೆ ದೇಶದಲ್ಲಿ ಏನು ಒಂದು ವಾತಾವರಣ ಇದೆ, ನಮ್ಮ ರಾಜ್ಯದಲ್ಲಿ ಏನು ಒಂದು ಪರಿಸ್ಥಿತಿ ಇದೆ, ಅದು ಎಲ್ಲರಿಗೂ ಗೊತ್ತಿರತಕ್ಕದ್ದು.

ಶ್ರೀ ಕಾಗೋಡು ತಿಮ್ಮಪ್ಪ— ನಾನು ಹೇಳಿದ್ದು; what are the ways and means to return Rs. 30 crores within this year?

Sri M. Y. GHORPADE— In order to relive pressure on ways and means, the Centre has already agreed to repay ment over the years of the instalment loan amounting to Rs. 30 crores. We are confident of positive response to drought assistance also.

ಶ್ರೀ ಕಾಗೋಡು ತಿಮ್ಮಪ್ಪ — ೩೦ ಕೋಟಿ ರೂಪಾಯಿಗಳನ್ನು ಒಂದೇ ಸಲ ಕೊಡಬೇಕಾಗಿತ್ತು. ಅದನ್ನು ಕಂತುಗಳಲ್ಲಿ ಕೊಡಬಹುದು ಎಂದು ಫ್ರೈಡ್ ಔಟ್ ಮಾಡಿದ್ದಿರೆ.

Sri M. Y. GHORPADE.— That does not worry you. That is all provided in the Budget.

Sri KAGODU THIMMAPPA.— They are exactly our apprehensions.

Sri M. Y. GHORPADE.— This expenditure is just a part of the budget. It is taken into account in the Budget. It has nothing to do with the drought. Let us not mix up the Budget with the drought expenditure. I have heard Hon. Members saying that because of the drought, we have taken away budget provision from old Mysore to be spent there. It is not so. Whatever money has been spent on drought has been separately arranged and provided for and separate financial assistance is given from the Government of India. There is clear statistical proof that money has not been taken from the normal budgetary expenditure to be spent on drought. We have spent Rs. 44 crores up to end of June and Rs. 40 crores has been given by the Government of India towards drought apart from 20 crores ways and means, of which Rs. 11 crores has been repaid and Rs. 11 crores is still with us.

Sri KAGODU THIMAPPA.— What is your object in deferring the payment ?

ಶ್ರೀ ಎಂ. ವೈ. ಘೋರ್ಪಡೆ.— ನಿಮಗೆ ೩೦೦ ರೂಪಾಯಿ ಸಂಬಳ ಬರುತ್ತಿದ್ದರೆ ೧೦೦೦ ರೂಪಾಯಿ ಕೋಟ್, ಸೂಟ್, ಪರ್ಚೆಸ್ ಮಾಡಿದರೆ ಅದನ್ನು ಕ್ರಮೇಣ ತಿಂಗಳಿಗೆ ಇಷ್ಟು ಎಂದು ಕೊಡಬೇಕಾಗುತ್ತದೆ. ಸಾವಿರ ರೂಪಾಯಿ ವಸ್ತು ಕೊಂಡುಕೊಳ್ಳುವ ಶಕ್ತಿ ಇದೆ ಎಂದು ಒಂದೇ ತಿಂಗಳಿನಲ್ಲಿ ಹಣ ಕೊಟ್ಟರೆ ಇನ್ನೊಬ್ಬರ ಹತ್ತಿರ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಓವರ್ ಡ್ರಾಫ್ಟ್ ಆಗುತ್ತದೆ. ತಿಂಗಳಿಗೆ ಇಷ್ಟು ಎಂದು ಕೊಟ್ಟರೆ ಬ್ಯಾಂಕಿನಲ್ಲಿ ಓವರ್ ಡ್ರಾಫ್ಟ್ ಆಗುವುದಿಲ್ಲ.

What Mr. Kagodu Thimappa is referring to is part of the normal repayment and that is provided in the State Budget. Drought is a different proposition. I have said that the drought expenditure is almost fully taken care of by the Government of India by separate special assistance and it is not a load on our budget, because as you know,

are entitled to further DA from 1st May of this year, to the extent of DA increase paid by the Government of India and this DA will be Rs. 7 for those drawing less than Rs. 85; Rs. 8/- for those drawing between Rs. 85 to 210; and Rs. 10 for those drawing Rs. 210-575.

But the only thing is that though we accept this D.A., it will be paid in instalments in the next financial year and not now. This is in keeping with the arrangement we had agreed to when the representatives of the N. G. Os. discussed this matter with me some days' ago. Though they are assured that this increase will be given by the Government of Mysore, this amount will be paid during the next year in suitable instalments. This fresh D. A. of Rs. 7, 8 and 10 will mean a total liability of Rs. 3 crores and 34 lakhs for one year period.

5-30 P. M.

ಶ್ರೀ ಕಾಗೋಡು ತಿಮ್ಮಪ್ಪ.— ತುಟಿಗೆ ತುಪ್ಪ ಹಚ್ಚುತ್ತಿದ್ದೀರಿ ಅಷ್ಟೆ.

ಶ್ರೀ ಟಿ. ಆರ್. ಶಾಮಣ್ಣ.— ಸರಕಾರೀ ನೌಕರರ ವಿಷಯ ಅಲ್ಲದೆ ಬೇರೆಯ ವರ ವಿಷಯವನ್ನೂ ಸ್ವಲ್ಪ ಹೇಳುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.— ನಾವು ಕಳೆದ ಎಪ್ರಿಲ್‌ನಲ್ಲಿ ಏರಿಸಿದ ತುಟ್ಟಿ ಭತ್ಯದಿಂದ ವರ್ಷಕ್ಕೆ ೫ ಕೋಟಿ ೩೪ ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಲ್ಲದೆ ಇತ್ತೀಚೆಗೆ ಕೇಂದ್ರ ಸರಕಾರದವರು ಏನು ಡಿ. ಎ ಜಾಸ್ತಿ ಮಾಡಿದ್ದಾರೋ ಅದನ್ನೂ ಕೂಡ ನಾವು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ. ಆದರೆ ನಾವು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕಡಿಮೆ ಮಾಡಿ ಇವರಿಗೆ ಕೊಡಬೇಕು ಎನ್ನುವದು ಸರಿಯಲ್ಲ ಎಂದು ಹೇಳಲಾರೆ. ಅದಕ್ಕೋಸ್ಕರ ಅವರಿಗೆ ನಾವು ಈಗ ಏರಿಸಿದ ತುಟ್ಟಿಭತ್ಯವನ್ನು ಸದ್ಯಕ್ಕೆ ನಗದು ಪಾವತಿ ಮಾಡುವದಿಲ್ಲ. ಮುಂದಿನ ವರ್ಷ ಕಂತುಗಳಲ್ಲಿ ಅದನ್ನು ಪಾವತಿ ಮಾಡುತ್ತೇವೆ. ಏತಕ್ಕೋಸ್ಕರ ಈ ರೀತಿ ಒಪ್ಪಿದ್ದೇವೆ ಎಂದರೆ ಕೇಂದ್ರ ಸರಕಾರದಲ್ಲಿರತಕ್ಕ ನೌಕರರ ತುಟ್ಟಿಭತ್ಯಕ್ಕೂ ಮತ್ತು ನಮ್ಮ ರಾಜ್ಯ ಸರಕಾರದ ನೌಕರರ ತುಟ್ಟಿಭತ್ಯಕ್ಕೂ ಇರುವ ಅಂತರವನ್ನು ಹೋಗಲಾಡಿಸಬೇಕೆಂಬುದೇ ನಮ್ಮ ಉದ್ದೇಶ. ಈಗ ನಮ್ಮ ರಾಜ್ಯದಲ್ಲಿ ೩ ಲಕ್ಷ ೫೦ ಸಾವಿರ ಜನ ಸರಕಾರೀ ನೌಕರರು ಇದ್ದಾರೆ. ಅದರಲ್ಲಿ ೨ ಲಕ್ಷ ೭೮ ಸಾವಿರ ಜನ ಸರಕಾರೀ ನೌಕರರು, ಇನ್ನು ೭೨ ಸಾವಿರ ಜನ ಸ್ಥಳೀಯ ಸಂಸ್ಥೆಗಳು ಹಾಗೂ ಇತರ ಸರ್ಕಾರೀ ನೆರವಿನ ಸಂಸ್ಥೆಗಳಲ್ಲಿ ಇದ್ದಾರೆ. ಈಗಾಗಲೇ ನಾನು ಹೇಳಿದ ಪ್ರಕಾರ ೭೧೦ ರೂಪಾಯಿಗಳಿಗಿಂತ ಕಡಿಮೆ ಸಂಬಳನವರು ಯಾರ್‍ಯಾರು ಇರುತ್ತಾರೋ ಅವರಿಗೆ ೭ ತಿಂಗಳ ಕಾಲದ ತುಟ್ಟಿಭತ್ಯವನ್ನು ರಾಜ್ಯೋತ್ಸವ ದಿನನಾದ ನವಂಬರ ಒಂದರಂದು ಕೊಡುತ್ತೇವೆ. ಒಟ್ಟು ೩

ಲಕ್ಷ ೫೦ ಸಾವಿರ ಜನ ಸರಕಾರೀ ನೌಕರರ ಪೈಕಿ ೨ ಲಕ್ಷ ೯೦ ಸಾವಿರ ಜನಕ್ಕೆ ಇದರ ಉಪಯೋಗ ಸಿಕ್ಕುತ್ತದೆ. ಅಲ್ಲದೆ ಲೋಯರ್ ಪೇ ಸ್ಕೇಲ್‌ನಲ್ಲಿರುವ ಸರಕಾರೀ ನೌಕರರು ಈಗಿನ ಪರಿಸ್ಥಿತಿಯಲ್ಲಿ ಎಸೆನ್ಸಿಯಲ್ ಕಮಾಡಿಟೀಸ್‌ಗಳನ್ನು ಕೊಂಡು ಕೊಳ್ಳುವದು ಕಷ್ಟ, ಅವರಿಗೆ ನೆರವು ನೀಡಬೇಕೆಂಬ ವಾದ ಕೆಲವು ದಿವಸಗಳಿಂದಲೂ ಇತ್ತು. ಆದುದರಿಂದ ಅವರಿಗೆ ಸಾಕಷ್ಟು ಸಹಾಯ ಸಿಗಬೇಕೆಂದು ನಾನು ತಿಳಿದು ಕೊಂಡಿದ್ದೇನೆ.

ಇನ್ನು ೨೧೦ ರೂಪಾಯಿಗಿಂತ ಜಾಸ್ತಿ ಸಂಬಳ ಯಾರ್ಯಾರಿಗೆ ಬರುತ್ತದೋ ಅವರಿಗೆ ಒಂದು ತಿಂಗಳ ಭತ್ಯ ಬಾಕಿಯನ್ನು ಮಾತ್ರ ನಗದಾಗಿ ಕೊಡುತ್ತೇವೆ. ಇನ್ನು ೬ ತಿಂಗಳ ಬಾಕಿಯನ್ನು ಅವರ ಲೆಕ್ಕದಲ್ಲಿ ಉಳಿತಾಯ ಖಾತೆಗೆ ಇಡುತ್ತೇವೆ. ಮತ್ತು ೨೧೦ ರೂಪಾಯಿಗಿಂತ ಕಡಿಮೆ ಸಂಬಳ ಯಾರ್ಯಾರಿಗೆ ಬರುತ್ತದೋ ಅವರಿಗೆ ೬ ತಿಂಗಳ ಭತ್ಯದ ಬಾಕಿಯನ್ನು ಪಾವತಿ ಮಾಡಲು ೨ ಕೋಟಿ ರೂಪಾಯಿ ವೆಚ್ಚ ವಾಗುತ್ತದೆ. ಇನ್ನು ೨೧೦ ರೂಪಾಯಿಗಿಂತ ಜಾಸ್ತಿ ಸಂಬಳ ಯಾರ್ಯಾರಿಗೆ ಬರುತ್ತದೋ ಅವರಿಗೆ ಒಂದು ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೆ ಅವರಿಗೆ ಒಂದು ಕೋಟಿ ರೂಪಾಯಿಯನ್ನು ತಕ್ಷಣ ಕೊಡುವುದಿಲ್ಲ. ಅದರಲ್ಲಿ ಒಂದು ತಿಂಗಳ ಭತ್ಯದ ಬಾಕಿ ೧೬ ಲಕ್ಷ ರೂಪಾಯಿ ಪಾವತಿ ಮಾಡಿ ಉಳಿಕೆ ದುಡ್ಡನ್ನು ಅವರ ಹೆಸರಿನಲ್ಲಿ ಉಳಿತಾಯ ಖಾತೆಗೆ ಜಮಾ ಮಾಡುತ್ತೇವೆ. ಇಷ್ಟೇ ಅಲ್ಲದೆ ಕೇಂದ್ರ ಸರಕಾರದವರು ಮೇ ತಿಂಗಳಿನಿಂದ ಹೊಸದಾಗಿ ೭—೮—೧೦ ರೂಪಾಯಿಗಳು ಏನು ಜಾಸ್ತಿ ಮಾಡಿದ್ದಾರೋ ಆ ಹಣವನ್ನೂ ಸಹ ಕೊಡಲು ನಾವು ಒಪ್ಪಿದ್ದೇವೆ. ಆದರೆ ಈ ಹಣ ಈ ವರ್ಷ ಕೊಡುವದಿಲ್ಲ ಮುಂದಿನ ವರ್ಷ ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಸಾಮಾನಿನ ಬೆಲೆ ಜಾಸ್ತಿಯಾಗಿರುವದ ರಿಂದ ಸರಕಾರೀ ನೌಕರರಿಗೆ ಜಾಸ್ತಿ ಡಿ ಎ. ಕೊಡುವದು ಒಳ್ಳೆಯದು. ಆದರೆ ಅದೇ ರೀತಿ ಸಣ್ಣ ಪುಟ್ಟ ಕೂಲಿಕಾರರು ಏನು ಇದ್ದಾರೋ ಅವರಿಗೂ ಕೂಡ ರಾಜ್ಯೋತ್ಸವ ದಿನದಂದು ಒಂದು ರೂಪಾಯಿಯೆನ್ನಾದರೂ ಕೊಡಿರಿ.

ಶ್ರೀ ಎಂ. ವೈ ಘೋರ್ಪಡೆ.— ಎನ್. ಜಿ. ಓಸ್‌ಗೆ ಎಪ್ರಿಲ್ ಒಂದರಿಂದಲೇ ಈ ತುಟ್ಟಿ ಭತ್ಯವನ್ನು ಕೊಡಬೇಕಾಗಿತ್ತು. ಆವಾಗ ಹಣ ಕಾಸಿನ ಪರಿಸ್ಥಿತಿ ಸ್ವಲ್ಪ ಕಷ್ಟಕರವಾಗಿದುದರಿಂದ ಅವರನ್ನು ನಮಗೆ ಸಹಕಾರ ಕೊಡಬೇಕೆಂದು ಕೇಳಿದೆವು. ಅದಕ್ಕೆ ಅವರು ಒಪ್ಪಿದರು, ನಮಗೆ ಯಾವ ತಕರಾರನ್ನೂ ಮಾಡಲಿಲ್ಲ. ಆದುದರಿಂದ ಅವರಿಗೆ ನಾವು ಈಗ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಸರಕಾರೀ ನೌಕರರಿಗೆ ಏನು ತುಟ್ಟಿಭತ್ಯ ಹೆಚ್ಚಿಸಿದ್ದೀರೋ ಅದನ್ನು ಕೊಡಬೇಡಿ ಎಂದು ಹೇಳುವದಿಲ್ಲ. ಆದರೆ ಅದೇ ರೀತಿ ನಮ್ಮ ರಾಜ್ಯದಲ್ಲಿ ಬಡಪಾಯಿಗಳು ಏನು ಇದ್ದಾರೋ ಅವರ ಬಗ್ಗೆ ಏನು ಕರುಣೆ ಬೇಡವೇ ?

ಶ್ರೀ ಎಂ. ವೈ. ಘೋರ್ಪಡೆ.— ಬರಗಾಲಕ್ಕೋಸ್ಕರ ನಾವು ಳಳ ಕೋಟಿ ರೂಪಾಯಿ ಏನು ಖರ್ಚು ಮಾಡಿದೆವೋ ಆ ಬಗ್ಗೆ ಹಣ ಖರ್ಚಾಯಿತು, ಏನೂ ಕೆಲಸ ಆಗಲಿಲ್ಲಾ ಎಂದು ಟೀಕೆ ಮಾಡಿದಿರಿ. ಕೂಲಿಕಾರರಿಗೆ ದಿನ ಒಂದಕ್ಕೆ ೨—೩ ರೂಪಾಯಿ ಕೂಲಿ ಸಿಗಲಿ ಎಂದು ನಾವು ಳಳ ಕೋಟಿ ರೂಪಾಯಿ ಖರ್ಚು ಮಾಡಿದೆವು. ಆವಾಗ ನಾವು ಆ ದುಡ್ಡನ್ನು ಖರ್ಚು ಮಾಡದೇ ಹೋಗಿದ್ದರೆ ಅವರಿಗೆ ಆ ಕೂಲಿ ಸಿಗದೇ ಹೋಗಿದ್ದರೆ ಅವರಿಗೆ ಎಷ್ಟು ಕಷ್ಟವಾಗುತ್ತಿತ್ತು ಎನ್ನುವದನ್ನು ಯೋಚನೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.— ಅದಕ್ಕೆ ಎಷ್ಟು ಹಣ ಖರ್ಚು ಮಾಡುತ್ತೀವೋ ಅಷ್ಟು ಹಣವನ್ನೂ ಕೂಡ ಕೇಂದ್ರದಿಂದ ತರುತ್ತೀವೆ ಎಂದು ಹೇಳಿದಿರಿ ಅಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ.— ಈಗ ಮಾನ್ಯ ಕೋಣಂದೂರು ಲಿಂಗಪ್ಪನವರು ಏನು ಭಾಷಣ ಮಾಡಿದರು. ಅವರ ಭಾಷಣದಲ್ಲಿ ಬರೀ ಸೊಂಡೂರೀ ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಅವರು ಹೇಳಿದ್ದು ನೀವು ಖರ್ಚು ಮಾಡಿದ ಹಣವೆಲ್ಲಾ ದುರುಪಯೋಗವಾಗಿದೆ, ಏನೂ ಪ್ರೋಗ್ರೆಸ್ ಇಲ್ಲ ಅಂತ.

ಶ್ರೀ ಎಂ. ವೈ. ಘೋರ್ಪಡೆ.— ಆದುದರಿಂದ ಆ ಒಂದು ವಿಷಯದಲ್ಲಿ ಹೇಳುವದಾದರೆ ಅವರಿಗೆ ಬರೀ ಸೊಂಡೂರೀ ಕಾಣುತ್ತದೇ ವಿನಾ ಆ ಸೊಂಡೂರಿನ ವರಮಾನ ಏನು ಎನ್ನುವದು ಗೊತ್ತಿಲ್ಲ. ಸೊಂಡೂರಿನಲ್ಲಿ ಪ್ರತಿಯೊಬ್ಬರೂ ಸುಲಭವಾಗಿ ೩—೪—೫ ರೂಪಾಯಿಗಳನ್ನು ದುಡಿದುಕೊಳ್ಳುವದಕ್ಕೆ ಸಾಧ್ಯ ಇದೆ. ಅವರಿಗೆ ಅಲ್ಲಿ ಸಾಕಷ್ಟು ಉದ್ಯೋಗ ಇದೆ. ಆದರೆ ಸೊಂಡೂರಿನಲ್ಲಿರತಕ್ಕಂಥ ಜನರಿಗೆ ಶ್ರೀಮಾನ ಕೋಣಂದೂರು ಲಿಂಗಪ್ಪನವರಂಥಾವರ ಮಾರ್ಗದರ್ಶನ ಬೇಕು ಎಂದರೆ ಅದನ್ನು ಅವರು ಒಪ್ಪಲಿಕ್ಕೆ ತಯಾರಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.— ನೀವು ಹಣ ತರುವದಕ್ಕೆ ದಿಲ್ಲಿಗೆ ಹೋದದ್ದು ನಿಜ ಆದರೆ ಅಲ್ಲಿಂದ ಬರೀ ಖಾಲೀ ಗೂಡೆ ತಂದಿರಿ.

ಶ್ರೀ ಎಂ. ವೈ. ಘೋರ್ಪಡೆ.— ನಾನು ಇಷ್ಟು ಮಾತ್ರ ಹೇಳುತ್ತೇನೆ. ಅದಕ್ಕೆ ಕಳವಳ ಬೇಡ. ನಿಮ್ಮ ಆರ್ಗನೈಸೇಷನ್ ಬಗ್ಗೆ ಪಟ್ಟಣದಲ್ಲಿ ಹೇಳಿದರೆ ಒಪ್ಪುತ್ತಾರೆ. ಆದರೆ ರೂರಲ್ ಏರಿಯಾದಲ್ಲಿ ಹೇಳಿದರೆ ಒಪ್ಪುವದಿಲ್ಲ. ಆದುದರಿಂದ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಅಲ್ಲಿ ೧೦೦ ಜನರನ್ನು ಸೇರಿಸಬೇಕಾದರೆ ೨—೩ ದಿವಸ ಬೇಕಾಯಿತು, ಬಹಳ ಕಷ್ಟವಾಯಿತು ಎಂದು ಹೇಳ್ತಾರೆ. ಪಾಪ ಅವರು ಸೊಂಡೂರು ಅನುಭವ ಹೇಳ್ತಾರೆ. ಸರಕಾರಕ್ಕೆ ಹಳ್ಳಿಯವರಮೇಲೆ ಅಭಿಮಾನ ಇಲ್ಲವೆಂದಲ್ಲಾ. ನಾನೂ ಕೂಡ ಹಳ್ಳಿ ಪ್ರದೇಶದಿಂದ ಬಂದವ. ಅಲ್ಲಿನವರ ಆರ್ಥಿಕ ಪರಿಸ್ಥಿತಿಯನ್ನು ನಾನು ಸ್ವಲ್ಪ ತಿಳಿದುಕೊಂಡಿದ್ದೇನೆ. ಆ ಬಗ್ಗೆ ಟೀಕೆ ಮಾಡುವದು ಸರಿಯಲ್ಲ. ಆದುದರಿಂದ ಅವರ ಆರ್ಥಿಕ ಪರಿಸ್ಥಿತಿಯನ್ನು ನಿವಾರಣೆ ಮಾಡುವದಕ್ಕೆ

ಏನು ಮಾಡಬೇಕೋ ಆ ಬಗ್ಗೆ ಒಂದು ಹೆಜ್ಜೆ ಮುಂದೆ ಇಡುವದಕ್ಕೆ ಸಾಧ್ಯ ಇದೆ. ಆ ರೀತಿ ಮುಂದೆ ಇಡುವದರಲ್ಲಿ ಏನೂ ಅನುಮಾನವಿಲ್ಲಾ ಎಂದು ಹೇಳುತ್ತೇನೆ.

ಬರಗಾಲ ಕಾಲಕ್ಕೆ ತುತ್ತಾಗಿರುವ ಜನರಿಗೋಸ್ಕರ ನಾವು ಎಲ್ಲರೂ ಸೇರಿ ಬರಗಾಲ ಕಾರ್ಯಕ್ರಮ ಹಾಕಿಕೊಂಡಿದ್ದು ತಮಗೆ ಗೊತ್ತಿದೆ. ನಾವು ಪಟ್ಟಣಗಳಲ್ಲಿರುವ ಜನರಿಗೋಸ್ಕರ ಬರಗಾಲದ ನಿವಾರಣೆಗೆ ಮೀಸಲಾದ ಹಣವನ್ನು ಖರ್ಚು ಮಾಡಿಲ್ಲ. ಈಗ ಶ್ರೀಮಾನ ಸಿದ್ದಪ್ಪನವರು ಫುಡ್ ಕಾರ್ಪೋರೇಷನ್ ಮಾಡುತ್ತಾ ಇದ್ದೀರಿ. ಆದ್ದರಿಂದ ಡೂಪ್ಲಿಕೇಷನ್ ಆಗದ ಹಾಗೆ ನೋಡಿಕೊಳ್ಳಿ ಎಂದು ಹೇಳಿದರು. ಡೂಪ್ಲಿಕೇಷನ್ ಎಷ್ಟು ಕಡಿಮೆ ಮಾಡಲಿಕ್ಕೆ ಸಾಧ್ಯ ಅಷ್ಟನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ಫುಡ್ ಕಾರ್ಪೋರೇಷನ್ ಮಾಡುವ ಕೆಲಸ, ವೇರ್‌ಹೌಸ್ ಮಾಡುವ ಕೆಲಸ ಒಂದೇ ಎಂದು ಹೇಳಿದರೆ ಅದು ಸರಿಯಾದ ವಾದವಲ್ಲ. ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಒಳ್ಳೆಯ ಬೆಲೆ ಬಂದಾಗ ಮಾರಲಿಕ್ಕೆ ಮತ್ತು ರೈತರಿಗೆ ಸಹಾಯ ಮಾಡುವುದಕ್ಕೆ ವೇರ್ ಹೌಸ್ ಇರುವುದು. ಆದರೆ ಫುಡ್ ಕಾರ್ಪೋರೇಷನ್ ಉದ್ದೇಶ ಅದು ಅಲ್ಲ, ಬರೀ ಸ್ಟೋರೇಜ್ ಮಾಡುವ ಕೆಲಸ ಒಂದೇ ಫುಡ್ ಕಾರ್ಪೋರೇಷನ್ ಮಾಡುವುದಿಲ್ಲ. ಅದು ಡಿಸ್ಟ್ರಿಬ್ಯೂಷನ್ ಅಥವಾ ಹೋಲಸೇಲ ಟ್ರೇಡ ಸಹ ಮಾಡುತ್ತಾ ಹೋಗಬೇಕು ಎನ್ನುವುದೇ ಅದರ ಉದ್ದೇಶ. ಹಳ್ಳಿಗಳಲ್ಲಿ ಇರತಕ್ಕ ಬಿಲೋ ಪಾವರ್ಟಿ ಜನ ಏನು ಇದ್ದಾರೆ ಅವರಿಗೆ ಸೊಂಡೂರಿನಲ್ಲಿ ಸಿಕ್ಕತಕ್ಕಷ್ಟು ಕೂಲಿ ಬೇರೆ ಎಲ್ಲ ಕಡೆಯಲ್ಲೂ ಸಿಕ್ಕುತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇವಲ ಒಂದು ರೂಪಾಯಿ ಕೂಡ ಕೂಲಿ ಸಿಕ್ಕುತ್ತಿಲ್ಲ. ಆದ್ದರಿಂದ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ವ್ಯಾಪ್ತಿಯನ್ನು ಹೆಚ್ಚಿಸಬೇಕಾಗುತ್ತದೆ. ಹಂಚಲಿಕ್ಕೆ ನಮ್ಮ ಕಡೆ ಏನಾದರೂ ಇರಬೇಕಾಗುತ್ತದೆ. ಅದು ಫುಡ್ ಕಾರ್ಪೋರೇಷನ್‌ನ ಮೂಲ ವಿಚಾರ. ಮತ್ತು ಇದು ಪಬ್ಲಿಕ್ ಡಿಸ್ಟ್ರಿಬ್ಯೂಷನ್‌ನ್ನು ದಿನೇ ದಿನೇ ಹೆಚ್ಚಿಸಿಕೊಂಡು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಸೈಂಟಿಫಿಕ್ ಮೆತೆಡ್‌ನಲ್ಲಿ ಕೆಲಸ ಮಾಡಬೇಕಾಗುತ್ತದೆ. ವೇರ್‌ಹೌಸಿಂಗ ಕಾರ್ಪೋರೇಷನ್ ಇದೆ, ಇದರ ಜೊತೆಗೆ ಫುಡ್‌ಕಾರ್ಪೋರೇಷನ್ ಮಾಡಿದರೆ ಡೂಪ್ಲಿಕೇಷನ್ ಆಗುತ್ತದೆ ಎಂದು ಹೇಳುವುದು ಸರಿಯಲ್ಲ. ವೇರ್‌ಹೌಸಿಂಗ ಕಾರ್ಪೋರೇಷನ್ ಇರುವುದು ಸೊಟೇಜ್ ಮತ್ತು ಪರ್ಚೇಸಿಂಗ ಆಫ್ ಫುಡ್‌ಗ್ರೈನ್ಸ್‌ಗೆ. ಆದ್ದರಿಂದ ಇದು ಡೂಪ್ಲಿಕೇಷನ್ ಆಗುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಡೂಪ್ಲಿಕೇಷನ್ ಮಾಡಲಿಕ್ಕೆ ಅವಕಾಶವಾಗದಂತೆ ಸರ್ಕಾರದವರು ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದರೆ ಅದರ ಬಗ್ಗೆ ನಮ್ಮದು ವಾದವಿಲ್ಲ. ಇನ್ನು ಇದಕ್ಕೆ ಸಂಬಂಧಪಟ್ಟಂತೆ ಸಪ್ಲಿಮೆಂಟರಿ ಡಿಮಾಂಡ ಬಗ್ಗೆ ಹೇಳಬೇಕಾದರೆ ನಮ್ಮ ಮೈಸೂರು ಸರ್ಕಾರದ ವತಿಯಿಂದ ೩೬ ಲಕ್ಷ ರೂಪಾಯಿ ಮಾತ್ರ ಕೊಡುತ್ತಾ ಇದೆ ಅಷ್ಟೆ. ಇದು ಏನು ಜಾಸ್ತಿ ಎಂದು ತಿಳಿದುಕೊಂಡಿಲ್ಲ. ಅವರು ಐಸಿಡಿಸಿಯಿಂದ ಫೈನಾನ್ಸ್ ಕಾರ್ಪೋರೇಷನ್‌ನಿಂದ ನಾಲ್ಕು ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಸುಮಾರು ೨೫ ಲಕ್ಷ ರೂಪಾಯಿಯಷ್ಟು ಬೇರೆ ಕಡೆಯಿಂದ ಸಂಗ್ರಹಿ

ಸಿದ್ದಾರೆ. ಅವರ ಶೇರ ಕ್ಯಾಪಿಟಲ್ ೨೫ ಲಕ್ಷ ರೂಪಾಯಿ ಇದೆ. ಇದೇ ರೀತಿಯಾಗಿ ಬೇರೆ ಕಡೆಯಲ್ಲಿ ಯಾರಾದರೂ ಮಾಡುತ್ತೇವೆಂದು ಹೇಳಿದರೆ ಸರ್ಕಾರದಲ್ಲಿ ಬಜೆಟ್ ಇರಲಿ ಅಥವಾ ಇಲ್ಲದೆ ಇರಲಿ ನಾವು ಎಲ್ಲರಿಗೂ ಪ್ರೋತ್ಸಾಹ ಕೊಡುತ್ತೇವೆಂದು ಹೇಳಬೇಕಾಗುತ್ತದೆ. ಯಾರಾದರೂ ಪ್ರೊಸೆಸಿಂಗ ಪ್ಲಾಂಟ ಹಾಕಿದರೆ ಮುಂದೆ ಅದರಿಂದ ನಮಗೆ ಉತ್ಪತ್ತಿಯಾಗುತ್ತದೆ. ಅದರಿಂದ ನೀವು ಖರ್ಚು ಮಾಡಿದ್ದು ಸರಿಯಲ್ಲ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ನಾನು ಯಾರ ವತಿಯಿಂದ ಮಾತನಾಡುತ್ತಿಲ್ಲ. ಇಲ್ಲಿರತಕ್ಕ ಎಷ್ಟೋ ಮಾನ್ಯ ಸದಸ್ಯರು ಅಲ್ಲಿಗೆ ಹೋಗಿ ನೋಡಿ ಬಂದಿದ್ದಾರೆ. ಶ್ರೀಮಾನ್ ಕೆ. ಎಚ್. ಪಾಟೀಲರು ಬಹಳ ಆಸಕ್ತಿ ವಹಿಸಿ ಕೆಲಸ ಮಾಡಿದ್ದಾರೆ, ಯಾರು ಮಾಡುವುದಿಲ್ಲ; ನಮ್ಮ ಜನ, ನಮ್ಮ ಊರು ಬೆಳೆಯಲಿ ಎಂದು ಅವರು ಕೆಲಸ ಮಾಡಿದ್ದಾರೆ.

ಈಗ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿರತಕ್ಕಂಥ ವಿಷಯದ ಬಗ್ಗೆ ಆಗಲೇ ಉತ್ತರ ಕೊಟ್ಟಿದ್ದೇನೆ. ಆಗಲೆ ಒಂದು ವಿಷಯ ಹೇಳಿದರು, ಹಾಸ್ಟಲ್‌ಗೆ ಗ್ರಾಂಟ್‌ನ್ನು ಕೊಡುವಾಗ ಷೆಡ್ಯೂಲ್ ಕ್ಯಾಸ್ಟ ಮತ್ತು ಷೆಡ್ಯೂಲ್ ಟ್ರೈಬ್ಸಗೆ ೭೫ ಪರ್ಸಂಟ ರಿಸರ್‌ವೇಷನ್ ಕೊಡುವುದು ಅಷ್ಟೊಂದು ಸರಿಯಲ್ಲ ಎಂದು. ಈಗ ಏನು ಇದೆ ಇದು ಸಪ್ಲಿಮೆಂಟರಿ ಗ್ರಾಂಟ. ಆ ವಿಷಯ ಹೇಳಬೇಕಾದರೆ, ೭೫ ಪರ್ಸಂಟ ರಿಸರ್‌ವೇಷನ್ ಮಾಡಿ ಆ ಹಣವನ್ನು ಅದೇ ರೀತಿ ಖರ್ಚು ಮಾಡಬೇಕಾಗುತ್ತದೆ. ೬ ಲಕ್ಷ ರೂಪಾಯಿ ಬೇರೆ ಯಾವ ರೀತಿಯಿಂದಲೂ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಇನ್ನು ನಮ್ಮ ದೇಶದಲ್ಲಿ ಎಲ್ಲ ಜಾತಿ ಮತಕ್ಕೆ ಸೇರಿದವರು ಒಂದೇ ಹಾಸ್ಟಲ್‌ಗಳಲ್ಲಿ ಬೆಳೆಯುವಂತಹ ಒಂದು ವಿಧಾನ ಸರಿಯಾದ ಸಮಾಜವಾದ ಎಂದು ಹೇಳುತ್ತೇನೆ. ಆ ರೀತಿ ನಡೆದುಕೊಂಡರೆ ಸರಿಯಾದ ಸಮಾಜವಾದ ಮಾಡಲಿಕ್ಕೆ ಸಾಧ್ಯವೆಂದು ಹೇಳುತ್ತೇನೆ. ಅದಕ್ಕೋಸ್ಕರವಾಗಿ ಎಲ್ಲ ಜಾತಿ ಮಕ್ಕಳು ಅವರು ಬ್ಯಾಕ್‌ವರ್ಡ ಆಗಲಿ ಫಾರ್‌ವರ್ಡ ಆಗಲಿ ನಿಮ್ಮ ವರ್ಗದವರೇ ಆಗಲಿ ಎಲ್ಲರೂ ಒಂದೇ ಹಾಸ್ಟಲ್‌ನಲ್ಲಿ ಇರಬೇಕಾಗುತ್ತದೆ. ಇನ್ನು ಕಮ್ಯೂನಿಟಿ ಸೆಂಟರ್ಸಗಳು ಷೆಡ್ಯೂಲ್ ಕ್ಯಾಸ್ಟ ಮತ್ತು ಷೆಡ್ಯೂಲ್ ಟ್ರೈಬ್ಸಗಳವರಿಗೆ ಇರಬೆಕಾಗುತ್ತದೆ.

ಹಳ್ಳಿಗಳಲ್ಲಿ ಒಂದು ಸಾರ್ವಜನಿಕ ಕಾರ್ಯಕ್ರಮ ನಡೆಸುವುದಕ್ಕೆ ಜಾಗ ಬೇಕಾಗುತ್ತದೆ ಅವರ ದೃಷ್ಟಿಯಿಂದ ಕಮ್ಯೂನಿಟಿ ಸೆಂಟರ್ಸಗಳು ಬೇಕಾಗುತ್ತವೆ. ಅವರಿಗೆ ಸೌಲಭ್ಯವನ್ನು ಒದಗಿಸುವುದಕ್ಕೋಸ್ಕರ ಮುಖ್ಯವಾಗಿ ಖರ್ಚು ಮಾಡ ಬೇಕಾಗುತ್ತದೆ. ಆದಕಾರಣ ಜಯಂತಿ ವಿಲೇಜಸ್ ಏನು ಇವೆ ಅವುಗಳನ್ನು ಎಲ್ಲ ಕಡೆಯಲ್ಲಿಯೂ ಮಾಡುತ್ತಿದ್ದೇವೆ. ಈಗಾಗಲೇ ಮೈಸೂರು ರಾಜ್ಯದ ೧೯ ಜಿಲ್ಲೆಗಳಲ್ಲಿ ೧೬೦ ಗ್ರಾಮಗಳಲ್ಲಿ ಈಗಾಗಲೇ ಮಾಡಬೇಕೆಂದು ಡಿಸೈಡ ಮಾಡಿಕೊಂಡಿದ್ದೇವೆ. ಯಾವ ಯಾವ ಗ್ರಾಮದಲ್ಲಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಅದರಲ್ಲಿ ಸೊಂಡೂರು ತಾಲೂಕಿನಲ್ಲಿ ಸುಶೀಲಾ ಗ್ರಾಮದಲ್ಲಿ ಮಾಡಬೇಕೆಂದು ಇಟ್ಟು ಕೊಂಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ನಮ್ಮ ರಾಜ್ಯದಲ್ಲಿ ಜಯಂತಿ ಗ್ರಾಮಗಳು ಎಷ್ಟು ಇವೆ ?

ಶ್ರೀ ಎಂ. ವೈ. ಘೋರ್ಪಡೆ.— ೧೯ ಜಿಲ್ಲೆಗಳಲ್ಲಿ ೧೬೦ ಜಯಂತಿ ಗ್ರಾಮಗಳು ಇವೆ.

ಶ್ರೀ ಕಾಗೋಡು ತಿಮ್ಮಪ್ಪ.— ನಮ್ಮ ಜಿಲ್ಲೆಯ ಎರಡು ತಾಲ್ಲೂಕಿಗೆ 'ಜಯಂತಿ' ಗ್ರಾಮ ಎನ್ನುವ ಹೆಸರನ್ನು ಕೊಟ್ಟಿಲ್ಲ. ಸಾಗರ ತಾಲ್ಲೂಕಿನಲ್ಲಿ ಕೊಟ್ಟಿದ್ದಿರೋ ?

ಶ್ರೀ ಎಂ. ವೈ. ಘೋರ್ಪಡೆ.— ಶಿವಮೊಗ್ಗ ಜಿಲ್ಲೆಯಲ್ಲಿ ೭ ಗ್ರಾಮಗಳಿಗೆ ಈ ಹೆಸರನ್ನು ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಸಾಗರ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಕ್ಕೆ ಈ ಹೆಸರನ್ನು ಕೊಟ್ಟಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ.— ಕೊಡೋಣ; ಏನು ದೊಡ್ಡದು.

ಶ್ರೀ ಕೆ. ಬಿ. ಶಿವಯ್ಯ — ಈಗತಾನೆ ತಾವು ವೆಸ್ಟೆಡ್ ಇಂಟರೆಸ್ಟ್ ಬೇಡ ಎಂದು ಹೇಳುತ್ತಿದ್ರಿ ಅಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.— ನಿಮ್ಮ ಮನೆಗೆ ಬೆಂಕಿ ಹಚ್ಚಿ ಊರಿಗೆ ಬೆಳಕು ಮಾಡಬೇಕು ಎನ್ನುವುದು ಅಲ್ಲ.

ಶ್ರೀ ಎಂ. ವೈ. ಘೋರ್ಪಡೆ.— ಕುದುರೆಮುಖ ಪ್ರಾಜೆಕ್ಟಿನ ರಸ್ತೆಗೋಸ್ಕರ ಕೇಂದ್ರ ಸರ್ಕಾರದವರು ಹಣ ಕೊಡುತ್ತಾ ಇರುವಾಗ, ಅದನ್ನು ನಾವು ಮಾಡುವುದಿಲ್ಲ ಎನ್ನುವುದು ಸರಿಯೇ ? ಕುದುರೆಮುಖ ಪ್ರಾಜೆಕ್ಟಿನ ಬಗ್ಗೆ ಕೈಗಾರಿಕಾ ಸಚಿವರು ಬಹಳ ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿಲ್ಲ. ಅದನ್ನು ಕೈಬಿಟ್ಟಿಲ್ಲ ಎಂದು ಕೂಡ ಅವರು ಹೇಳಿದ್ದಾರೆ. ಟೆಕ್ನಿಕಲ್ ಪಾಯಿಂಟ್ಸ್ ಮೇಲೆ ಚರ್ಚೆ ನಡೆದಿದೆ, ಅದು ತೀರ್ಮಾನವಾಗಿ ಬರುತ್ತದೆ ಎಂದು ಅವರು ಹೇಳಿದ್ದಾರೆ ತಮಗೆ ಏನಾದರೂ ಇದರ ಬಗ್ಗೆ ಅನುಮಾನ ಇದ್ದರೆ, ಕುದುರೆ ಮುಖ ಪ್ರಾಜೆಕ್ಟಿನ ರಸ್ತೆ ಕೆಲಸವನ್ನು ಕೈಬಿಡಬೇಕು ಎನ್ನುವ ವಾದ ಎಷ್ಟರಮಟ್ಟಿಗೆ ಸರಿಯಾದೀತು ? ನಮ್ಮ ರಾಜ್ಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಷುಗರ್ ಫ್ಯಾಕ್ಟರಿಗಳು ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ರಸ್ತೆಯಾಗುವುದನ್ನು ನಾವು ಬೇಡ ಎಂದು ಹೇಳುವುದಿಲ್ಲ.

Shri H. M. CHANNABASAPPA.— Separate Divisions have been formed for the purpose by the P. W. D.

Sri KAGODU THIMMAPPA.— My suggestion is that this work could have been executed with the existing staff.

Sri H. M. CHANNABASAPPA.— The Hon. Member is not correct. It is not possible to get the work done with the existing staff. It may take a long time. The work has to be done in a certain period.
ನಿಮಗೆ ತಿಳಿಯುವಾಗ ನಮಗೆ ಅಷ್ಟು ತಿಳಿಯುವುದಿಲ್ಲವೆ ?

ಶ್ರೀ ಎಚ್. ಎಸ್. ಸಿದ್ದಪ್ಪ.— ಈಗಿರುವ ಡಿಪಾರ್ಟಮೆಂಟ್ ಸ್ಟಾಫ್ ಏನು ಇದೆ, ಅದರ ಕೈಯಲ್ಲಿ ರಸ್ತೆಗಳ ಕೆಲಸವನ್ನು ಹಂತ ಹಂತವಾಗಿ ಮಾಡಿಸುವುದಕ್ಕೆ ಬರುವುದಿಲ್ಲವೆ ? ಏಕದಂ ರಸ್ತೆಯ ಕೆಲಸ ಮಾಡುವುದಕ್ಕೋಸ್ಕರ ಸ್ಪೆಷಲ್ ಸ್ಟಾಫ್ ಅನ್ನು ಕ್ರಿಯೇಟ್ ಮಾಡಿದ್ದೀರಾ ?

ಶ್ರೀ ಎಚ್. ಎಂ ಚೆನ್ನಬಸಪ್ಪ — ಈಗ ಕೆಲವು ಸರ್ಕಲ್‌ಗಳನ್ನು ನಾವು ಮಾಡಿದ್ದೇವೆ ಆ ಸರ್ಕಲ್‌ಗಳ ಕೆಳಗೆ ಒಂದೆರಡು ಡಿವಿಷನ್, ಇವೆ. ಇದಕ್ಕೆ ಪ್ರತ್ಯೇಕ ಡಿವಿಷನ್ ಮಾಡಿ, ಇನ್‌ವೆಸ್ಟಿಗೇಟ್ ಮಾಡಿ ಆ ಕೆಲಸವನ್ನು ಶುರು ಮಾಡಬೇಕಾಗಿ ಬರುತ್ತದೆ. ನಾರ್ಮಲ್ ಡಿವಿಷನ್‌ನಿಂದ ಇದು ಆಗುವುದಿಲ್ಲ ಎನ್ನುತಕ್ಕದ್ದನ್ನು ವಿಚಾರ ಮಾಡಿ ಇದನ್ನು ಮಾಡಿದ್ದೇವೆಯೇ ಹೊರತು ನಮಗೇನಾದರೂ ಹುಚ್ಚು ಹಿಡಿದಿದೆಯೇ ಭುಡ್ಡನ್ನು ತೆಗೆದುಕೊಂಡು ಹೋಗಿ ಡಾಳು ಮಾಡುವುದಕ್ಕೆ. ? ನಮಗೂ ವಿಚಾರ ಮಾಡಿ ಕೆಲಸ ಮಾಡತಕ್ಕಂಥ ಶಕ್ತಿ ಸಾಮರ್ಥ್ಯ ಇದೆ.

ಶ್ರೀ ಎಂ. ವೈ. ಘೋರ್ಪಡೆ.— ಇನ್ನು ಷುಗರ್ ಡೈರೆಕ್ಟೊರೇಟ್ ಮತ್ತು ಫುಡ್ ಕಾರ್ಪೋರೇಷನ್‌ಗೂ ಯಾವ ಒಂದು ಸಂಬಂಧವೂ ಇಲ್ಲ. ಫುಡ್ ಕಾರ್ಪೋರೇಷನ ಇರುವಾಗ ಪುನಃ ಷುಗರ್ ಡೈರೆಕ್ಟೊರೇಟ್ ಏಕೆ ಬೇಕು ಎಂದು ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಹೇಳಿದರು. ಫುಡ್ ಕಾರ್ಪೋರೇಷನ್‌ನ ಉದ್ದೇಶವನ್ನು ನಾನು ಆಗಲೇ ಹೇಳಿದೆ. ಷುಗರ್ ಡೈರೆಕ್ಟೊರೇಟನ್ನು ನಮ್ಮ ರಾಜ್ಯದಲ್ಲಿ ಷುಗರ್ ಇಂಡಸ್ಟ್ರೀಸ್ ಬೆಳೆಸುವ ದೃಷ್ಟಿಯಿಂದ ಮಾಡಿದ್ದೇವೆ. ಆದ್ದರಿಂದ ಅದಕ್ಕೂ ಷುಗರ್ ಡೈರೆಕ್ಟೊರೇಟಿಗೂ ಯಾವ ಸಂಬಂಧವೂ ಇಲ್ಲ. ಷುಗರ್ ಇಂಡಸ್ಟ್ರೀಸ್ ಅನ್ನು ಡೆವಲಪ್ ಮಾಡುವುದು ಬೇಡ ಎನ್ನುವುದಾದರೆ ಅದು ಬೇರೆ ವಿಷಯ. ಇಷ್ಟು ಮಾತ್ರ ಇದರ ಬಗ್ಗೆ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶಾಮಣ್ಣನವರಿಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಅನುಭವ ಇದೆ, ಅವರು ಹಣಕಾಸಿನ ವಿಷಯ ಬಂದಾಗೆಲ್ಲಾ ಮಾತನಾಡಲೇಬೇಕು. ಅವರೂ ಸಹ ಕೆಲವು ವಿಷಯಗಳನ್ನು ಹೇಳಿದರು. ಅದರಲ್ಲಿ ಸೇವಿಂಗ್ಸ್ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದು ಒಂದು. ಆದರೆ ನಾನು ಹೇಳುತ್ತೇನೆ, ಸೇವಿಂಗ್ಸ್ ಅನ್ನು ಖಂಡಿತ ಮಾಡಲಿಕ್ಕೆ ಆಗುತ್ತದೆ ಎಂದು. ಅವರು ಡ್ರಾಟ್ ಕಂಡಿಷನ್ ಬಗ್ಗೆ, ರಸ್ತೆಯ ಕೆಲಸ ಮಾಡಿದ್ದೆಲ್ಲಾ ಹಾಳಾಗಿ ಹೋಗಿದೆ ಎನ್ನುವ ಮಾತನ್ನು ಅವರು ಹೇಳಿದರು.

ನಮ್ಮ ಬಜೆಟ್ಟಿನಲ್ಲಿ ೩೬ ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ. ಇದರಲ್ಲಿ ೨೩-೨೪ ಕೋಟಿ ರೂಪಾಯಿಗಳ ಡಿಫಿಸಿಟ್ ಕಡಿಮೆ ಮಾಡುವಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಬಜೆಟ್ಟಿನಲ್ಲಿ ನಾನು ಏನು ನಿರೀಕ್ಷೆ ಮಾಡಿದ್ದೆವೋ ಅವಕ್ಕಿಂತ ೧೦-೧೫ಕೋಟಿ ರೂಪಾಯಿಗಳ ರಸೀಟ್ ಪ್ರತಿವರ್ಷ ನಮ್ಮ ರಾಜ್ಯಕ್ಕೆ ಬರುತ್ತದೆ ಎನ್ನುವ ಲೆಕ್ಕ ಇದೆ.

ಶ್ರೀ ಕಾಗೋಡು ತಿಮ್ಮಪ್ಪ — ಯಾವ ಮೂಲದಿಂದ ?

ಶ್ರೀ ಎಂ. ವೆ. ಶೆಟ್ಟರ್‌ಡೆ.— ೧೦-೧೫ ಕೋಟಿ ರೂಪಾಯಿಗಳ ಖರ್ಚನ್ನು ಕಡಿಮೆ ಮಾಡಬೇಕು ಎಂದು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಧಾರಾಳವಾಗಿ ಖರ್ಚು ಮಾಡುವಂಥ ಪರಿಸ್ಥಿತಿ ಇಲ್ಲ. ಕೇಂದ್ರ ಸರ್ಕಾರದವರು ಇನ್‌ಫ್ಲೇಷನರಿ ಮೆಷರ್ಸ್ ಕಡಿಮೆ ಮಾಡುವ ದೃಷ್ಟಿಯಿಂದ ಎಕ್ಸಪೆಂಡೀಚರ್ ಮೇಲೆ ಹತೋಟಿ ಇಟ್ಟು ಕೊಳ್ಳಬೇಕು ಎಂದು ಹೇಳಿದ್ದಾರೆ, ಇದರ ಜೊತೆಗೆ ನಾವು ೧೦-೧೫ ಕೋಟಿ ರೂಪಾಯಿಗಳ ಖರ್ಚನ್ನು ಕಡಿಮೆಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ೧೦-೧೫ ಕೋಟಿ ರೂಪಾಯಿಗಳ ಖರ್ಚನ್ನು ನಾವು ಕಡಿಮೆ ಮಾಡುವಾಗ ಅವಶ್ಯಕವಾಗಿರತಕ್ಕ ಕೆಲಸಗಳಿಗೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯೂ ನಮಗೆ ಇದೆ ಇದರ ಬಗ್ಗೆ ನಾನು ಎಷ್ಟೋ ಸಲ ಹೇಳಿದ್ದೇನೆ.

ಮತ್ತೆ ಶಾಮಣ್ಣನವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಯಿಲ್ ಕನ್ಸರ್ವೇಷನ್ ಕೆಲಸ ಮಾಡಿಸ್ಲು ಎಲ್ಲಾ ವೇಸ್ಟ ಆಗಿದೆ ಎಂದು ಹೇಳಿದರು ಆ ರೀತಿ ಅವರು ಹೇಳುವುದಾದರೆ, ಅವರು ಸಾಯಿಲ್ ಕನ್ಸರ್ವೇಷನ್ ಕೆಲಸವನ್ನೆ ನೋಡಿಲ್ಲ ಎಂದು ನಾನು ಹೇಳ ಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಈ ಒಂದು ಕೆಲಸದಿಂದಲೇ, ಅರ್ಧ ಭಾಗ ಜನ ಒಡ್ಡು ಹಾಕುವ ಕೆಲಸ ಪಡೆಯುವುದಕ್ಕೆ ಅವಕಾಶವಾಯಿತು. ೯ ಲಕ್ಷ ಜನಕ್ಕೆ ಇದರಿಂದ ಕೆಲಸ ಸಿಕ್ಕಿದೆ. ೮೫೦ ಎಕರೆಯ ಭೂಮಿಗೆ ಬಂಡ್ ಹಾಕುವ ಕೆಲಸವನ್ನು ಈ ಡ್ರೌಟ್ ಪ್ರೋಗ್ರಾಂ ನಿಂದ ಮಾಡಲಾಗಿದೆ. ಆದ್ದರಿಂದ ಅವರು ಆ ರೀತಿ ಹೇಳುವುದು ಸರಿಯಾದದು ಅಲ್ಲ.

ದಸ್ತೆಯ ಕೆಲಸದ ಬಗ್ಗೆ ಕೆಲವರು ಮಾನ್ಯ ಸದಸ್ಯರು ಹೇಳಿದರು. ಇದರ ಬಗ್ಗೆ ಬಹಳ ಲಘುವಾಗಿ ಮಾತನಾಡಿದ್ದಾರೆ. ಮೊದನೆಯದಾಗಿ, ಮಣ್ಣು ಹಾಕುವುದು, ಆಮೇಲೆ ಮೆಟಲ್ ಸ್ಪ್ರೆಡಿಂಗ್, ಇದನ್ನು ಸ್ವಲ್ಪ ದಕ್ಷತೆಯಿಂದ ಮಾಡಿ ಎಂದು ಹೇಳಿದರೆ ಒಪ್ಪುತ್ತೇನೆ, ಅದು ಬಿಟ್ಟು ಹಾಕಿದ ಮಣ್ಣು ಎಲ್ಲಾ ಮಾಯವಾಗಿದೆ ಎಂದು ಹೇಳಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ — ಮಾನ್ಯ ಜೆನ್ನ ಬಸಪ್ಪನವರು ನಮ್ಮ ಜೊತೆಯಲ್ಲಿ ಬರಲಿ, ಜೂನ್‌ಗಿಂತ ಮುಂಚೆ ದಸ್ತೆಗೆ ಮಣ್ಣು ಹಾಕುವ ಕೆಲಸವನ್ನು ಮಾಡಿದರು, ಆದಮೇಲೆ, ಮಳೆಗಾಲ ಬಂತು; ಚಿಕ್ಕ ಮಗಳಿದ್ದರು, ಹಾಸನ ಮತ್ತು

ಶಿವಮೊಗ್ಗ ಜಿಲ್ಲೆಗಳಲ್ಲಿ ಮಾಡಿರತಕ್ಕ ಕೆಲಸಗಳನ್ನು ಇವರು ಬಂದು ನೋಡಲಿ, ಯಾವ ಸ್ಥಿತಿಗೆ ರಸ್ತೆಗಳು ಬಂದಿವೆ ಎನ್ನುವುದನ್ನು ಅವರೇ ತಿಳಿದುಕೊಳ್ಳಲಿ.

ಶ್ರೀ ಎಚ್. ಎಂ. ಚೆನ್ನಬಸಪ್ಪ.— ರಸ್ತೆಗಳನ್ನು ಮಾಡಬೇಕಾದರೆ ಫಸ್ ಸ್ಟೇಜ್ ಎಂದರೆ, ಡ್ರೈನ್ಸ್ ತೆಗೆದು ಮಣ್ಣು ಹಾಕತಕ್ಕದ್ದು, ಅದಾದಮೇಲೆ, ಅದನ್ನು ಸೆಟಲ್ ಮಾಡಬೇಕು, ಅದಾದಮೇಲೆ ಜೆಲ್ಲಿ ಹಾಕಬೇಕು, ಆದಾದ ಮೇಲೆ ಕಲ್‌ವರ್ಟ್ಸ್ ಕಟ್ಟ ಬೇಕು; ಏಕದಂ ಮಣ್ಣುಹಾಕಿ ಜೆಲ್ಲೆಯನ್ನು ಏಕ ಕಾಲದಲ್ಲಿ ಹಾಕುವುದಕ್ಕೆ ಆಗುವುದಿಲ್ಲ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಬರೀ ಟೀಕೆ ಮಾಡಬೇಕು ಎಂದು ಹೇಳುವುದು ಅಲ್ಲ.

ಶ್ರೀ ಟಿ ಎಂ. ಮಂಜುನಾಥ್.— ತಾವು ಹೇಳತಕ್ಕದ್ದು ಬಯಲು ಸೀಮೆಗೆ ಅನ್ವಯಿಸುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.— ನಾನು ಈ ರೀತಿ ಹೇಳುತ್ತಾ ಇರೋದು ನೀವು ಸುಮ್ಮನೆ ಟೀಕೆ ಮಾಡುತ್ತಾ ಇರೋದು. You must understand that one season should pass before metalling in order to allow the earth to settle.

6-00 P. M.

ಶ್ರೀ ಎಂ. ವೈ. ಘೋರ್ಪಡೆ.— ಮಲೆನಾಡಿನ ಸಮಸ್ಯೆಯನ್ನೂ ಎದುರಿಸ ಬೇಕಾಗುತ್ತದೆ.

Sri. H. M. CHANNABASAPPA.—Even in malnad, before metalling, one season atleast must pass in order to allow for settling.

Sri M. Y. GHORPADE.—We cannot stop road making in Malnad because of hilly track. ಮೆಟಲಿಂಗ ಮತ್ತು ಕನಸಾಲಿಡೇಷನ ಕೆಲಸ ಜೇಗನೆ ಮುಗಿಸಬೇಕು ಎಂದು ಅದಕ್ಕೆ ಬಹಳ ಒಳ್ಳೆಯ ರೀತಿಯಲ್ಲಿ ಕಾರ್ಯಕ್ರಮ ನಡೆದಿದೆ. ಇದರ ಬಗ್ಗೆ ಯಾರಿಗೂ ಅನುಮಾನ ಇರಬೇಕಾಗಿಲ್ಲ. ಶ್ರೀ ಕೃಷ್ಣನವರು ಹೇಳಿದ್ದ ವಿಚಾರ ನಾನು ಪ್ರಸ್ತಾಪ ಮಾಡಿದೆ, ಅವರು ಆಗ ಇದ್ದರೋ ಇಲ್ಲವೋ ತಿಳಿಯದು. ಬೆಲೆಗಳ ಬಗ್ಗೆ ಪ್ರಸ್ತಾಪ ಮಾಡಲಿಲ್ಲವೆಂದು ಶ್ರೀ ಮಂಜು ನಾಥರವರು ಹೇಳಿದರು. ಸಪ್ಲಿಮೆಂಟರಿ ಡಿಮ್ಯಾಂಡಿಗೂ ಬೆಲೆಗಳ ಏರಿಕೆಗೂ ಸಂಬಂಧವಿಲ್ಲ. ಖರ್ಚು ಮಾಡುವಾಗ ಸಪ್ಲಿಮೆಂಟರಿ ಡಿಮ್ಯಾಂಡಿಗೆ ಸೇರಿಸಬೇಕು. ನಮ್ಮ ದೇಶದಲ್ಲಿರುವ ಎಲ್ಲಾ ಮುಖ್ಯ ಸಮಸ್ಯೆಗಳನ್ನೂ ಹೇಳುವುದಕ್ಕೆ ಸಪ್ಲಿಮೆಂಟರಿ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಅವಕಾಶವಿಲ್ಲ. ಆದಕಾರಣ ಆ ಬಗ್ಗೆ ಟೀಕೆ ಮಾಡಿರುವುದಕ್ಕೆ ಉತ್ತರ ಹೇಳಬೇಕಾಗಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಎಲ್ಲಕ್ಕೂ ಬೇಡಿಕೆ ಇದೆ. ಆದರೆ ಜನತೆಗೆ ಅವಶ್ಯಕವಾದ ವಿಚಾರದಲ್ಲಿ ಬೇಡಿಕೆಯಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ತೆಂಗಿನಕಾಯಿಯ ವಿಚಾರ ಅವರು ಹೇಳಿದರು. ಇದಕ್ಕೆ ಸಂಬಂಧಪಟ್ಟಂತೆ ಕೋಕನಟ ಬೋರ್ಡ ಮಾಡಲು ಪ್ರಯತ್ನ ನಡೆದಿದೆ ಎಂದು ಕೆಲವರು ಕೇಳುತ್ತಿದ್ದರು. ಕೋಕನಟ ಬೋರ್ಡ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬೋರ್ಡ ಮುಖ್ಯವಾದರೂ ಕೂಡ ಸಪ್ಲಿಮೆಂಟರಿ ಡಿಮ್ಯಾಂಡಿಗೂ ಅದಕ್ಕೂ ಸಂಬಂಧವಿಲ್ಲ ಈ ಬೋರ್ಡ ಮುಖ್ಯವಾದುದು, ಮಾಡ ಬೇಕು ಎಂದು ವ್ಯವಸಾಯ ಶಾಖೆಯ ಮಂತ್ರಿಗಳನ್ನು ಕೇಳಬೇಕು. ಸಪ್ಲಿಮೆಂಟರಿ ಡಿಮ್ಯಾಂಡಿನಮೇಲೆ ಉತ್ತರ ಕೊಡುವಾಗ ಆ ವಿಚಾರವನ್ನು ಹೆಚ್ಚಾಗಿ ಪ್ರಸ್ತಾಪಿಸುವುದಕ್ಕಾಗುವದಿಲ್ಲ.

ಶ್ರೀ ಹನುಮೇಗೌಡರು ಬೀಜಗಳ ವಿಷಯ ಹೇಳಿದರು. ಕೆಲವು ಕಡೆ ಸರಿಯಾದ ಬಿತ್ತನೆ ಬೀಜ ದೊರೆಯಲಿಲ್ಲ ಎಂದು ಹೇಳಿದರು. ಅದು ನನಗೆ ಗೊತ್ತಿಲ್ಲ. ಸಂಡೂರಿನಲ್ಲಿ ಆ ರೀತಿ ಆಗಿಲ್ಲ. ಅಲ್ಲಿ ಬಿತ್ತಿದ ಬೀಜ ಹುಟ್ಟಿದೆ. ಕೆಲವು ಕಡೆ ತೊಂದರೆಯಾಗಿರಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಸಾವಿರಾರು ರೈತರು ಪಡೆದ ಬಿತ್ತನೆ ಬೀಜ ಮೊಳಕೆಯಾಗದೆ ಹಾಳಾಗಿ ಹೋಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ರೈತರು ಸಂಬಂಧಪಟ್ಟವರಿಗೆ ಅದನ್ನು ತಿಳಿಸ ಬೇಕು. ಸಪ್ಲಿಮೆಂಟರಿ ಡಿಮ್ಯಾಂಡ ಇರುವಾಗ ಅದಕ್ಕೆ ಹೇಗೆ ಉತ್ತರ ಕೊಡಲು ಸಾಧ್ಯ? ಆದರೆ ಒಂದು ವಿಚಾರ ಹೇಳುತ್ತೇನೆ. ದೊಡ್ಡ ಪ್ರಮಾಣದಲ್ಲಿ ಬೀಜದ ಹಂಚಿಕೆ ನಡೆದಿದೆ. ೭ ಕೋಟಿ ರೂಪಾಯಿಗಳನ್ನು ಖಾರೀಫ ಮತ್ತು ರಬಿ ಬೆಳೆಗೆ ಸೇರಿ ಬೀಜದ ಸಲುವಾಗಿ ಕೊಡಲಾಗಿತ್ತು. ಯಾವ ಕಾಲದಲ್ಲೂ ಇಷ್ಟು ಇದರ ಬಗ್ಗೆ ಕಾರ್ಯಕ್ರಮ ನಡೆದಿರಲಿಲ್ಲವೆಂದು ಹೇಳುವರು. ಅದಷ್ಟು ಮಟ್ಟಿಗೆ ಎಲ್ಲಾ ಪಾಯಿಂಟ್ಸಿಗೂ ಸಹ ಉತ್ತರ ಕೊಟ್ಟಿದ್ದೇನೆ. ಇನ್ನೂ ಯಾವುದಾದರೂ ಬಿಟ್ಟು ಹೋಗಿದ್ದರೆ ಕ್ಷಮಿಸುವರೆಂದು ನಂಬಿದ್ದೇನೆ.

Madam SPEAKER.— The question is: ' That the further sums not exceeding the amount shown in the Statement of Demands Nos. 17, 20, 23, 27, 31, 33, 44, 45 and 54, be granted to the Government to defray the charges which will come in course of payment during the financial year ending 31st Day of March 1974"

The motion was adopted.

As ordered by the chairs the motion for Demand for grants adopted by the House are reproduced below:

1. That a further sum not exceeding Rs. 100 be granted out of the Consolidated Fund of the State to defray the charges which will come in course of payment during the

we have a deficit budget and we cannot bear too much pressure.

It is a simple point. If you repay the entire Rs. 30 crores in one year, you are likely to run into over-draft. So far as D. A. to Government servants is concerned, here also, I want to make some important announcement on behalf of the Government. As you know, on 1st April 1973, the State Government took a decision to increase the D. A. in order to achieve Centre-State parity. But because of our difficult ways and means posit on, we decided to defer payment of that amount. Therefore, what we said was. that for all those employees drawing less than Rs. 210, the increase of D. A. from 1st April to 30th September or October-7 months will be paid on 1st November 1973 which happens to be our Rajyothsava day. Those who are drawing less than 210 salary will be paid arrears of DA already sanctioned for seven months seven times the DA; that will be paid on 1st November. The smallest DA being Rs. 5/- for those drawing less than Rs. 85/- $7 \times 5 =$ Rs. 35 is what they will get in lumpsum in November. If the DA happens to be Rs. 7/- for any categeory, $13 \times 7 = 91$ is what they will get. That is the position. So far as employees drawing more than Rs. 210, what will be their seven months arrears will mostly be paid into savings account. For seven months arrears, on 1st November only one month's arrears will be paid in cash and remaining six month's arrears will be paid on their behalf into the post office savings account to be opend in their respective names. That is the position.

After that, there has been subsequently, the Government of India increased the D.A. further from 1st May amounting to Rs. 7, 8, and 10 for the different categories. Again there developed a gap between the D. A. at the Centre and our D.A. in the State. Now. Government has decided to recognise this gap and set it right by agreeing to pay this increase to wipe out this gap which has develop ed from 1st May. In other words, we are in sympathy in principle. Now I am making an announcement only confirming that the Government agrees that the employees

year ending the 31st day of March, 1974 in respect of Demand No. 17, 'Education (excluding Youth services)'.

2. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending 31st day of March, 1974 in respect of Demand No. 20,'Agriculture, Horticulture (excluding Fisheries)'.

3. That a further sum not exceeding Rs. 100 be granted out of the Consolidated Fund of the State to defray the charges which will come in course of payment during the year ending 31st day of March, 1974 in respect of Demand No. 23, 'Co-operation'.

4. That a further sum not exceeding Rs. 300 be granted out of the Consolidated Fund of the State to defray the charges which will come in course of payment during the year ending 31st day of March 1974 in respect of Demand No. 27, 'Miscellaneous Social and Developmental Organisations'.

5. That a further sum not exceeding Rs. 500 be granted out of the Consolidated Fund of the State to defray the charges which will come in course of payment during the year ending 31st day of March, 1974 in respect of Demand No. 31, 'Public work'.

6. That a further sum not exceeding Rs. 300 be granted out of the Consolidated Fund of the State to defray th charges which will come in course of payment during th year ending 31st day of March, 1974 in respect of Deman No. 33, Famine Relief'.

7. That a further sum not exceeding Rs. 700 be gran ed out of the Consolidated Fund of the State to defra the ch arges which will come in course of payment durin the year ending 31st day of March, 1974 in respect o Demand No. 44 'Capital outlay on Industrial and Economi Development.'

8. That a further sum not exceeding Rs. 400 be grant ed out of the Consolidated Fund of the State to defray th charges which will come in course of payment during the

year ending 31st day of March, 1974 in respect of Demand No. 45, 'Capital Outlay on Irrigation etc. (Commercial)'.

9. That a further sum not exceeding Rs. 500 be granted out of the Consolidated Fund of the State to defray the charges which will come in course of payment during the year ending 31st day of March, 1974 in respect of Demand No. 54, 'Advances and Loans'.

Half an Hour Discussion arising out of replies started to Qn. No. 109 amended on 5-9-73.

re: Krishna Dairy Co-operative Society, Hulkoti.

MADAM SPEAKER.— Sriyuths: J. L. Kabade, Kagodu Timmappa and N. Basavaiah to raise half-an-hour discussion on matters arising out of answers to Starred Question No. 58 (109) of 6th list regarding Krishna Dairy Co-operative Society, Hulkoti.

†ಶ್ರೀ ಜೆ. ಎಲ್. ಕಬಾಡಿ.— (ಬಳ್ಳೊಳಿ) ಮಾನ್ಯ ಅಧ್ಯಕ್ಷರೆ, ನಾನು ಹುಲಕೋಟಿಯ ಕೃಷ್ಣ ಸಹಕಾರಿ ಹೈನುಕೇಂದ್ರದ ವಿಚಾರದಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಂತ್ರಿಗಳಿಂದ ಸರಿಯಾದ ಉತ್ತರ ಸಿಕ್ಕದೆ ಹೋದುದರಿಂದ ಅರ್ಧ ಘಂಟೆಯ ಚರ್ಚೆಗೆ ಈ ವಿಷಯದ ಬಗ್ಗೆ ಅವಕಾಶ ಕೇಳಿದ್ದೆ. ಅದಕ್ಕೆ ಅವಕಾಶ ಕೊಟ್ಟಿರುವುದರಿಂದ ಇದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಈ ಸಂಘವನ್ನು ಸ್ಥಾಪಿಸುವುದಕ್ಕೆ ಮುಂಚೆ ೧೯೭೧ ರಲ್ಲಿ ಯಾವುದೋ ಒಂದು ಖಾಸಗಿ ಸಂಸ್ಥೆ ಹಾಲಿನ ಕೇಂದ್ರ ಮಾಡಿತ್ತು. ಅದಕ್ಕೆ ಸ್ವಲ್ಪ ಹಣ ಹಾಕಿತ್ತು. ಆಮೇಲೆ ಕೆಲವು ಸಾಮಾನುಗಳನ್ನು ಕೊಂಡರು. ಅವನ್ನು ಈ ಸಂಘ ಸ್ಥಾಪಿಸಿದ ನಂತರ ಅದಕ್ಕೆ ವರ್ಗ ಮಾಡಿದ್ದಾರೆ. ಇದರ ಬಗ್ಗೆ ಎಸ್ಟಿಮೇಟ ವಗೈರೆ ಮಾಡಲು ಅಧಿಕಾರಿ ಯಾರು ಹೋಗಿದ್ದರು, ಸಾಮಾನುಗಳನ್ನು ಖರೀದಿ ಮಾಡಲು ಎಕ್ಸ್‌ಪರ್ಟುಗಳನ್ನು ಕಳಿಸಿದ್ದರೇ ಎಂಬುದೇ ಮುಖ್ಯ ಪ್ರಶ್ನೆ. ಇದರಲ್ಲಿ ಸರಕಾರದ ಹಣ ಜೇರು ರೂಪದಲ್ಲಿ ಹಾಕಿರುವುದು, ಎನ್ ಸಿ ಡಿ ಸಿ ಹಣ ಹಾಕಿರುವುದು ನೋಡಿದರೆ ಸರಕಾರದ ಹಣ ಪೋಲಾಗುವ ರೀತಿಯಲ್ಲಿ ವರ್ಗ ಮಾಡಿರುವಹಾಗೆ ಸ್ಪಷ್ಟವಾಗಿ ಕಂಡುಬರುತ್ತದೆ. ೧೯೭೧ ರಲ್ಲಿ ಈ ಸಂಘ ಸ್ಥಾಪನೆಯಾದ ನಂತರ ಆಡಿಟ ಮಾಡಿಲ್ಲವೆಂದು ಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದರು. ಸಂಘದ ಲೆಕ್ಕಪತ್ರ ಕೇಳಿದಾಗ ಕೊಟ್ಟ ಲೆಕ್ಕಪತ್ರ ನೋಡಿದರೆ ಹಾಗು ಮಾಹಿತಿ ಕೊಟ್ಟಿರುವುದನ್ನು ನೋಡಿದರೆ ಹಾಲಿನ ಕೇಂದ್ರದ ನೆಸದಲ್ಲಿ ಒಂದು ಸಂಘ ಸ್ಥಾಪಿಸಿ ಸರಕಾರದ ಹಣ ಹೇಗೆ ಜೋಜಬೇಕು ಎಂದು ಪ್ಲಾನ ಮಾಡಿ ಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಗದಗಿನ ಕೆ ಸಿ ಸಿ ಬ್ಯಾಂಕಿನಲ್ಲಿ ಕರೆಂಟ ಅಕೌಂಟಿನಲ್ಲಿ ೩, ೬೮, ೦೮೧-೫೦ ರೂಪಾಯಿ, ಧಾರವಾಡದ ಕೆ ಸಿ ಸಿ ಬ್ಯಾಂಕಿನ ಎಸ್ ಬಿ ಅಕೌಂಟಿನಲ್ಲಿ ೮೧೫೦೦ ರೂಪಾಯಿ

ಇಟ್ಟಿದ್ದು ರಿಸರ್ವ ಬ್ಯಾಂಕಿನವರು ಆಡಿಟ್ ಮಾಡಲು ಬಂದಾಗ ಈ ಹಣ ತೋರಿಸಿ ನಂತರ ಅದನ್ನು ಮತ್ತೊಂದು ಬ್ಯಾಂಕಿಗೆ ಜಮೆ ಮಾಡುವುದು ಹೀಗೆ ಮಾಡಿ ಈ ಸಂಘ ಸ್ಥಾಪಿಸಿ ಕೃಷ್ಣ ಡೈರಿಯ ಹೆಸರಿನಲ್ಲಿ ಹಣ ದುರ್ವಿನಿಯೋಗ ಮಾಡಿದ್ದಾರೆಂಬುದು ಸ್ಪಷ್ಟವಾಗಿದೆ. ಇದರಲ್ಲಾಗಿರುವ ಅವ್ಯವಹಾರ ನೋಡಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಹಕಾರ ಸಂಘದಲ್ಲಿ ಪೆರು ಬಂಡವಾಳ ಒಂದು ಲಕ್ಷ ೨ ಸಾವಿರ ರೂಪಾಯಿ ಹಾಕಿದ್ದಾರೆ, ಎಂಟ್ರೆನ್ಸ್ ಫೀ ೭೫೦ ರೂಪಾಯಿ ಆಗಿದೆ ಎಂದು ತಿಳಿಸಿದ್ದಾರೆ ಪ್ರತಿಯೊಬ್ಬ ಷೇರ ಹೋಲ್ಡರೂ ಒಂದು ರೂಪಾಯಿನ ಪ್ರಕಾರ ಎಂಟ್ರೆನ್ಸ್ ಫೀ ಕೊಡಬೇಕು. ಒಂದು ಲಕ್ಷದ ೨ ಸಾವಿರ ರೂಪಾಯಿಗಳ ಷೇರು ಬಂಡವಾಳ ವಿರುವಾಗ ಎಂಟ್ರೆನ್ಸ್ ಫೀ ೭೫೦ ರೂಪಾಯಿ ಮಾತ್ರ ವಸೂಲಾಗಿದೆ. ಏಕೆ ಹೀಗಾಗಿದೆ ಎಂಬುದನ್ನು ಮಂತ್ರಿಗಳು ಸ್ಪಷ್ಟಪಡಿಸಬೇಕೆಂದು ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅದಲ್ಲದೆ ಅಲ್ಲಿನ ಲೆಕ್ಕಪತ್ರಗಳನ್ನು ಇಲ್ಲಿಯವರೆಗೂ ಆಡಿಟ್ ಮಾಡದಿರುವುದಕ್ಕೆ ಕಾರಣಗಳೇನು? ನಾನು ಏತಕ್ಕೆ ಆಡಿಟ್ಟಾಗಲಿಲ್ಲ ಎಂಬುದಕ್ಕೆ ಕಾರಣಗಳನ್ನು ತಿಳಿಸ ಬೇಕೆಂದು ಕೇಳಿದ್ದೆ. ಒಂದು ಸಂಸ್ಥೆಯ ಲೆಕ್ಕಪತ್ರಗಳು ಮೂರು ವರ್ಷಗಳಾದರೂ ಹೀಗೆ ಆಡಿಟ್ಟಿಲ್ಲದೆ ಬಿಡಬಹುದೇ? ಹಾಗಾದರೆ ಆ ಜಿಲ್ಲೆಯಲ್ಲಿ ಕೆಲಸ ಮಾಡತಕ್ಕ ಅಸಿಸ್ಟಂಟ್ ರಿಜಿಸ್ಟ್ರಾರೂ ಡೆಪ್ಯುಟಿ ರಿಜಿಸ್ಟ್ರರ್ ಅವರೂ ಮತ್ತು ಜಾಯಿಂಟ ರಿಜಿಷ್ಟ್ರಾರ್ ಅವರು ಏನು ಉದ್ಯೋಗ ಮಾಡುತ್ತಾರೆ? ಈಗಲಾದರೂ ಕೂಡ ಸರ್ಕಾರದವರು ಆ ಹಾಲಿನ ಕೇಂದ್ರದ ಲೆಕ್ಕಪತ್ರಗಳನ್ನು ಕೂಡಲೇ ಆಡಿಟ್ ಮಾಡಬೇಕೆಂದು ಸರ್ಕಾರದವರು ನಿರ್ದೇಶನ ನೀಡಬೇಕೆಂದು ಒತ್ತಾಯ ಮಾಡುತ್ತೇನೆ. ರಿಜರ್ವ ಬ್ಯಾಂಕಿನಿಂದ ಶಿಬ್ಬಂದಿಯವರನ್ನು ಕಳುಹಿಸಿದರೆ ಅವರು ಒಂದು ದಿನದಲ್ಲಿ ಹಾಲಿನ ಕೇಂದ್ರದ ವ್ಯವಹಾರದಲ್ಲಿ ಯಾರು ಯಾರು ಸೇರಿದ್ದಾರೆ, ಅದರ -ಸ್ಥಿತಿಗತಿಗಳೇನೆಂಬುದನ್ನು ವರದಿ ಮಾಡಬಲ್ಲರು ಆಗಲಾದರೂ ಈ ವ್ಯವಹಾರದಲ್ಲಿ ಈಗಿನ ಕೃಷಿಮಂತ್ರಿಗಳು ಅವ್ಯವಹಾರ ಮಾಡಿದ್ದಾರೆಂಬುದು ಖಡಾಖಂಡಿತವಾಗಿ ಬೆಳಕಿಗೆ ಬರುತ್ತದೆಂದು ನಾನು ನಿಶ್ಚಯವಾಗಿ ಈ ಸದನದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಹಿಂದೆಯೇ ರಿಜರ್ವ ಬ್ಯಾಂಕಿನವರು ಇವರು ಅಲ್ಲಿ ನಡೆಸಿರತಕ್ಕ ಅವ್ಯವಹಾರಗಳನ್ನೆಲ್ಲಾ ಕಂಡು ಹಿಡಿಯುವುದಕ್ಕೆ ಸಾಧ್ಯವಿತ್ತು. ಆದರೆ ಅಲ್ಲಿಗೆ ಇನ್‌ಸ್ಪೆಕ್ಷನ್ನಿಗೆ ಹೋದ ಶಿಬ್ಬಂದಿ ವರ್ಗಕ್ಕೆಲ್ಲಾ ಇವರು ಒಳ್ಳೇ ಊಟ ತಿಂಡಿಗಳನ್ನು ಹಾಕಿ ಅವರು ಬತ್ತ ಹೋದ ಕೂಡಲೆ ಒಂದು ಕಡೆ ಇನ್‌ವೆಸ್ಟ ಮಾಡಿದ್ದ ಹಣವನ್ನು ಬೇರೊಂದು ಬ್ಯಾಂಕಿಗೆ ಹಾಕಿ ಅಲ್ಲಿ ಏನೇನೋ ಅಕ್ರಮಗಳನ್ನು ನಡೆಸಿದ್ದಾರೆ. ಆದರೆ ಹೀಗೆ ಹಣವನ್ನು ದುರ್ವಿನಿಯೋಗ ಮಾಡುವುದರಲ್ಲಿ ನಮ್ಮ ಕೃಷಿಮಂತ್ರಿಗಳದು ಎತ್ತಿದ ಕೈ; ಮತ್ತು ಪಳಗಿದ ಕೈ ಸಹಾ ಆಗಿದೆ. ಆ ದಿವಸ ಸರ್ಕಾರದವರು ನಾನು ಕೇಳಿದ್ದ ಪ್ರಶ್ನೆಗೆ ಉತ್ತರವಾಗಿ ಆ ಹುಲಕೋಟಿ ಹಾಲಿನ ಕೇಂದ್ರದ ಚೀಫ್ ಪ್ರಮೋಟರ್ ಯಾರೆಂದು

ಕೇಳಿದ್ದಕ್ಕೆ ಬಿಂಕದಕಟ್ಟಿ ಎಂ. ವಿ. ಮೂಲಿಮನೆ ಅವರೆಂದು ಏನು ಹೇಳಿದ್ದಾರೆ ಅವರು ನಮ್ಮ ಕೃಷಿ ಮಂತ್ರಿಗಳಿಗೆ ತೀರಾ ಹತ್ತಿರದ ಸಂಬಂಧಿಗಳು. ಇನ್ನು ಆ ಸಂಸ್ಥೆಯಲ್ಲಿ ಡೈರೆಕ್ಟರುಗಳು, ಇತರೇ ಅಧಿಕಾರಿಗಳಾಗಿರತಕ್ಕವರೆಲಾ ಇವರ ಬಣ್ಣನ ಅಥವಾ ತಮ್ಮನ ಮಕ್ಕಳು ಹೀಗೆ ಒಂದೇ ಮನೆತನದವರು ಅದರಲ್ಲಿ ಸೇರಿಕೊಂಡು ಸಹಕಾರ ಸಂಸ್ಥೆ ಎಂಬ ಈ ಒಂದು ಸೋಗನ್ನು ಹಾಕಿಕೊಂಡು ಸರ್ಕಾರದಿಂದ ಹಣ ಎತ್ತಲಿಕ್ಕೆ ಈ ನಾಟಕ ಆಡಿದ್ದಾರೆಂದು ಹೇಳುತ್ತೇನೆ. ಈ ದಿವಸ ಈ ಸರ್ಕಾರ ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೇಳಿಕೊಳ್ಳುತ್ತ ಬಡವರನ್ನು ಇನ್ನೂ ಬಡವರನ್ನಾಗಿಯೂ ಮತ್ತು ಶ್ರೀಮಂತರನ್ನು ಮತ್ತಿಷ್ಟು ಶ್ರೀಮಂತರನ್ನಾಗಿಯೂ ಮಾಡುತ್ತಿದೆ. ಈ ದಿವಸ ಆ ಸಂಸ್ಥೆಯಲ್ಲಿ ಒಂದೇ ಮನೆತನದವರು ಒಂದೇ ಜಾತಿಯವರು ಸರ್ಕಾರದಿಂದ ಹಣವನ್ನೆತ್ತಿ ಅನ್ಯವಹಾರ ನಡೆಸುತ್ತಿದ್ದರೆ ಬಡವರು ಹೇಗೆ ಉದ್ಧಾರ ವಾಗುತ್ತಾರೆ? ಆದುದರಿಂದ ಈ ಸರ್ಕಾರಕ್ಕೆ ನಿಜವಾಗಿಯೂ ಬಡವರಿಗೆ ಉದ್ಧಾರ ಮಾಡಬೇಕೆಂಬ ಆಸೆ ಇದ್ದರೆ ಏನು ಈ ದಿವಸ ಹುಲಕೋಟಿಯ ಹಾಲಿನ ಸಹಕಾರ ಸಂಸ್ಥೆ ಕೇವಲ ಒಂದು ಮನೆತನದವರ ಹಾಗೂ ಒಂದು ಜಾತಿಯವರ ಕೈಲಿದೆ ಅದನ್ನು ಕಿತ್ತುಹಾಕಿ ಅದರಲ್ಲಿ ಬೇರೆ ಎಲ್ಲ ಜಾತಿಗಳವರೂ ಇರುವಂತೆ ಷೇರುಗಳನ್ನು ಪಡೆದು ಅಲ್ಲಿಯ ಅವ್ಯವಹಾರವನ್ನು ಕೂಡಲೆ ತಪ್ಪಿಸಬೇಕೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನನ್ನ ಮುಖ್ಯ ಆಪಾದನೆ ಇಷ್ಟೇ : ಆ ಧಾರವಾಡ ಜಿಲ್ಲೆಯ ಹುಲಕೋಟಿಯಲ್ಲಿ ಈ ದಿವಸ ರಿಜಿಷ್ಟರಾಗಿರತಕ್ಕ ಏನು ಒಂದು ಹಾಲಿನ ಸಹಕಾರಿ ಸಂಸ್ಥೆ ಇದೆ ಅದು ಹಾಗೆ ರಿಜಿಷ್ಟರಾಗುವುದಕ್ಕೆ ಮುನ್ನ ಅಲ್ಲಿ ಒಂದು ಖಾಸಗಿ ಹಾಲಿನ ಡೈರಿಯನ್ನು ನಮ್ಮ ಕೃಷಿ ಸಚಿವರು ಒಬ್ಬ ಮುಖ್ಯ ಪಾಲುದಾರರಾಗಿ ನಡೆಸುತ್ತಿದ್ದರು. ಆ ಸಂಸ್ಥೆಯಲ್ಲಿ ತುಂಬಾ ಅವ್ಯವಹಾರಗಳು ನಡೆದು ಅದು ನಷ್ಟದಲ್ಲಿ ಕೆಲಸಮಾಡುತ್ತಿತ್ತು. ಆ ನಷ್ಟವನ್ನು ಹೇಗೆ ತುಂಬಿಕೊಳ್ಳಬೇಕೆಂಬ ಆಲೋಚನೆಯನ್ನು ಆಗ್ಗೆ ನಮ್ಮ ಕೃಷಿ ಸಚಿವರಾಗಿರತಕ್ಕವರು ಮಾಡುತ್ತಿದ್ದರು. ಆಗ ಅವರು ಈ ಒಂದು ತಂತ್ರವನ್ನು ಹುಡುಕಿ ಆ ಹಿಂದೆ ಖಾಸಗಿಯಾಗಿದ್ದ ಹಾಲಿನ ಕೇಂದ್ರವನ್ನು ಒಂದು ಸಹಕಾರಿ ಸಂಸ್ಥೆಯನ್ನಾಗಿ ಪರಿವರ್ತಿಸಿ ಅವನ್ನು ರಿಜಿಸ್ಟರ ಮಾಡಿಸಿ ಅದಕ್ಕೆ ಹುಲಕೋಟಿ ಕೃಷ್ಣ ಸಹಕಾರಿ ಹೈನು ಕೇಂದ್ರ ಎಂಬುದಾಗಿ ಹೆಸರಿಟ್ಟರು. ಆದರೆ ಆಲ್ಲಿ ಹಿಂದೆ ಇದ್ದ ಖಾಸಗೀ ಕೃಷ್ಣಾ ಡೈರಿಯನ್ನು ಒಂದು ಸಹಕಾರ ಕೇಂದ್ರವನ್ನಾಗಿ ಪರಿವರ್ತನೆ ಮಾಡತಕ್ಕ ಕಾಲದಲ್ಲಿ ಹಿಂದೆ ಅಲ್ಲಿದ್ದ ಕೆಲಸಕ್ಕೆ ಬಾರದ ಹಳೇ ಮಷಿನರಿಗಳೇನಿದ್ದವು ಅವುಗಳನ್ನು ಈ ಸಹಕಾರ ಸಂಸ್ಥೆಗೆ ಕೊಳ್ಳತಕ್ಕ ಅಗತ್ಯವೊಂದನ್ನು ತಂದು ಆ ಸಾಮಾನುಗಳನ್ನು ಬೆಲೆ ಕಟ್ಟತಕ್ಕ ಸಂದರ್ಭದಲ್ಲಿ ನಮ್ಮ ಕೃಷಿ ಸಚಿವರಾಗಿರತಕ್ಕ ಶ್ರೀ ಕೆ. ಎಚ್. ಪಾಟೀಲರವರು ತಮ್ಮ ಪ್ರಭಾವವನ್ನು ಆ ವ್ಯವಹಾರ

ದಲ್ಲಿ ಬೀರಿದ್ದಾರೆ. ಅದರಲ್ಲಿ ಇವರ ಹಸ್ತಕ್ಷೇಪವಿದೆ. ಆದುದರಿಂದಲೇ ಆ ಸಾಮಾನು ಗಳ ಬೆಲೆಯನ್ನು ಒಂದಕ್ಕೆರಡರಷ್ಟು ಕಟ್ಟಿ ಅವುಗಳನ್ನು ಈ ಸಹಕಾರಿ ಸಂಸ್ಥೆಗೆ ವರ್ಗಾಯಿಸಿ ತನ್ಮೂಲಕ ಅಲ್ಲಿ ಉಂಟಾಗಿದ್ದ ನಷ್ಟವನ್ನು ಸರಿಗಟ್ಟಿಕೊಂಡಿದ್ದಾರೆ. ಇದು ತೀರಾ ಅಕ್ರಮ, ಅಧಿಕಾರದ ದುರುಪಯೋಗ.

ಶ್ರೀ ಕೆ ಎಚ್. ಪಾಟೀಲ (ಅರಣ್ಯ ಮತ್ತು ವ್ಯವಸಾಯ ಸಚಿವರು).—ನಾನು ಈ ಸದನಕ್ಕೆ ಒಬ್ಬ ಸದಸ್ಯನಾಗಿದೆ ಇದ್ದಾಗ ಮತ್ತು ಇಲ್ಲಿ ಮಂತ್ರಿಯಾಗುವುದಕ್ಕೂ ಮೊದಲು ಏನು ಕೆಲಸ ಕಾರ್ಯಗಳಾಗಿವೆ ಅವುಗಳ ಬಗ್ಗೆ ನಾನು ಆ ಕಾರ್ಯಗಳನ್ನು ಮಂತ್ರಿಯಾಗಿದ್ದುಕೊಂಡು ಮಾಡಿದ್ದೇನೆ ಎನ್ನತಕ್ಕ ಆಪಾದನೆಗಳಲ್ಲಿ ಸತ್ಯಾಂಶವಿಲ್ಲದಿದ್ದರೆ ಇರಲಿ, ಅದರಲ್ಲಿ ಮಾನವೀಯತೆಯಾದರೂ ಇರುವುದು ಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಆ ಹುಲಕೋಟಿಯಲ್ಲಿ ಶ್ರೀ ಕೆ. ಎಚ್. ಪಾಟೀಲರು ಒಂದು ಖಾಸಗೀ ಕೃಷ್ಣ ಹಾಲಿನ ಡೈರಿಯನ್ನು ನಡೆಸುತ್ತಿದ್ದರೆಂಬುದು ಸುಳ್ಳೇ? ಅದು ತುಂಬಾ ನಷ್ಟ ಹೊಂದಿ ಇನ್ನೇನು ಅದನ್ನು ಮುಚ್ಚಬೇಕೆಂಬ ಪರಿಸ್ಥಿತಿಯುಂಟಾಗಿರಲಿಲ್ಲವೇ? ಅಂಥ ವೇಳೆಯಲ್ಲಿ ಅದನ್ನು ಇವರು ಒಂದು ಸಹಕಾರ ಸಂಸ್ಥೆ ಎಂದು ಪರಿವರ್ತನೆ ಮಾಡಿ ಆದರಲ್ಲಿದ್ದ ಹಳೇ ಯಂತ್ರ ಸಾಮಗ್ರಿಗಳನ್ನು ಒಂದಕ್ಕೆರಡರಂತೆ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಆ ಸಾಮಾನುಗಳನ್ನು ಲಕ್ಷಲಂ ಸಾವಿರ ರೂಪಾಯಿಗಳಿಗೆ ಕೊಳ್ಳುವಂತೆ ಮಾಡಲಿಲ್ಲವೇ? ಈ ದಿವಸ ಆ ಸಾಮಾನ ಗಳನ್ನು ಅಷ್ಟು ಬೆಲೆ ಬಾಳುತ್ತವೆಯೇ? ಹಾಗೆ ಬೆಲೆ ಬಾರದ ಸಾಮಾನುಗಳನ್ನು ಲಾಭಕ್ಕೆ ಮಾರಾಟ ಮಾಡಿಸುವುದರಲ್ಲಿ ಇವರ ಹಸ್ತಕ್ಷೇಪವಿಲ್ಲದೆ ಅದು ಹಾಗೆ ನಡೆಯುವುದಕ್ಕೆ ಸಾಧ್ಯವೇ? ಸರ್ಕಾರದವರು ಆ ಸಾಮಾನುಗಳನ್ನು ಕೊಳ್ಳತಕ್ಕ ಸಂದರ್ಭದಲ್ಲಿ ಕೆಲವು ಆ ವಿಚಾರದಲ್ಲಿ ಅರಿತ ತಜ್ಞರನ್ನು ಕಳುಹಿಸಿದ್ದರೂ ಅವರ ಮೇಲೆ ಮಾನ್ಯ ಸಚಿವರು ತಮ್ಮ ಪ್ರಭಾವ ಬೀರಿ ಅದರಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಹಾಗೆ ಮಾಡುವುದಕ್ಕೆ ಬದಲು ಆ ಸಾಮಾನುಗಳನ್ನು ಒಂದು ಬಹಿರಂಗ ಹರಾಜ ನಡೆಸಿ ಅದರಲ್ಲಿ ಏಕೆ ಇವರು ಬಿಡ್‌ಮಾಡಿ ಕೊಳ್ಳಬಾರದಾಗಿತ್ತು ಎಂದು ಪ್ರಶ್ನೆ ಮಾಡುತ್ತೇನೆ. ಇದು ಅಧಿಕಾರದ ದುರುಪಯೋಗವಲ್ಲದೆ ಮತ್ತೇನು? ಈ ಬಗ್ಗೆ ಸೂಕ್ತ ವಿಚಾರಗಳನ್ನು ನಡೆಸಬೇಕೆಂದು ಸತ್ಯಾಂಶವನ್ನು ಹೊರಗೆಡವಬೇಕೆಂದೂ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ಅಂದಾಜ ಸಮಿತಿಯ ಸದಸ್ಯರಲ್ಲಿ ಒಬ್ಬನಾಗಿ ಆ ಹುಲಕೋಟಿಗೆ ಹೋಗಿದ್ದಾಗ ಈ ಹಾಲಿನ ಡೈರಿಯನ್ನೂ ಸಹಾ ನೋಡಿಕೊಂಡು ಬಂದೆ. ಅಲ್ಲಿ ನಿಜವಾಗಿಯೂ ಆ ಹರಡುತ್ತಿರುವ ಕೈಗಾರಿಕೆಗಳನ್ನು ಅಲ್ಲಿ ನಡೆಯತಕ್ಕ ಚಟುವಟಿಕೆಗಳನ್ನು ನೋಡಿದರೆ ಮನಸ್ಸಿಗೆ ಬಹಳ ಆನಂದವಾಗುತ್ತದೆ. ಆದರೆ ಅದನ್ನೆಲಾ ನೋಡಿಕೊಂಡು ಈ ಕೃಷ್ಣ ಹಾಲಿನ ಸಹಕಾರಿ ಡೈರಿಯ ಹತ್ತಿರಕ್ಕೆ ಬಂದಾಗ ಬಿಕೋ ಅನಿಸುತ್ತಿದೆ. ಅದೇನೋ ಗಾದೆ ಹೇಳುತ್ತಾರಲ್ಲ ರೂಪಿಲ್ಲ ಚೆಲುವಿಲ್ಲದಿದ್ದರೂ

ಸುಂದರಂ ಅಯ್ಯಂಗಾರ ಅನ್ನುವಂತೆಯೂ ದುಡ್ಡಿಲ್ಲ ಕಾಸಿಲ್ಲದಿದ್ದರೂ ಸಂಪತ್ತಯ್ಯಂಗಾರ ಅನ್ನುವಂತೆ ಈ ಡೈರಿಯಲ್ಲಿ ಹಾಲಿನ ವಾಸನೆ ಸಹಿತ ಇಲ್ಲದಿದ್ದರೂ ಇದನ್ನು ಒಂದು ಹಾಲಿನ ಸಹಕಾರ ಸಂಸ್ಥೆ ಎಂದು ಕರೆಯಲಾಗಿದೆ. ಇಲ್ಲಿ ಹಾಲೂ ಇಲ್ಲ ಏನೂ ಇಲ್ಲ. ಅಲ್ಲಿ ಕತ್ತೆ ಸಹಿತ ತಿರುಗಾಡುತ್ತಿಲ್ಲ. ಸಾಮಾನ್ಯವಾಗಿ ಖಾಸಗಿ ಜನರು ಮಾಡತಕ್ಕ ವ್ಯವಹಾರಗಳು ಲಾಭದಲ್ಲಿ ನಡೆದರೆ ಸರ್ಕಾರಿ ತರ್ಫಿನಿಂದ ನಡೆಯತಕ್ಕವು ನಷ್ಟದಲ್ಲಿ ನಡೆಯುತ್ತವೆಂಬ ಒಂದು ಭಾವನೆ ಜನರಲ್ಲಿತ್ತು. ಆದರೆ ಅಲ್ಲಿ ಈ ಕೃಷಿಸಚಿವರು ಅಧ್ಯಕ್ಷರಾಗಿ ಇಲ್ಲವೇ ಮುಖ್ಯ ಪಾಲುದಾರರಾಗಿದ್ದಾಗ ನಡೆಸಿದ ಅವ್ಯವಹಾರಗಳ ದೆಸೆಯಿಂದ ಭಾರಿ ನಷ್ಟಕ್ಕೆ ಆ ಹಿಂದಿನ ಕೃಷ್ಣ ಹಾಲಿನ ಡೈರಿ ತುತ್ತಾಗಿತ್ತು. ಅದನ್ನು ಇವರು ಇಲ್ಲಿ ಮಂತ್ರಿಗಳಾದ ಮೇಲೆ ತಮ್ಮ ಪ್ರಭಾವ ಬೀರಿ ಸರ್ಕಾರಕ್ಕೆ ನಷ್ಟ ಮಾಡಿ ಅದಕ್ಕೆ ಕಡಿಮೆ ಬೆಲೆಯ ಸಾಮಾನುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿಸಿ ಆ ಖಾಸಗಿ ಸಂಸ್ಥೆಯ ನಷ್ಟವನ್ನು ಭರ್ತಿ ಮಾಡಿಕೊಂಡಿದ್ದಾರೆ. ಇದು ಅಧಿಕಾರದ ದುರುಪಯೋಗ ಎಂಬುದರಲ್ಲಿ ಏನೂ ಸಂಶಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ (ಅರಣ್ಯ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ನನ್ನ ಹೆಸರನ್ನೆತ್ತಿ ವೈಯಕ್ತಿಕವಾದ ಆಪಾದನೆಗಳನ್ನು ನನ್ನ ಬಗ್ಗೆ ಮಾಡಿರುವುದರಿಂದ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ.

ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ಅನೇಕರಿಗೆ ಈ ಸಹಕಾರ ಸಂಘದ ವಿಚಾರಗಳೇನೇ ಬರಲಿ ಈ ಕೃಷಿಸಚಿವರ ಹೆಸರನ್ನು ಎತ್ತುವುದೊಂದು ವಾಡಿಕೆಯಾಗಿ ಒಂದಿದೆ.

ಅವರು ಎತ್ತಿದ ಪಾಯಂಟಿಗೆ ನಾನು ಉತ್ತರ ಹೇಳುತ್ತೇನೆ. ನಾನು ಕೃಷಿಸಚಿವನಾಗುವುದಕ್ಕೆ ಮುಂಚೆಯೇ ಆ ಸಂಘಗಳು ಹುಟ್ಟಿದ್ದವು. ಈ ವಿಚಾರವನ್ನು ಹೇಳುವಾಗ ಮಾನ್ಯ ಸದಸ್ಯರು ಅವರ ಆತ್ಮವನ್ನು ಮುಚ್ಚಿಕೊಂಡು ಸರಿಯಾಗಿ ಪರಿಶೀಲನೆಮಾಡಿ ಹೇಳಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಆ ಡೈರಿಯಲ್ಲಿ ಬರೀ ದನಗಳನ್ನು ಸಾಕುವುದು ಒಂದೇ ಕೆಲಸವೆಂದು ಸದಸ್ಯರು ಪರಿಗಣಿಸಿದ್ದರೆ ತಪ್ಪು. ಇಡೀ ಧಾರವಾಡ ಜಿಲ್ಲೆಯಲ್ಲಿ ಒಂದು ದೊಡ್ಡ ಡೈರಿ ಆಗಬೇಕು ಅಲ್ಲಿರತಕ್ಕ ಹಾಲಿನ ತೊಂದರೆ ಬಗೆಹರಿಯಬೇಕು ಎಂಬ ಉದ್ದೇಶದಿಂದ ಅದನ್ನು ಮಾಡಿದ್ದರು. ಹಿಂದೆ ರಾಜ್ಯಪಾಲರ ಆಡಳಿತವಿದ್ದಾಗ್ಗೆ ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದರು. ಈ ಸಂಸ್ಥೆ ಟೆಂಡರ ಕರೆದಿದೆ. ಟೆಂಡರ ಕರೆದನಂತರ ಮಷಿನರಿಯ ಬಗ್ಗೆ ಡೀಲ ಮಾಡಿದರೇ ಹೊರತು ನಾನು ಮಂತ್ರಿಯಾದ ಮೇಲೆ ಇದನ್ನು ಮಾಡಲಿಲ್ಲ. ನಾನು ಲೆಜಸ್ಲೆಟಿವ್ ಅಸೆಂಬ್ಲಿ ಸದಸ್ಯನಾಗಿದ್ದಾಗಲಗೂ ಕೂಡ ಇದರ ಬಗ್ಗೆ ಯಾವುದೇ ರೀತಿಯ ಡೀಲನ್ನು ಮಾಡಲಿಲ್ಲ. ಆ ಡೀಲಿಗೆ ನಾನು ಒಳಪಟ್ಟಿಲ್ಲ. ನಾನು ಯಾವ ಸಾಮಾನನ್ನು

ಕೊಳ್ಳುವ ಹಾಗೆ ಮಾಡಲಿಲ್ಲ. ಕೃಷ್ಣಾ ಡೈರಿಯಲ್ಲಿ ನಾನೂ ಒಬ್ಬ ಪಾಲುಗಾರನಾಗಿದ್ದುದು ನಿಜ. ನಾನು ಅಲ್ಲಿಗೆ ಸಚಿವನಾಗುವ ಪೂರ್ವದಲ್ಲಿಯೇ ನನ್ನ ಪಾಲುಗಾರಿಕೆ ವಿಷಯವನ್ನು ಅಂತ್ಯಮಾಡಿದೆ. ಸಂಘ ನಂತರ ಹಾನಿಯಾಗುತ್ತಾ ಬಂದು ದಿವಾಳಿಗೆ ಬಂತು ಎಂಬುದಾಗಿ ಹೇಳಿದ್ದು ಸೂಕ್ತವಲ್ಲ. ಒಟ್ಟಿನಲ್ಲಿ ಅಲ್ಲಿ ಯಾವ ಮಷಿನರಿಯನ್ನು ಎರೆಕ್ಟ್ ಮಾಡಲಿಲ್ಲ. ಹಿಂದುಸ್ಥಾನದಲ್ಲಿ ಕೇವಲ ಮೂರು ಕಡೆಗಳಲ್ಲಿ ಈ ಡೈರಿ ಎಕ್ವಿಪಮೆಂಟ್ಸ್ ಸಿಗುತ್ತಿವೆ. ಅಲ್ಲಿ ೨–೩ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸವಿಸ್ತಾರವಾದ ಹೊಸ ಮೆಷನರಿಗಳನ್ನು ಸೊಸೈಟಿಯವರು ಡೈರಿಗೆ ತೆಗೆದುಕೊಂಡಿದ್ದಾರೆ. ಅದನ್ನು ಮಾನ್ಯ ಸದಸ್ಯರಲ್ಲಿ ಕೆಲವರು ನೋಡಿಯೂ ಇದ್ದಾರೆ. ಅವನ್ನು ನೋಡಿಯೂ ಕೂಡ ಈ ರೀತಿಯಾಗಿ ಹೇಳುವುದು ಸೂಕ್ತವಲ್ಲ. ಸಾಧುವಾದುದಲ್ಲ. ಪದೇ ಪದೇ ನನ್ನ ಹೆಸರಿನಲ್ಲಿ ಇಂತಹ ವಿಚಾರಗಳನ್ನು ಇಲ್ಲಿ ತರುತ್ತಾ ಇರುವುದರಿಂದ ನಾನು ಬಹಳವಾಗಿ ವಿಷಾದಿಸುತ್ತೇನೆ. ಸಹಕಾರ ಸಂಘಗಳ ವಿಷಯ ಬಂದಾಗಲೆಲ್ಲ ನನ್ನ ಹೆಸರನ್ನು ತಂದು ನನ್ನ ಮನಸ್ಸನ್ನು ಬಹಳವಾಗಿ ನೋಯಿಸುತ್ತಿದ್ದಾರೆ. ಅಪಯಶಸ್ಸನ್ನು ತರಬೇಕೆಂದು ಇವರು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಅದು ಖಂಡಿತ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಒಂದು ವ್ಯವಹಾರದಲ್ಲಿ ಸಂಬಂಧಪಟ್ಟವರಾಗಿರುವುದರಿಂದ, ಅವರು ಮಂತ್ರಿಯಾದ ಮೇಲೆ ಈ ಮೆಷನರಿಯನ್ನು ಪರ್ಚೇಜ ಮಾಡಲಿಲ್ಲವೆಂದಾದರೂ ಹೇಳಲಿ.

ಅಧ್ಯಕ್ಷರು.—ಅವರು ಆ ರೀತಿಯಾಗಿಲ್ಲವೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಸುಮಾರು ೩–೪ ಲಕ್ಷ ರೂಪಾಯಿಗಳಷ್ಟು ಮೆಷನರಿಯನ್ನು ಪರ್ಚೇಜ ಮಾಡಿದ ಡೇಟನ್ನಾದರೂ ಕೊಡಲಿ.

ಶ್ರೀ ಕೆ. ಎಚ್. ಪಾಟೀಲ.—ಆ ರೀತಿಯಾಗಿ ಅದು ನಾನು ಮಂತ್ರಿಯಾದ ಮೇಲೆ ಪರ್ಚೇಜ ಮಾಡಿದೆ ಎಂಬುದಾಗಿ ಯಾರಾದರೂ ಸದಸ್ಯರು ಪ್ರೂವ ಮಾಡಿ ತಂದುಕೊಟ್ಟಲ್ಲಿ, ಅದನ್ನು ನಾನು ಸ್ವಾಗತಿಸುತ್ತೇನೆ. ಆಗ ಅದು ನಿಜವೋ ಅಲ್ಲವೋ ಎಂಬುದು ಗೊತ್ತಾಗುತ್ತದೆ. ನಾನು ಈಗಾಗಲೇ ಅನೇಕ ಸಹಕಾರ ಸಂಘಗಳಲ್ಲಿ ಕೆಲಸ ಮಾಡಿದ್ದೇನೆ. ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಈ ರೀತಿಯಾಗಿ ನನ್ನ ಮೇಲೆ ಅಪಾದನೆಗಳನ್ನು ಹೊರಿಸುವುದರಿಂದ ಏನೂ ಅವರಿಗೆ ಪ್ರಯೋಜನವಾಗುವುದಿಲ್ಲ. ಇದಕ್ಕಿಂತ ಹೆಚ್ಚಿಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಹೇಳಿದ್ದನ್ನು ನಾವು ಕೇಳಲಾರೆವು. ಅವರೇ ಪಾಲುಗಾರರಾಗಿದ್ದರೆಂದು ಹೇಳಿದರು. ಆದಕ್ಕೋಸ್ಕರ ಅವರೇ ನಾವು ಕೇಳುವ ಪ್ರಶ್ನೆಗೆ ಉತ್ತರ ಹೇಳಲಿ.

ಅಧ್ಯಕ್ಷರು.—ಅದರ ವ್ಯವಹಾರ ಮೊದಲೇ ಮುಗಿಸಿದ್ದೇನೆಂದು ಹೇಳಿದರು.

ಮಾನ್ಯ ಸದಸ್ಯರಿಗೆ ಆ ವಿಷಯ ಸರಿಯಾಗಿ ಗೊತ್ತಿಲ್ಲದೇ ಇದ್ದರೆ, ಮಂತ್ರಿಗಳು ಹೇಳಿದ್ದನ್ನಾದರೂ ಕೇಳಲಿ.

ಶ್ರೀ ಕೆ. ಎಚ್. ಪಾಟೀಲ.—ನಾನು ಈ ಸದನದ ಸದಸ್ಯನಾಗುವ ಪೂರ್ವದಲ್ಲಿ ಅದನ್ನು ಬಿಟ್ಟಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಖಾಸಗಿ ಸಂಸ್ಥೆಯವರು ೪ ಲಕ್ಷ ಲಂ ಸಾವಿರ ರೂಪಾಯಿಗಳಷ್ಟು ಮೆಷನರಿಗಳನ್ನು ಇವರು ಕೃಷಿ ಮಂತ್ರಿಗಳಾದ ಮೇಲೆ ಆ ಡೈರಿಗೆ ಕೊಟ್ಟರೋ ಅಥವಾ ಪೂರ್ವಭಾವಿಯಾಗಿಯೇ ಕೊಟ್ಟರೋ?

ಶ್ರೀ ಕೆ. ಎಚ್. ಪಾಟೀಲ.—ಆ ವಿಷಯಗಳ ಬಗ್ಗೆ ನಾನು ರೆಫರೆನ್ಸ್ ನೋಡಿ ಹೇಳಬೇಕಾಗಿದೆ. ನೀವು ನನಗೆ ರೆಫರಮಾಡಿ, ನಾನು ಹೇಳುತ್ತೇನೆ.

ಅಧ್ಯಕ್ಷರು.—ತಾವು ಪರ್ಸನಲ್ ಎಕ್ಸ್‌ಪ್ಲೆನೇಷನ್ ಕೊಡುತ್ತೀರೋ?

Sri KAGODU THIMMAPPA.—He has volunteered himself to give a reply.

Sri K. H. PATIL.—The Hon'ble Members Sri J. L. Kabadi,and Sri Kagodu Thimmappa made a reference to me and I am not here to shut my mouht.

ಅಧ್ಯಕ್ಷರು.—ತಮಗೆ ಸರ್ಕಾರದ ವತಿಯಿಂದ ಇದರ ಬಗ್ಗೆ ಜವಾಬು ಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಅನ್ಯಾಯವಾಗಿ ನನ್ನ ಹೆಸರನ್ನು ಹೇಳಿದರೆಂದು ಹೇಳಿದರು. ನನಗೆ ಗೊತ್ತಿದೆ. ಅವರು ಈ ಸೊಸೈಟಿಗೆ ಆ ಡೈರಿ ಸಂಸ್ಥೆಯನ್ನು ಸ್ಥಾಪನೆ ಮಾಡುವುದಕ್ಕೆ ಮುಂಚೆಯೇ ಪಾಲುಗಾರರಾಗಿದ್ದರು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಅದನ್ನು ಇಲ್ಲವೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳಿ. ಒಂದು ವೇಳೆ ನೀವು ಒಪ್ಪಿಕೊಳ್ಳದೇ ಇದ್ದರೆ, ಅದನ್ನು ಪ್ರೂವ್ ಮಾಡಿ.

ಶ್ರೀ ಎ. ಶಂಕರ ಆಳ್ವ (ಸಹಕಾರ ಶಾಖೆಯ ಮಂತ್ರಿಗಳು).—ಸನ್ಮಾನಿಸಿ ಅಧ್ಯಕ್ಷರೇ, ಈ ಒಂದು ವಿಷಯವನ್ನು ಬಹಳ ಬಹಳ ಸಾರಿ ಒತ್ತಿ ಹೇಳಿದರೆ ಅದು ಸತ್ಯವಾಗಿ ಹೊರಗಡೆ ಬರುತ್ತದೆಯೆ ಎಂದು ನಾನು ಕೇಳಬೇಕಾದ ಸಂದರ್ಭ ಈಗ ಬಂದಿದೆ. ಹಿಂದೆ ಹಿಟ್ಲರ ಕಾಲದಲ್ಲಿ ಯಾರೋ ಒಬ್ಬರು ಸತ್ಯಕ್ಕೆ ದೂರವಾದ ವಿಷಯಗಳನ್ನು ಪದೇ ಪದೇ ಹೇಳುತ್ತಾ ಹೋದರೆ, ನಿಜವಾಗಿಯೂ ಅದು ಸತ್ಯವಾಗಿ ಪರಿಗಣಿಸುವುದಕ್ಕೆ ಸಾಧ್ಯವೇ ಎಂದು ಹೇಳಿದ್ದಾರೆ. ಆದ್ದರಿಂದ ಈಗ ಅನೇಕ ಸಂದರ್ಭಗಳಲ್ಲಿ ಈ ವಿಷಯವನ್ನು ಈ ಸದನದಲ್ಲಿಯೂ ಹಾಗೂ ವಿಧಾನ ಪರಿಷತ್ತಿನಲ್ಲಿಯೂ ಅನೇಕ ಸದಸ್ಯರು ಒತ್ತಾಯ ಮಾಡಿ ಹೇಳಿದ್ದಾರೆ. ಆಗ ಸಹಕಾರ ಮಂತ್ರಿಗಳಾಗಿ ನಾನು ಸಹಕಾರ ಸಂಸ್ಥೆಗೆ ಸಂಬಂಧಪಟ್ಟಂಥ ವಿಷಯಗಳ ಬಗ್ಗೆ ವಿವರಣೆ

ನೀಡಿದ್ದೇನೆ. ಆದರೆ ಬೇರೆ ಖಾಸಗೀ ಸಂಸ್ಥೆಗಳ ಬಗ್ಗೆ ನಾನು ಹೇಳುವುದಕ್ಕೆ ನನಗೆ ಹಕ್ಕು ಇರುವುದಿಲ್ಲ. ಅವರು ಅವರ ಸಂಸ್ಥೆಯನ್ನು ಈ ರೀತಿಯಲ್ಲಿ, ಆ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆಂದು ಹೇಳುವ ಅಗತ್ಯವಿರುವುದಿಲ್ಲ. ಕೃಷ್ಣಾ ಡೈರಿ ವಿಷಯದಲ್ಲಿ ಹೇಳುವುದಾದರೆ, ೯.೭೪ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಪ್ರಾಜೆಕ್ಟ ರಿಪೋರ್ಟನ್ನು ಅಲ್ಲಿ ತಯಾರುಮಾಡಿದ್ದಾರೆ. ಅದು ಅಪ್ರೂವ್ ಆಗಿಯೂ ಬಂದಿದೆ. ಇದರಲ್ಲಿ ೭ ಲಕ್ಷ ೩೦ ಸಾವಿರ ರೂಪಾಯಿಗಳನ್ನು ಎನ್. ಸಿ. ಡಿ. ಸಿ. ಅವರು ಬ್ಲಾಕ್ ಗ್ರ್ಯಾಂಟಾಗಿ ಕೊಡುವುದಕ್ಕೆ ಒಪ್ಪಿದ್ದಾರೆ ಮತ್ತು ಸರ್ಕಾರದವರು ಅದರಲ್ಲಿ ಇಷ್ಟು ಷೇರ ಕ್ಯಾಪಿಟಲ್ ಕಲೆಕ್ಟ್ ಮಾಡಿದರೆ ಅದನ್ನೂ ರಿಲೀಜ ಮಾಡ ಬೇಕೆಂದು ಒಪ್ಪಿಕೊಂಡಿದ್ದಾರೆ. ಇಷ್ಟರ ವರೆಗೆ ಒಂದು ಲಕ್ಷ ಎರಡು ಸಾವಿರ ರೂಪಾಯಿಗಳವರೆಗೆ ಕಲೆಕ್ಟ ಮಾಡಿದ್ದಾರೆ. ಅದಕ್ಕಾಗಿ ೬.೫೫ ಲಕ್ಷ ರೂಪಾಯಿಗಳನ್ನು ಅಂದರೆ ಅರ್ಧ ಗ್ರಾಂಟನ್ನು ಮಂಜೂರು ಮಾಡಿದ್ದಾರೆ. ಅದು ಹೇಗಂದರೆ, As per the pattern of assistanee of Central Sector schemes of reimbursement 50 per cent of the loan amounting to Rs. 3.65 lakhs was released and 50 per cent of the Government's share capital amounting to Rs. 81,500 was sanctioned under Government Order dated 5-1-1972 and release of second instalment of 50 per cent of loan, was done. ಇಷ್ಟು ಹಣವನ್ನು ರಿಲೀಜ ಮಾಡಿದ್ದಾರೆ. ಈ ಕೊ-ಆಪರೇಟಿವ್ ಸೊಸೈಟಿಯವರು ಈ ಮೆಷನರಿಗಳನ್ನು ಕೃಷ್ಣಾ ಡೈರಿಗೆ ೪ ಲಕ್ಷ ೮೦ ಸಾವಿರ ರೂಪಾಯಿಗಳಿಗೆ ಪಡೆದುಕೊಂಡರು.

ಶ್ರೀ ಕಾಗೋಡು ತಿಮ್ಮಪ್ಪ.—ಯಾವಾಗ ?

ಶ್ರೀ ಎ. ಶಂಕರ ಆಳ್ವ.—ಡೇಟ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ಅವರು ಕೊಟೇಷನ್ಸ ಕಳುಹಿಸಿಕೊಡಿ ಎಂದು ಫೆಬ್ರುವರಿಯಲ್ಲಿ ಕೇಳಿದ್ದಾರೆ. ಅದು ೪ ಲಕ್ಷ ೮೫ ಸಾವಿರ ರೂಪಾಯಿಗಳು ಎಕ್ಸ್ ಗೋಡೌನ್, ಬೊಂಬಾಯಿ. ಟ್ರಾನ್ಸ್ ಪೋರ್ಟ ಚಾರ್ಜಸ್ ಸೇಕಡ ೬ ರಿಂದ ೭ಕ್ಕೆ ಬರುತ್ತದೆ. ಎರೆಕ್ಷನ್ ಅಂಡ್ ಅದರ್ ಇನ್‌ಸ್ಟಲೇಷನ್ ಚಾರ್ಜಸ್ ಸೇಕಡ ೭ ರಿಂದ ೮ರಷ್ಟು ಬರುತ್ತದೆ. ಸಾಧಾರಣವಾಗಿ ಅದನ್ನು ಅಲ್ಲಿ ಎರೆಕ್ಟ ಮಾಡಬೇಕಾದರೆ ೫ ಲಕ್ಷ ೫೦ ಸಾವಿರ ರೂಪಾಯಿಗಳಾಗುತ್ತ ದೆಂದು ಒಂದು ಕೊಟೇಷನ್ ಸಹ ಬಂತು. ಆದರೆ ಅಲ್ಲಿ ಅವರು ಆ ಮೆಷನರಿ ಯನ್ನು ೪ ಲಕ್ಷ ೮೦ ಸಾವಿರ ರೂಪಾಯಿಗಳಂತೆ ತೆಗೆದುಕೊಳ್ಳಬೇಕೆಂದು ಅಲ್ಲಿನ ಧಾರವಾಡ ಡೈರಿ ಎಕ್ಸ್‌ಪರ್ಟ ಅವರು ವ್ಯಾಲ್ಯುವೇಷನ್ ಮಾಡಿ ಅಷ್ಟಕ್ಕೆ ಒಪ್ಪಿ ಕೊಂಡರು.

ಶ್ರೀ ಕಾಗೋಡು ತಿಮ್ಮಪ್ಪ.—ಡೈರಿ ಎಕ್ಸ್‌ಪರ್ಟ ಅವರು ಅಂದರೆ ಖಾಸಗೀ ಯವರೇ? ಅಥವಾ ಯಾರು?

ಶ್ರೀ ಎ. ಶಂಕರ ಆಳ್ವ.—ನಮ್ಮ ಡೈರಿಯವರು. ಸರ್ಕಾರಕ್ಕೆ ಸಂಬಂಧ ಪಟ್ಟವರೇ. ಅದರಲ್ಲ ಎರಡು ವಿಧಗಳುಂಟು. The Superintendent of Government Dairy, Dharwar ಅವರಿಂದ ಸರ್ಟಿಫಿಕೇಟ ತೆಗೆದುಕೊಂಡು ಮೆಷನರಿ ೧೦ ವರ್ಷಗಳ ವರೆಗೆ ಚೆನ್ನಾಗಿ ನಡೆಯುತ್ತದೆಂದು ಹೇಳಿದ ಮೇಲೆ ಅಷ್ಟಕ್ಕೇ ಅದನ್ನು ಅವರು ಪಡೆದುಕೊಂಡರು. ಇವರು ಟೆಕ್ನಿಕಲ್ ಮ್ಯಾನ. ಅಲ್ಲಿ ಏನಾಗಿದೆ ಯೆಂದರೆ, They wanted to start the work early. ಅವರಿಗೆ ಆ ಮೆಷನರಿಯನ್ನು ತೆಗೆದುಕೊಳ್ಳಲು ಡೈರಿಯಿಂದ ಆರ್ಡರ ಕೊಟ್ಟಾದರೂ ಅದು ಅವರಿಗೆ ಸಮಯಕ್ಕೆ ಸಿಗದೆ ಇನ್ನೂ ೯–೧೦ ತಿಂಗಳುಗಳಾದರೂ ಆಗಬಹುದೆಂದು ಹೇಳಿದ್ದಾರೆ. ಅಷ್ಟರೊಳಗೆ ಅದು ಸಿಗುವುದಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಮೆಷನರಿ ಡೈರಿ ಯವರು ಪಡೆದುಕೊಂಡಿದ್ದು ಅವರು ಅದನ್ನು ಚೆನ್ನಾಗಿ ಪರಿಶೀಲೆ ಮಾಡಿದ್ದಾರೆ. ಅದರಲ್ಲಿ ನನಗೆ ಯಾವ ಇಂಟರೆಸ್ಟ ಸಹ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವತ್ತು ಅದನ್ನು ತಂದುದು?

ಶ್ರೀ ಎ. ಶಂಕರ ಆಳ್ವ —ನಾನು ಮೊದಲೇ ಹೇಳಿದ ಹಾಗೆ ಇದು ಪ್ರೈವೇಟ್ ಪಾರ್ಟಿಯವರ ವಿಷಯ. ಡೈರಿ ಇಲಾಖೆಗೆ ಸಂಬಂಧಪಟ್ಟ ಡೈರೆಕ್ಟರ್ ಅವರು ನೋಡಿ ಅದನ್ನು ಅಷ್ಟಕ್ಕೆ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ೧೦ ವರ್ಷಗಳ ವರೆಗೆ ಸರಿಯಾಗಿ ಕೆಲಸ ಮಾಡುತ್ತದೆಂದು ಹೇಳಿದ ಮೇಲೆ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಅವರು ಯಾವ ತಾರೀಖಿನಲ್ಲಿ ಸರ್ಟಿಫೈ ಮಾಡಿದ್ದಾರೆ?

ಶ್ರೀ ಎ. ಶಂಕರ ಆಳ್ವ.—ನನಗೆ ಈಗ ಎಲ್ಲವನ್ನೂ ಡಿಟೇಲಾಗಿ ಹೇಳುವದಕ್ಕೆ ಕಷ್ಟ. ಸಾಧ್ಯವಾಗುವುದಿಲ್ಲ. ಯಾವಾಗ ಎಂದು ಅವರು ಮೊದಲೇ ಕೇಳಿದ್ದರೆ ಹೇಳ ಬಹುದಾಗಿತ್ತು. ಇದರ ಬಗ್ಗೆ ಇನ್ನು ಯಾವುದಾದರೂ ವಿವರಗಳು ಬೇಕೆಂದರೆ ಅವನ್ನು ತರಿಸಿ ಕೊಡುತ್ತೇನೆ.

Sri KAGODU THIMMAPPA.–You are expected to come with all the information here.

Sri A. SHANKARA ALVA.—I am expected to come only with this information. To say that the machinery was alright and it has been certified by the expert and has valued it at Rs. 4,80,000/–.

6–30 P. M.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಸ್ಪಷ್ಟವಾದ ಒಂದು ಆಪಾದನೆಯನ್ನು ಮಾಡಿದ್ದೇನೆ. ಮಾನ್ಯ ಕೃಷಿ ಸಚಿವರು ಸಚಿವರಾದ ಮೇಲೆ ನಾಲ್ಕುಲಕ್ಷ ಲಂ ಸಾವಿರ ರೂಪಾಯಿ ಯಂತ್ರವನ್ನು ಡೈರಿಗೆ ಕೊಂಡುಕೊಂಡಿದ್ದಾರೆ. ಅದಕ್ಕೆ ಸರಿಯಾದ ಉತ್ತರ ಮಾನ್ಯ ಸಹಕಾರ ಮಂತ್ರಿಯವರಿಂದ ಬರುತ್ತಾ ಇಲ್ಲ.

ಶ್ರೀ ಎ ಶಂಕರ ಆಳ್ವ.—ಅದರ ಅಗತ್ಯವೇನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಅಪಾದನೆ ಸುಳ್ಳು ಅಂದರೆ ನಾವು ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಇವರು ಸಚಿವರಾದ ಮೇಲೆ ಅದನ್ನು ಮಾಡಿದ್ದಾರೆ. ಅದಕ್ಕೋಸ್ಕರ ಮಾನ್ಯ ಸಹಕಾರ ಸಚಿವರು ಅದನ್ನು ಯಾವ ತಾರೀಕು ಮತ್ತು ಯಾವ ದಿವಸ ಪರ್ಚೇಸ್ ಮಾಡಿದ್ದಾರೆಂಬುದನ್ನು ಹೇಳಲಿ. ಅದಕ್ಕೆ ಕೊಟ್ಟ ಹಣದ ರಶೀದಿ ತಾರೀಕು ಇದ್ದರೆ ಅದನ್ನು ಹೇಳಲಿ.

Sri D. B. KALMANKAR.—Once the Minister has made a statement, it should be taken as all right.

Sri A. SHANKARA ALVA.—My submission is this: We have to see whether this co-operative society has purchased any machine for a larger amount than it was actually worth, whether there was any misappropriation or undue pressure brought forth by anybody. I can understand all these things. It is a question of audit. The accounts have not been audited till now. As far as this affair is concerned, the Government of India (NC DC) has released about 3.65 lakhs. The State Government have released Rs. 81,500 towards its share capital. The society has purchased machinery worth Rs. 4.80 lakhs. The only point is whether the society was justified in purchasing this machine, whether it was prudent or whether they have tried to get any other machine for a lesser price. The society has purchased and they have installed this machine and started chilling and bottling. After the Inspector of Boilers inspects the factory will start other operations. If the Auditor finds anything wrong, in the transactions surely suitable action will be taken. As far as I could see they have taken precaution and the Superintendent of Diary has given his opinion to that effect and it is all right.

Sri KAGODU THIMMAPPA.—What is the date of purchase?

Sri A. SHANKAR ALVA.—I will give it.

ಶ್ರೀ ಕಾಗೋಡು ತಿಮ್ಮಪ್ಪ.—ಕೆ. ಎಚ್. ಪಾಟೀಲರು ಮಂತ್ರಿಯಾಗುವುದಕ್ಕೆ ಮುಂಚೆ ಪರ್ಚೇಸ್ ಮಾಡಿದ್ದಾರೆಯೇ ಅಥವಾ ಮಂತ್ರಿಯಾದ ಮೇಲೆ ಮಾಡಿದ್ದಾರೆಯೇ?

Sri A. SHANKAR ALVA.—He himself has made a statement.

Sri K. H. PATIL.—Proir to my becoming the Minister it was negotiated and settled.

ಶ್ರೀ ಕಾಗೋಡು ತಿಮ್ಮಪ್ಪ.—ಸೆಟ್ಲ್‌ಮೆಂಟ್ ಯಾವಾಗ ಬೇಕಾದರೂ ಆಗಬಹುದು. There is a lot of difference between settltment and purchase. Actually purchase takes place the moment they make payment.

ಶ್ರೀ ಎ. ಶಂಕರ ಆಳ್ವ.—ಮಾನ್ಯ ಕೃಷಿ ಮಂತ್ರಿಯವರು ಅದನ್ನು ಹೇಳಿದ್ದಾರೆ. ಇದರ ಬಗ್ಗೆ ನಿಮಗೆ ಯಾವ ಮಾಹಿತಿ ಬೇಕಾದರೂ ಕೊಡಬಹುದು.

Sri KAGODU THIMMAPPA.— Purchase means when actually payment is made.

Sri K.H. PATIL.–For the information of the hon. member I would like to answer. The hon. members are anxious to know whether the Minister for Agriculture has used undue influence to settle this purchase. I am thankful to the officers who have supplied me the information. The actual bargain was settled and purchase was completed for Rs. 4.80 lakhs on 24–2–1972 and purchased materials were supplied to the NCDC, on the basis of which the amount has been sanctioned. When some hon. members were raising objections without knowing the facts, the Hon. Minister for Co-operation stated that he would get the matter thoroughly examined. He was satisfied that the materials purchased were new ones and they were purchased much cheaper than other makes. Only after being satisfied 50% of the amount was released.

MADAM SPEAKER.—The House will now adjourn and meet tomorrow at 9 a. m.

The House adjourned at Thirty Eight Minutes past Six of the clock to meet again at Nine of the clock on Saturday 22nd September 1973.